ಡಿಸೆಂಬರ್ 8, 2024

40ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1962

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ತನ್ನ ಹಾದರಕ್ಕೆ ಅಡ್ಡ ಬಂದ ಗಂಡನನ್ನು

ರೋಚಕ ವರದಿ

## ಪ್ರಿಯಕರನಿಂದ ಕೊಲೆ ಮಾಡಿಸಿದ ಪಾಪಗಿತ್ತಿ ಹೆಂಡತಿ!





## ಬಿಜೆಪಿ ಮಕಾಡೆ ಮಲಗಲು ಯತ್ನಾಳ್ ಸಾಕು!

## ಆಸ್ತಿಗಾಗಿ ಅತ್ತೆಯ ಕತ್ತು ಕೊಯ್ದ ಅಳಿಯ!





## ಕಲಬುರಗಿ: ಪುಡಿ ರೌಡಿ ಕೊಂದ ಪಾತಕಿಗಳು!

## ಅಕ್ರಮವಾಗಿ ಗಾಂಜಾ ಬೆಳೆದಿದ್ದ ಐನಾತಿ ರೈತ ಅರೆಸ್ಟ್!



**ರಾಜ್ಯ ಬಿಜೆಪಿ ಪಾಲಿಗೆ ಬಸವನಗೌಡ ಯತ್ನಾಳ್ ಬಿಸಿ ತುಪ್ಪವಾಗಿದ್ದಾರೆ. ಗಂಟಲಲ್ಲಿ ಇಟ್ಟುಕೊಳ್ಳುವಂತೆಯೂ ಇಲ್ಲ, ಉಗುಳುವಂತೆಯೂ ಇಲ್ಲ. ಹೀಗಾಗಿ ಅವರು ಕಳೆದ ಹಲವು ವರ್ಷಗಳಿಂದ ಸ್ವಪಕ್ಷದ ನಾಯಕರ ವಿರುದ್ಧ ಡ್ಯಾಮೇಜ್ ಸ್ಟೇಟ್ ಮೆಂಟ್‌ಗಳನ್ನು ಕೊಟ್ಟಿದ್ದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಇವತ್ತು ಪಕ್ಷ ಬಣಗಳಾಗಿ ಬಡಿದಾಡುವ ಮಟ್ಟಕ್ಕೆ ಬಂದು ನಿಂತಿದೆ. ಮುಂದೆ ಬಿಜೆಪಿ ಕಥೆ ಏನಾಗಬಹುದು ಎಂಬುದು ಕುತೂಹಲಕ್ಕೆ ಎಡೆ ಮಾಡಿದೆ.**

# ಬಿಜೆಪಿ ಮಕಾಡೆ ಮಲಗಲು ಯತ್ನಾಳ್ ಸಾಕು!

**✍ಬಿ.ಎಂ. ಲವಕುಮಾರ್**

ಶಿಸ್ತಿನ ಪಕ್ಷ ಎಂದು ಬಡಾಯಿಕೊಚ್ಚಿಕೊಳ್ಳುತ್ತಿರುವ ರಾಜ್ಯ ಬಿಜೆಪಿಯಲ್ಲಿ ವಿಜಯೇಂದ್ರ ವರ್ಸಸ್ ಯತ್ನಾಳ್ ಬಣಬಡಿದಾಟ ಜೋರಾಗಿದ್ದು, ರಾಜ್ಯ ನಾಯಕರಿರಲಿ, ಹೈಕಮಾಂಡ್ ಕೂಡ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡದೆ ತೆಪ್ಪಗೆ ಕುಳಿತಿರುವುದನ್ನು ಗಮನಿಸಿದರೆ ಅಚ್ಚರಿ ಮೂಡುತ್ತಿದ್ದು, ರಾಜ್ಯ ಬಿಜೆಪಿಯಲ್ಲಿ ಏನಾಗುತ್ತಿದೆ ಎಂಬ ಪ್ರಶ್ನೆ ಎದ್ದು ನಿಂತಿದೆ. ಇದು ಹೀಗೆಯೇ ಮುಂದುವರೆದರೆ ರಾಜ್ಯದಲ್ಲಿ ಬಿಜೆಪಿ ಮೂಲೆ ಗುಂಪಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಪ್ರಧಾನಿ ನರೇಂದ್ರಮೋದಿ ಕಾಂಗ್ರೆಸ್ ಮುಕ್ತ ಮಾಡುವ ಕುರಿತಂತೆ ಕರೆಗಳನ್ನು ನೀಡುತ್ತಿದ್ದರು. ಆದರೆ ಕರ್ನಾಟಕದ ಮಟ್ಟಿಗೆ ಅದನ್ನು ಬಿಜೆಪಿಯ ನಾಯಕ, ಹಿರಿಯ ಶಾಸಕ ಬಸವನಗೌಡ ಯತ್ನಾಳ್ ಅವರೇ ಮಾಡಿಬಿಡುತ್ತಾರಾ? ಎಂಬ ಸಂದೇಹ ಮೂಡಿದೆ. ಅವರು ಯಡಿಯೂರಪ್ಪ ಮತ್ತು ವಿಜಯೇಂದ್ರರ ಕುರಿತು ಹೇಳಿಕೆಗಳನ್ನು ಇದುವರೆಗೆ ನೀಡುತ್ತಾ ಬಂದಿದ್ದಾರೆ. ಆದರೆ ಆ ಹೇಳಿಕೆಗಳಿಂದ ಯಡಿಯೂರಪ್ಪ ಮತ್ತು ವಿಜಯೇಂದ್ರರಿಗೆ ಏನಾಗಿದೆಯೋ ಗೊತ್ತಿಲ್ಲ, ಆದರೆ ಬಿಜೆಪಿಗೆ ದೊಡ್ಡಮಟ್ಟದಲ್ಲಿ ಹೊಡೆತ ಬಿದ್ದಿದೆ. ಹಾಗೆಯೇ ಕಾಂಗ್ರೆಸ್ ಗೂ ಬಹಳಷ್ಟು ಅಸ್ತ್ರಗಳನ್ನು ಯತ್ನಾಳ್ ಅವರೇ ಕೊಟ್ಟಿದ್ದಾರೆ.

ಬಿಜೆಪಿಯ ಹೈಕಮಾಂಡ್ ಬಸವನಗೌಡ ಪಾಟೀಲ್ ಅವರ ವಿರುದ್ಧ ಯಾವುದೇ ರೀತಿಯ ಕ್ರಮ ಕೈಗೊಂಡರೂ ಅದರಿಂದ ಯಾವುದೇ ಪ್ರಯೋಜನವಾಗಲಾರದು. ಅವರನ್ನು ಪಕ್ಷದಿಂದ ಉಚ್ಚಾಟಿಸಿದರೆ ಇನ್ನಷ್ಟು ರೆಬಲ್



ಆಗಲಿದ್ದು ಆಗ ಪಕ್ಷದ ವಿರುದ್ಧ ತಿರುಗಿ ಬೀಳಬಹುದು, ಒಂದು ವೇಳೆ ಬುದ್ಧಿವಾದ ಹೇಳಿ ಎರಡು ಬಣಗಳನ್ನು ಒಂದು ಮಾಡುವ ಪ್ರಯತ್ನ ಮಾಡಿದರೆ ಅವರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದಂತೆ ಕೇಳಿಕೊಂಡು ಹೋಗುವುದಂತು ಇಲ್ಲವೇ ಇಲ್ಲ. ಏನೇ ಹೇಳಿದರೂ ಯತ್ನಾಳ್ ಅವರ ಬಾಯಿ ಮುಚ್ಚಿಸಿ ತೆಪ್ಪಗೆ ಕೂರಿಸುವ ಪ್ರಯತ್ನ ಯಾರಿಂದಲೂ ಸಾಧ್ಯವಾಗದು.

ಅತ್ತ ಪ್ರಧಾನಿ ನರೇಂದ್ರ ಮೋದಿ ದೇಶದಾದ್ಯಂತ ಸುತ್ತಾಡುತ್ತಾ ಪಕ್ಷದ ಬಲವರ್ಧನೆಗೆ ಹಗಲು ಇರುಳೆನ್ನದೆ ಶ್ರಮಿಸುತ್ತಿದ್ದಾರೆ. ಲೋಕ ಸಭೆಯಿರಲಿ, ರಾಜ್ಯ ವಿಧಾನಸಭಾ ಚುನಾವಣೆಯಿರಲಿ ಬಿಜೆಪಿ ಗೆಲ್ಲಬೇಕಾದರೆ ಮೋದಿ ಬರಲೇ ಬೇಕಾಗಿದೆ. ಇದೆಲ್ಲದರ ನಡುವೆ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮೋದಿ ಪಠಿಸಿದ ಮಂತ್ರ ಫಲಿಸಿದೆ. ಹೀಗಾಗಿ ನಿರೀಕ್ಷೆ ಮಾಡದ ಗೆಲುವನ್ನು ಅಲ್ಲಿ ಪಡೆಯಲು ಸಾಧ್ಯವಾಗಿದೆ. ಆದರೆ ಮಹಾರಾಷ್ಟ್ರದಲ್ಲಿ ಒಗ್ಗಟ್ಟು ಮೂಡಿಸಿದ ನಾವು ಒಗ್ಗಟ್ಟಾಗಿದ್ದರೆ ಮಾತ್ರ ಸುರಕ್ಷಿತ ಎಂಬ ಮೋದಿ ಮಂತ್ರ ಕರ್ನಾಟಕದಲ್ಲಿ ಏಕೆ ಫಲಕೊಡುತ್ತಿಲ್ಲ? ಯತ್ನಾಳ್ ಏಕೆ ರಾಜಿಯಾಗುತ್ತಿಲ್ಲ ಎಂಬುದೇ ಕುತೂಹಲಕಾರಿಯಾಗಿದೆ.

**ಗೆಲ್ಲಿಸೋದಕ್ಕೆ ಮೋದಿಯೇ ಬರಬೇಕಾ?**

ಇವತ್ತು ರಾಜ್ಯ ಬಿಜೆಪಿಯ ನಾಯಕರು ಒಗ್ಗಟ್ಟು ಪ್ರದರ್ಶಿಸುವಲ್ಲಿ ವಿಫಲರಾಗಿದ್ದಾರೆ. ಅಷ್ಟೇ ಅಲ್ಲದೆ ಎಲ್ಲರನ್ನೂ ಒಂದೆಡೆ ಸೇರಿಸಿ ಒಟ್ಟಾಗಿ ಕರೆದುಕೊಂಡು ಹೋಗುವ ಸಾಮರ್ಥ್ಯ ರಾಜ್ಯದ ಯಾವ ನಾಯಕನಲ್ಲಿಯೂ ಇಲ್ಲದಾಗಿದೆ. ಎಲ್ಲರೂ ತಾವೇ ನಾಯಕರೆಂಬಂತೆ ಬಿಂಬಿಸುತ್ತಿದ್ದಾರೆಯಾದರೂ ಇಡೀ ಪಕ್ಷವನ್ನು ಒಟ್ಟಾಗಿ ಕರೆದೊಯ್ದು ಗೆಲ್ಲಿಸಿಕೊಂಡು ಬರುವ ತಾಕತ್ ಯಾರಿಗೂ ಇಲ್ಲವಾಗಿದೆ. ಹೀಗಾಗಿಯೇ ಪಕ್ಷ ಸೋಲುತ್ತಿದೆ. ಹಿರಿಯ ನಾಯಕ ಮತ್ತು ಬಿಜೆಪಿಯನ್ನು ತಳಮಟ್ಟದಿಂದ ಕಟ್ಟಿ ಬೆಳೆಸಿದ ಬಿ.ಎಸ್. ಯಡಿಯೂರಪ್ಪ ಮತ್ತು ಈಶ್ವರಪ್ಪ ಪರಸ್ಪರ ಶತ್ರುಗಳಾಗಿದ್ದಾರೆ. ಶತ್ರುವಿನ ಶತ್ರು ಮತ್ಯಾರಿಗೋ ಮಿತ್ರರಾಗುತ್ತಿದ್ದಾರೆ.



ಬಹಳಷ್ಟು ನಾಯಕರು ಅಧಿಕಾರದ ಹಪಾಹಪಿಯಲ್ಲಿದ್ದಾರೆ. ಹೀಗಾಗಿ ಅವರು ಯಾರ ಮಾತನ್ನೂ ಕೇಳದಂತಾಗಿದೆ. ಪಕ್ಷವನ್ನು ಕಟ್ಟಿ ಬೆಳೆಸಿದ ಮತ್ತು ಪಕ್ಷಕ್ಕಾಗಿ ದುಡಿದ ಪ್ರಭಾವಿ ವೀರಶೈವ ನಾಯಕರಾಗಿರುವ ಬಿ.ಎಸ್. ಯಡಿಯೂರಪ್ಪ ಅವರನ್ನು ಹೊರಗಿಟ್ಟರೆ ಪಕ್ಷದ ಮೇಲೆ ಪರಿಣಾಮವಾಗುತ್ತದೆ. ಜತೆಗೆ ಯುವ ಮತದಾರರನ್ನು ಸೆಳೆಯುವ ಸಲುವಾಗಿ ಹೈಕಮಾಂಡ್ ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರರಿಗೆ ರಾಜ್ಯದ ಸಾರಥ್ಯವನ್ನು ನೀಡಿತು. ಇವತ್ತು ಬಿಜೆಪಿಯಲ್ಲಿ ಅಸಮಾಧಾನಗಳು ಅದರಲ್ಲೂ ಯತ್ನಾಳ್ ಉರಿದು ಬೀಳಲು ಇದು ಒಂದು ಕಾರಣ ಎಂದರೆ ತಪ್ಪಾಗಲಾರದು.

ರಾಜ್ಯ ಬಿಜೆಪಿ ನಾಯಕರ ಪೈಕಿ ಒಬ್ಬರೋ ಇಬ್ಬರನ್ನು ಹೊರತು ಪಡಿಸಿದರೆ ಉಳಿದ ಬಹುತೇಕರಿಗೆ ಪಕ್ಕದ ಕ್ಷೇತ್ರವನ್ನು ಗೆಲ್ಲಿಸಿಕೊಂಡು ಬರುವುದಿರಲಿ ತಾವೇ ಗೆಲ್ಲುವುದೇ ಕಷ್ಟವಾಗಿದೆ. ಇಂತಹವರೆಲ್ಲರೂ ರಾಜ್ಯಾಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟು ದ್ವೇಷದ, ಬಂಡಾಯದ ರಾಜಕಾರಣ ಮಾಡುತ್ತಿದ್ದಾರೆ. ಇವರು ಗೆಲ್ಲಬೇಕಾದರೆ ಮೋದಿ ಬರಬೇಕಾದ ಸ್ಥಿತಿಯಲ್ಲಿದ್ದಾರೆ. ಹೀಗಿರುವಾಗ ಎಷ್ಟು ದಿನ ಮೋದಿಯನ್ನು ತೋರಿಸಿ ಮತ ಪಡೆಯುತ್ತೀರಾ? ಎಂಬುದು ಜನವಲಯದಲ್ಲಿ ಕೇಳಿ ಬರುತ್ತಿರುವ ಪ್ರಶ್ನೆಯಾಗಿದೆ.

**ಬಿಜೆಪಿಯಲ್ಲಿ ವಿಜಯೇಂದ್ರ ವರ್ಸಸ್ ಯತ್ನಾಳ್**

ಗೆಲುವಿಗೆ ಮೋದಿಯೇ ಬರಬೇಕಾದರೆ ರಾಜ್ಯ ನಾಯಕರ ಶ್ರಮ, ಸಾಮರ್ಥ್ಯವೇನು? ಹೋಗಲಿ ಮೋದಿ ಹೇಳಿಕೊಟ್ಟ ಮಂತ್ರಕ್ಕಾದರೂ ಬಿಡಿಗಾಸು ಬೆಲೆಯನ್ನು ನೀಡುತ್ತಿದ್ದಿರಾ? ಅದು ಇಲ್ಲ, ಹೀಗಾಗಿಯೇ ರಾಜ್ಯದಲ್ಲಿ ಬಿಜೆಪಿ ಹಳ್ಳ ಹಿಡಿಯುವ ಲಕ್ಷಣಗಳು ಕಾಣಿಸುತ್ತಿದೆ. ಸಣ್ಣಪುಟ್ಟ ನಾಯಕರು ಬಣ ಬಡಿದಾಟದಲ್ಲಿ ವಿಜಯೆಂದ್ರ ಮತ್ತು ಯತ್ನಾಳ್ ನಡುವೆ ಯಾರ ಪರ ನಿಲ್ಲಬೇಕೆಂಬುದು ಗೊತ್ತಾಗದೆ ಪರದಾಡುತ್ತಿದ್ದಾರೆ. ಇನ್ನು ಪಕ್ಷ ನಿಷ್ಠ ಕಾರ್ಯಕರ್ತರನ್ನು ಕೇಳೋರೇ ಇಲ್ಲದಾಗಿದೆ.

ಬೇರೆ ರಾಜ್ಯಗಳಲ್ಲಿ ಬಿಜೆಪಿ ಒಗ್ಗಟ್ಟಾಗಿ ಹೋರಾಟ ಮಾಡುತ್ತಾ ಅಧಿಕಾರ ಪಡೆದುಕೊಂಡಿದ್ದರೆ, ರಾಜ್ಯದಲ್ಲಿ ಮಾತ್ರ ಪಕ್ಷ ಒಡೆದ ಕನ್ನಡಿಯಾಗಿದೆ. ಇಲ್ಲಿ ಮೋದಿಯ ನಾವು ಒಗ್ಗಟ್ಟಾಗಿದ್ದರೆ ಮಾತ್ರ ಸುರಕ್ಷಿತ ಎಂಬ ಘೋಷ ಮಂತ್ರ ಗೌಣವಾಗಿದೆ. ಮೂಲ ಬಿಜೆಪಿಯಿಂದ ಬಸವನಗೌಡ ಯತ್ನಾಳ್ ಬಣವಾಗಿ ಹೊರಹೊಮ್ಮಿದ್ದಾರೆ. ಅವರು ಪಕ್ಷದಲ್ಲಿ ಸೂಕ್ತ ಸ್ಥಾನಮಾನ ನೀಡಿಲ್ಲ ಎಂಬ ಒಂದೇ ಕಾರಣಕ್ಕೆ ಪಕ್ಷದ ನಾಯಕರ ವಿರುದ್ಧವೇ ಹೋರಾಟ ಮಾಡುತ್ತಾ ಬರುತ್ತಿದ್ದಾರೆ. ಯತ್ನಾಳ್ ಅವರ ಹೇಳಿಕೆಯಿಂದ ಸ್ವತಃ ಅವರಿಗೆಷ್ಟು ಲಾಭ, ನಷ್ಟವಾಗಿದೆಯೋ ಗೊತ್ತಿಲ್ಲ. ಆದರೆ ಬಿಜೆಪಿ ಪಕ್ಷಕ್ಕೆ ಸಾಕಷ್ಟು ಹಾನಿಯಾಗಿರುವುದರಲ್ಲಿ ಎರಡು ಮಾತಿಲ್ಲ.

ಆಡಳಿತ ರೂಢ ಕಾಂಗ್ರೆಸ್‌ಗೆ ಬಿಜೆಪಿ ಒಡೆದ ಮನೆಯಾಗಿರುವುದು ಬಹಳಷ್ಟು ಲಾಭ ತಂದು ಕೊಟ್ಟಿದೆ. ಒಂದು ವೇಳೆ ಬಿಜೆಪಿ ಬಣವಾಗಿ ಒಡೆಯದೆ ಹೋಗಿದ್ದಿದ್ದರೆ ಕಷ್ಟವಾಗುತ್ತಿತ್ತು. ಆದರೆ ಇವತ್ತು ಎತ್ತು ಏರಿಗೆ, ಕೋಣ ನೀರಿಗೆ ಎಂಬ ಸ್ಥಿತಿಯಲ್ಲಿ ಬಿಜೆಪಿ ನಾಯಕರು ಇರುವುದು ಕಾಂಗ್ರೆಸ್‌ಗೆ ಲಾಭವೇ ಆಗಿದೆ. ಕಳೆದ ಐದಾರು ವರ್ಷಗಳಲ್ಲಿ ಬಿಜೆಪಿಯ ನಾಯಕ ಮತ್ತು ಶಾಸಕ ಬಸವನಗೌಡ ಯತ್ನಾಳ್ ಅವರು ನೀಡಿದ ಹೇಳಿಕೆಗಳು ಪಕ್ಷಕ್ಕೆ ಭಾರೀ ಹೊಡೆತ ನೀಡಿದೆ.



**ಯತ್ನಾಳ್ ಸಿಡಿದೇಳಲು ಕಾರಣಗಳೇನು?**

ಬಹುಶಃ ಆರಂಭದಲ್ಲಿಯೇ ಅವರ

☞ 4

## ಯತ್ನಾಳ್‌ಗೆ ಉಚ್ಚಾಟನೆ ಹೊಸದಲ್ಲ!

ಈ ಹಿಂದೆಯೂ ಬಿಜೆಪಿಯಿಂದ ಯತ್ನಾಳ್ ಉಚ್ಚಾಟನೆಯಾಗಿದ್ದರು. ಆದರೆ ಹಲವಾರು ವಿರೋಧಗಳ ನಡುವೆಯೇ 2018ರಲ್ಲಿ ಬಿ.ಎಸ್. ಯಡಿಯೂರಪ್ಪ ರಾಜ್ಯಾಧ್ಯಕ್ಷರಾದ ಬಳಿಕ ಪಕ್ಷಕ್ಕೆ ಸೇರ್ಪಡೆಗೊಳಿಸಿದ್ದರು. ಬಸನಗೌಡ ಪಾಟೀಲ್ ಯತ್ನಾಳ್, ಬಸವರಾಜ ಪಾಟೀಲ್ ಅನ್ವರಿ, ಮಾಜಿ ಶಾಸಕ ನಾಗಪ್ಪ ಸಾಲೋನಿ, ಬಸವಕಲ್ಯಾಣ ಕ್ಷೇತ್ರದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳಲಾಗಿತ್ತು.

ಅದಕ್ಕೂ ಮೊದಲು ಬಿಜೆಪಿಯಲ್ಲಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಅವರು ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಜವಳಿ ಖಾತೆ ಸಚಿವರಾಗಿದ್ದರು. ನಂತರದ ಬೆಳವಣಿಗೆಗಳಿಂದ ಪಕ್ಷ ತೊರೆದು ಜೆಡಿಎಸ್ ಸೇರಿದ್ದರು. 2013ರ ಚುನಾವಣೆ ನಂತರ ಯತ್ನಾಳ್ ಬಿಜೆಪಿಗೆ ಮರಳಿದ್ದರು. ಆದರೆ, 2015ರಲ್ಲಿ ನಡೆದ ವಿಜಯಪುರ-ಬಾಗಲಕೋಟೆ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಿದ್ದರು. ಇದಕ್ಕಾಗಿ ಅವರನ್ನು ಪಕ್ಷದಿಂದ 6 ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿತ್ತು. ಮತ್ತೆ 2018ರಲ್ಲಿ ಬಿಜೆಪಿಗೆ ಸೇರ್ಪಡೆಗೊಳಿಸಲಾಗಿತ್ತು.

**ಆಸ್ತಿ ಮತ್ತು ಕೌಟುಂಬಿಕ ಕಲಹ ಹಿನ್ನೆಲೆಯಲ್ಲಿ ಗಂಡನ ಮನೆ ಬಿಟ್ಟು ತವರುಮನೆ ಸೇರಿಕೊಂಡಿದ್ದ ಪತ್ನಿ ಮತ್ತು ಮಗುವನ್ನು ಗಂಡನ ಜೊತೆ ಕಳುಹಿಸದಕ್ಕೆ ಕೋಪಗೊಂಡ ಅಳಿಯ ಅತ್ತೆ ಮೇಲೆ ಹಲ್ಲೆ ಮಾಡಿ ಚಾಕುವಿನಿಂದ ಕತ್ತು ಕೊಯ್ದು ಪರಾರಿಯಾಗುವಾಗ ಅಳಿಯನನ್ನು ಹಿಡಿಯಲು ಬಂದ ಮಾವನ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ ಆಂಧ್ರಪ್ರದೇಶದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಚಿಂತಾಮಣಿ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.**

# ತವರಿನಲ್ಲಿದ್ದ ಪತ್ನಿಯನ್ನು ಗಂಡನ ಮನೆಗೆ ಕಳುಹಿಸಿದಕ್ಕೆ ದ್ವೇಷದಿಂದ ಅತ್ತೆಯ ಕತ್ತು ಕೊಯ್ದ ಅಳಿಯ!



ಆರೋಪಿ ಚಂದ್ರು


ಕವಿತಮ್ಮ ಬದುಕಿದ್ದಾಗ

**ಚಿಕ್ಕಬಳ್ಳಾಪುರ**
ಕೋಲಾರ ಮಂಜು

**ಚಿಕ್ಕಬಳ್ಳಾಪುರ** ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ಅಂಬಾಜಿದುರ್ಗ ಹೋಬಳಿಗೆ ಸೇರಿದ ಬಿಂಗಾನಹಳ್ಳಿ ಗ್ರಾಮದ ವಾಸಿ ಈಶ್ವರಪ್ಪ ಮತ್ತು ಕವಿತಮ್ಮ ದಂಪತಿಗಳಿಗೆ ಮಮತಾ ಮತ್ತು ಮಧು ಎಂಬ ಇಬ್ಬರು ಮಕ್ಕಳಿದ್ದು, ಮಧು ನಗರದ 31ನೇ ವಾರ್ಡಿನ ತಿಮ್ಮಸಂದ್ರ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿರುತ್ತಾನೆ. ಈಶ್ವರಪ್ಪನ ಅಕ್ಕ ಯಶೋಧಮ್ಮನವರನ್ನು ಶಿಡ್ಲಘಟ್ಟ ತಾಲ್ಲೂಕಿನ ಕೊತ್ತನೂರು ಗ್ರಾಮದ ಆಂಜನಪ್ಪನವರ ಜೊತೆ ಮದುವೆ ಮಾಡಿದ್ದು, ಇವರಿಗೆ ನರಸಿಂಹಮೂರ್ತಿ ಮತ್ತು ಚಂದ್ರು ಎಂಬ ಇಬ್ಬರು ಮಕ್ಕಳಿರುತ್ತಾರೆ. ದೊಡ್ಡ ಮಗ ನರಸಿಂಹಮೂರ್ತಿಗೆ ಮದುವೆಯಾಗಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯಲ್ಲಿ ವಾಸವಾಗಿರುತ್ತಾರೆ. ಎರಡನೇ ಮಗ ಚಂದ್ರುಗೆ ಮದುವೆ ಮಾಡಲು ವಧುವಿನ ಹುಡುಕಾಟದಲ್ಲಿರುತ್ತಾರೆ. ಈಶ್ವರಪ್ಪ ಮತ್ತು ಕವಿತಮ್ಮ ತನ್ನ ಮಗಳು ಮಮತಾಳನ್ನು ಸ್ವಂತ ಸಂಬಂಧದಲ್ಲಿ ಕೊಟ್ಟು ಮದುವೆ ಮಾಡಿದರೆ ಸುಖವಾಗಿರುತ್ತಾರೆಂದುಕೊಂಡಿರುತ್ತಾರೆ. ಈಶ್ವರಪ್ಪನು ಕೊತ್ತನೂರಿನಲ್ಲಿರುವ ತನ್ನ ಸ್ವಂತ ಅಕ್ಕ ಯಶೋಧಮ್ಮನ ಮಗ ಚಂದ್ರು ಜೊತೆ ಮಮತಾಳ ಮದುವೆ ಮಾಡಬೇಕೆಂದುಕೊಂಡಿದ್ದರೆ, ಕವಿತಮ್ಮ ತನ್ನ ಅಣ್ಣನ ಮಗನ ಜೊತೆ ಮಮತಾಳ ಮದುವೆ ಮಾಡಬೇಕೆಂಬ ಕನಸು ಕಂಡಿದ್ದಳು. ಆದರೆ ಈಶ್ವರಪ್ಪ ಪತ್ನಿ ಕವಿತಮ್ಮನ ಮನವೊಲಿಸಿ ಕಳೆದ ಎರಡು ವರ್ಷದ ಹಿಂದೆ ಈಶ್ವರಪ್ಪ ತನ್ನ ಅಕ್ಕ ಯಶೋಧಮ್ಮನ ಮಗ ಚಂದ್ರು ಜೊತೆ ಮದುವೆ ಮಾಡಿಕೊಡುತ್ತಾರೆ. ಇದೀಗ ಇವರಿಗೆ ಒಂದು ಗಂಡು ಮಗು ಇರುತ್ತದೆ. ಮಮತಾ ಮದುವೆಯಾದ ಮೇಲೆ ತವರುಮನೆ ಬಿಟ್ಟು ಗಂಡನ ಮನೆ ಸೇರಿಕೊಂಡ ನಂತರ 5-6 ತಿಂಗಳ ಕಾಲ ಗಂಡನೊಂದಿಗೆ ಸುಖವಾಗಿ ಜೀವನ ಮಾಡಿಕೊಂಡಿದ್ದಳು. ನಂತರ ಶುರುವಾಗಿದ್ದೆ ಆಸ್ತಿ ವಿಚಾರ.


ಎಸ್ಪಿ ಕುಶಾಲ್ ಚೌಕ್ಸೆ


ಡಿವೈಎಸ್ಪಿ ಮುರುಳಿಧರ

ಈಶ್ವರಪ್ಪ ತನ್ನ ತಂದೆಗೆ ಸೇರಿದ ಆಸ್ತಿಯನ್ನು ತನ್ನ ಒಡಹುಟ್ಟಿದ ಅಕ್ಕ ಯಶೋಧಮ್ಮನಿಗೆ ಕೊಡದೆ ತಾನೊಬ್ಬನೇ ಅನುಭವಿಸಿಕೊಂಡಿದ್ದಾನೆಂದು ಮಗಳು ಮಮತಾಳ ಮೂಲಕ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಕೊಡುವಂತೆ ಹೇಳಿ ಕಳುಹಿಸುತ್ತಾನೆ. ಆಗ ಈಶ್ವರಪ್ಪ ನಿನಗೆ ಅಪ್ಪ ಕೊಟ್ಟಿದ್ದ ಭಾಗವನ್ನು ಮಾರಾಟ ಮಾಡಿ ನಿನ್ನ ಮದುವೆಯನ್ನು ಮಾಡಿದ್ದೇನೆ. ಈಗ ಇರುವ ಆಸ್ತಿ ಎಲ್ಲವು ನನಗೆ ಸೇರಿದ್ದು. ಇದರಲ್ಲಿ ಅಕ್ಕ ಯಶೋಧಮ್ಮನಿಗೆ ಭಾಗ ಕೊಡಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಈ ವಿಚಾರವನ್ನು ಸೊಸೆಯಿಂದ ತಿಳಿದು ಕೊಂಡ ಮಾವ ಆಂಜನಪ್ಪ ಮತ್ತು ಸೋದರ ಅತ್ತೆ ಯಶೋಧಮ್ಮ ನಮ್ಮ ತಂದೆಗೆ ಸೇರಿದ ಆಸ್ತಿಯನ್ನು ಕೊಡಲು ಸಾಧ್ಯವಾಗದಿದ್ದರೆ ನಿನ್ನ ತಂದೆಗೆ ಸೇರಿದ ಆಸ್ತಿಯಲ್ಲಿ ನಿನಗೂ ಪಾಲು ಇದೆ. ಅದಕ್ಕೆ ನಿನ್ನ ತಂದೆಯಿಂದ ತೆಗೆದುಕೊಂಡು ಬರುವಂತೆ ಹೇಳುತ್ತಾರೆ. ಅದಕ್ಕೆ ಮಮತಾ ತಂದೆಯ ಆಸ್ತಿ ಎಲ್ಲವು ತಮ್ಮ ಮಧುಗೆ ಸೇರಿದ್ದು. ಭಾಗ ಕೇಳಲು ತವರುಮನೆಗೆ ಹೋಗುವುದಿಲ್ಲವೆಂದು ಹೇಳಿಬಿಡುತ್ತಾಳೆ. ಆಗ ಅತ್ತೆ, ಮಾವ ಮತ್ತು ಗಂಡ ಮೂವರು ಸೇರಿಕೊಂಡು ನಾವು ಹೇಳಿದಂತೆ ಕೇಳದಿದ್ದರೆ ಮನೆಯಿಂದ ಹೊರ ಹಾಕಬೇಕಾಗುವುದೆಂದು ಹೇಳುತ್ತಾರೆ.


ಕೊಲೆಯಾದ ಕವಿತಮ್ಮ

ಇದರ ನಡುವೆ ಗರ್ಭಿಣಿಯಾಗಿದ್ದ ಮಮತಾ ಹೆರಿಗೆಗೆಂದು ತವರುಮನೆಗೆ ಹೋಗುವಾಗ ಗಂಡ, ಅತ್ತೆ, ಮಾವ ಹಾಗೂ ಭಾವ ಸೇರಿಕೊಂಡು ಗಂಡು ಮಗುವಿನೊಂದಿಗೆ ನಮ್ಮ ಮನೆಗೆ ಬಂದರೆ ಒಳಗೆ ಕರೆದುಕೊಳ್ಳುತ್ತೇವೆ. ಹೆಣ್ಣು ಮಗುನೇನಾದರು ಹೆತ್ತಲ್ಲಿ ಖಾಯಂ ಆಗಿ ನಿನ್ನ ತವರುಮನೆಯಲ್ಲಿ ಇದ್ದುಬಿಡು ಎಂದು ಹೇಳಿ ಕಳುಹಿಸಿದ್ದರು.

ಒಂಭತ್ತು ತಿಂಗಳ ನಂತರ ಗಂಡು ಮಗುವಿಗೆ ಜನ್ಮ ನೀಡಿದ ಮಮತಾ ಆರು ತಿಂಗಳ ಕಾಲ ತವರುಮನೆಯಲ್ಲಿದ್ದು, ಆಮೇಲೆ ಅತ್ತೆ ಮನೆಗೆ ಹೋದಾಗ ವಂಶೋದ್ಧಾರಕನ ಬಗ್ಗೆ ಕೇಳಬೇಕಾದವರು ಆಸ್ತಿಯಲ್ಲಿ ಪಾಲು ತೆಗೆದುಕೊಂಡು ಬಂದೆಯಾ. ಎಲ್ಲಿ ಆಸ್ತಿ ಪತ್ರ ಎಂದು ಕೇಳಿದರು. ಅದಕ್ಕೆ ಮಮತಾ ಈಗಾಗಲೇ ನಮ್ಮ ತಂದೆ ಸ್ವಲ್ಪ ಜಮೀನು ಮಾರಾಟ ಮಾಡಿರುವುದಲ್ಲದೆ ಜೊತೆಗೆ ಸಾಲ ಮಾಡಿ ನಮ್ಮ ಮದುವೆ ಮಾಡಿ ಸಾಲಕ್ಕೆ ಬಡ್ಡಿ ಕಟ್ಟಲಾಗದೆ ಕಷ್ಟಪಡುತ್ತಿದ್ದಾರೆ. ಇರುವ ಅಲ್ಪ ಜಮೀನಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆಸ್ತಿಯಲ್ಲಿ ಭಾಗ ಕೊಡಿ ಎಂದು ಕೇಳಲಾರೆ ಎಂದಳು. ಅದಕ್ಕೆ ಗಂಡ ಚಂದ್ರು, ನಮ್ಮ ತಾಯಿಗೆ ತವರುಮನೆಯಿಂದ ಬರಬೇಕಾದ ಆಸ್ತಿ ಹಾಗೂ ನಿನ್ನ ತಂದೆಗೆ ಸೇರಿದ ಆಸ್ತಿಯಲ್ಲಿ ಭಾಗ ತರಲು ನಿನ್ನ ಕೈಯಲ್ಲಿ ಸಾಧ್ಯವಾಗಲಿಲ್ಲ. ಮದುವೆ ಸಂದರ್ಭದಲ್ಲಿ ವರದಕ್ಷಿಣೆ ರೂಪದಲ್ಲಿ ಸಾಕಷ್ಟು ಹಣ, ಒಡವೆ ಕೊಡುವುದಾಗಿ ಹೇಳಿದ ನಿಮ್ಮ ತಂದೆ, ತಾಯಿ ಕೊಡದೇನೆಯೇ ಮದುವೆ ಮಾಡಿಬಿಟ್ಟರು. ಆ ಸಮಯದಲ್ಲಿ ಗಲಾಟೆ ಮಾಡುವುದು ಬೇಡವೆಂದು ಸುಮ್ಮನಾಗಿಬಿಟ್ಟೆವು. ಈಗ ನಾವು ಕಷ್ಟದಲ್ಲಿದ್ದೇವೆ ಅದಕ್ಕೆ ನಿಮ್ಮ ತವರುಮನೆಗೆ ಹೋಗಿ 2 ಲಕ್ಷ ಹಣವನ್ನು ತೆಗೆದುಕೊಂಡು ಬರುವಂತೆ ಮಮತಾಳನ್ನು ತವರುಮನೆಗೆ ಕಳುಹಿಸಿಕೊಟ್ಟರು. ತವರಿಗೆ ಬಂದಿರುವ ಮಗಳ ಕಷ್ಟವನ್ನು ಕೇಳಿದ ಈಶ್ವರಪ್ಪ 50 ಸಾವಿರ ಹಣವನ್ನು ಕೊಟ್ಟು ಕಳುಹಿಸಿದರು. ಧನಪಿಶಾಚಿಗಳಾದ ಗಂಡ, ಅತ್ತೆ, ಮಾವ ಹಾಗೂ ಭಾವ ಯಾವಾಗಲೂ ಆಸ್ತಿ, ಹಣ, ಒಡವೆಯನ್ನು ತವರುಮನೆಯಿಂದ ತರುವಂತೆ ಮಮತಾಳಿಗೆ ಕಿರುಕುಳ ನೀಡಲು ಪ್ರಾರಂಭಿಸಿದರು. ಮನೆಯಲ್ಲಿ ಸಣ್ಣಪುಟ್ಟ ವಿಷಯಕ್ಕೆಲ್ಲ ಮಮತಾಳ ಮೇಲೆ ಜಗಳ ತೆಗೆದು ಅತ್ತೆ, ಮಾವ ಮಾನಸಿಕವಾಗಿ ಹಿಂಸೆ ನೀಡಿದರೆ, ಗಂಡ ಚಂದ್ರು ದೈಹಿಕವಾಗಿ ಹಿಂಸೆ ನೀಡುತ್ತಿದ್ದನು. ಇವರು ನೀಡುತ್ತಿದ್ದ ಹಿಂಸೆಯನ್ನು ತಡೆಯಲಾಗದೆ ಸೆಪ್ಟೆಂಬರ್ ಕೊನೆ ವಾರದಲ್ಲಿ ಗಂಡನ ಮನೆ ಬಿಟ್ಟು ಮಗುವಿನೊಂದಿಗೆ ಮಮತಾ ತವರುಮನೆ ಸೇರಿಕೊಂಡಳು.


ಪಿಎಸ್‌ಐ ಇ.ಎಂ. ಮಮತಾ


ಪಿಎಸ್‌ಐ ಪುನೀತ್ ನಂಜರಾಜ್


ಮೃತ ಕವಿತಮ್ಮನ ಮಗಳು ಮಮತಾ

**ತಾಯಿ ಕೊಲೆ ಬಗ್ಗೆ ದೂರು**

ಮಮತಾ ಅಕ್ಟೋಬರ್ 8ರಂದು ಮಂಗಳವಾರ ರಾತ್ರಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ಶಿಡ್ಲಘಟ್ಟ ತಾಲ್ಲೂಕಿನ ಕೊತ್ತನೂರು ಗ್ರಾಮದ ಸೋದರ ಅತ್ತೆ ಯಶೋಧಮ್ಮನ ಮಗ ಚಂದ್ರುರವರನ್ನು ಕಳೆದ ಎರಡು ವರ್ಷದ ಹಿಂದೆ ಮದುವೆಯಾಗಿದ್ದು, ಅತ್ತೆ ಮನೆಗೆ ಹೋದ ನಂತರ ಗಂಡ ಚಂದ್ರು ಕೆಲವು ತಿಂಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದನು. ಪಿತ್ರಾರ್ಜಿತ ಆಸ್ತಿಯಲ್ಲಿ ನನಗೆ ನಿಮ್ಮ ತಂದೆ ಭಾಗ ಕೊಡಲಿಲ್ಲವೆಂದು ಬೈಯುತ್ತಿದ್ದರು. ಆಸ್ತಿ ಜೊತೆಗೆ ವರದಕ್ಷಿಣೆ ಹಣ ಕೊಡಲಿಲ್ಲ ಎಂದು ಕಿರುಕುಳ ನೀಡುತ್ತಿದ್ದರು. ಈ ವಿಚಾರವನ್ನು ನನ್ನ ತಂದೆತಾಯಿಗೆ ಹೇಳಿದಕ್ಕೆ ಅವರು ಗ್ರಾಮದ ಹಿರಿಯರ ಸಮಕ್ಷಮದಲ್ಲಿ 2-3 ಬಾರಿ ಪಂಚಾಯ್ತಿ ಮಾಡಿಸಿದರು. ಆದರೂ ಏನು ಪ್ರಯೋಜನವಾಗಲಿಲ್ಲ. ಯಾವಾಗಲು ಆಸ್ತಿ, ಹಣ, ಒಡವೆ ಆಸೆಗಾಗಿ ಕಿತ್ತಾಡುವ ಧನದಾಯಿಗಳ ಜೊತೆ ಇರುವ ಬದಲು ತವರುಮನೆಯಲ್ಲಿಯೇ

☞ 4


ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೃತಳ ಗಂಡ ಈಶ್ವರಪ್ಪ

# ದ್ವೇಷದಿಂದ ಅತ್ತೆಯ ಕತ್ತು ಕೊಯ್ದ ಅಳಿಯ!

3 ☞

ಇರೋಣವೆಂದು ಯೋಚಿಸಿ 8-10 ದಿನಗಳಿಂದ ತವರುಮನೆಯಲ್ಲಿಯೇ ಇದ್ದೆನು. ಗಂಡ, ಅತ್ತೆ, ಮಾವ ಫನ್ ಮಾಡಿ ಮನೆಗೆ ಬರುವಂತೆ ಒತ್ತಾಯಿಸುತ್ತಿದ್ದರು. ಆದರೆ ನಾನು ಮಾತ್ರ ಅತ್ತೆ ಮನೆಗೆ ಹೋಗದೆ, ನೀಈವುಗಳು ಆಸ್ತಿ, ವರದಕ್ಷಿಣೆ ಆಸೆ ಬಿಟ್ಟು ಪ್ರೀತಿಯಿಂದ


ಗಾಯಾಳು ಈಶ್ವರಪ್ಪ ದಾಖಲಾಗಿರುವ ಆಸ್ಪತ್ರೆಗೆ ಎಸ್ಪಿ ಭೇಟಿ ನೀಡಿದರು

ಮನೆಗೆ ಕರೆದರೆ ನಾನು ಮಗುವನ್ನು ಕರೆದುಕೊಂಡು ಬರುವುದಾಗಿ ಹೇಳಿದೆ. ಅಕ್ಟೋಬರ್ 8ರಂದು ಸಂಜೆ 5 ಗಂಟೆಗೆ ಭಾವ ನರಸಿಂಹಮೂರ್ತಿರವರು ನನಗೆ ಫೋನ್ ಮಾಡಿ ನೀನು ನಮ್ಮ ಮನೆಯವರ ಮಾತನ್ನು ಕೇಳಿ, ಕೂಡಲೇ ಮನೆಗೆ ಬರುವುದು ಹಠ ಮಾಡಿಕೊಂಡು ನಿನ್ನ ತವರುಮನೆಯಲ್ಲಿಯೇ ಇದ್ದರೆ ನಿನಗೊಂದು ಗತಿ ಕಾಣಿಸಬೇಕಾಗುವುದು ಎಂದು ಬೈದನು. ಆಗ ನಮ್ಮಿಬ್ಬರ ನಡುವೆ ಮಾತಿನ ಚಕಮಕಿ ನಡೆದು ನನ್ನ ತಮ್ಮ ಇಂದು ಸಂಜೆ ನಿಮ್ಮೂರಿಗೆ ಬರುತ್ತಿದ್ದಾನೆ. ನಿನ್ನ ಹಾಗೂ ನಿಮ್ಮ ಮನೆಯವರಿಗೆ ಬುದ್ಧಿ ಕಲಿಸದೇ ಬರುವುದಿಲ್ಲವೆಂದು ಹೇಳಿ ಫೋನ್ ಕಟ್ ಮಾಡಿಬಿಟ್ಟನು. ನರಸಿಂಹಮೂರ್ತಿ ಹೇಳಿದ ಮಾತನ್ನು ಕೇಳಿಸಿಕೊಂಡ ತಾಯಿ ಕವಿತಮ್ಮ ಭಯಪಟ್ಟು ಮಗಳೇ ನೀನು ಮನೆಯಲ್ಲಿ ಇರುವುದು ಬೇಡ ಕೂಡಲೇ ಊರಿನಲ್ಲಿರುವ ದೊಡ್ಡಮ್ಮನ ಮನೆಗೆ ಹೋಗಿ ರಾತ್ರಿ 9 ಗಂಟೆ ನಂತರ ಮನೆಗೆ ಬರುವಂತೆ ಹೇಳಿದರು. ಆಗ ಅಮ್ಮನ ಮಾತಿಗೆ ಮರುಮಾತನಾಡದೆ ಮಗುವನ್ನು ಎತ್ತಿಕೊಂಡು ದೊಡ್ಡಮ್ಮನ ಮನೆಗೆ ಹೊರಟುಬಿಟ್ಟೆನು. ಮನೆಯಲ್ಲಿ ತಾಯಿ ಕವಿತಮ್ಮ, ತಂದೆ ಈಶ್ವರಪ್ಪ ಮಾತ್ರ ಇದ್ದು, ಸಹೋದರ ಮಧು ಪೆಟ್ರೋಲ್ ಬಂಕ್‌ನಿಂದ ರಾತ್ರಿ 10 ಗಂಟೆ ನಂತರ ಮನೆಗೆ ಬರುತ್ತಿದ್ದನು. ಸಂಜೆ 7.30ರ ಸಮಯದಲ್ಲಿ ಮನೆಗೆ ಬಂದ ನನ್ನ ಗಂಡ ಚಂದ್ರು ಆಸ್ತಿ ಮತ್ತು ವರದಕ್ಷಿಣೆ ವಿಚಾರವಾಗಿ ಹಾಗೂ ಪತ್ನಿ, ಮಗುವನ್ನು ಕಳುಹಿಸುಕೊಡುವಂತೆ ಕೇಳಿರಬೇಕು. ಆಗ ಇಬ್ಬರ ನಡುವೆ ಜಗಳವಾಗಿ ತಾಯಿ ಮೇಲೆ ಹಲ್ಲೆಮಾಡಿ ಚಾಕುವಿನಿಂದ ಕತ್ತು ಕೊಯ್ದು ಪರಾರಿಯಾಗುತ್ತಿದ್ದಾಗ


ಮೃತಳ ಮನೆ ಮುಂದೆ ಸೇರಿರುವ ಗ್ರಾಮಸ್ಥರು

ಮನೆಯ ಕೊಠಡಿಯಲ್ಲಿ ಮಲಗಿದ್ದ ತಂದೆ ಈಶ್ವರಪ್ಪ ಏನು ಗಲಾಟೆ ಎಂದು ನೋಡಲು ಬಂದಾಗ ನಡೆದ ಘಟನೆಯಿಂದ ಶಾಕ್ ಒಳಗಾದ ಈಶ್ವರಪ್ಪ ಹೆಂಡತಿಯ ರಕ್ಷಣೆಗೆ ಹೋದಾಗ ಚಂದ್ರು ಚಾಕುವಿನಿಂದ ಹಲ್ಲೆಮಾಡಿ ಅಲ್ಲಿಂದ ಪರಾರಿಯಾಗಿದ್ದಾನೆ. ನಮ್ಮ ಮನೆಯಲ್ಲಿ ಏನೋ ಗಲಾಟೆ ನಡೆಯುತ್ತಿದೆ ಎಂದು ಪಕ್ಕದ ಮನೆಯವರು ನನಗೆ ಫೋನ್ ಮಾಡಿ ಹೇಳಿದರು. ತಕ್ಷಣ ನಾನು ದೊಡ್ಡಮ್ಮನ ಮನೆಯಿಂದ ನಮ್ಮ ಮನೆಗೆ ಬಂದು ನೋಡಲಾಗಿ ತಾಯಿ ಕವಿತಮ್ಮ ರಕ್ತದ ಮಡುವಿನಲ್ಲಿ ಸತ್ತುಬಿದ್ದಿದ್ದರು. ಸ್ವಲ್ಪ ದೂರದಲ್ಲಿ ತಂದೆ ಈಶ್ವರಪ್ಪನವರು ಬಿದ್ದಿದ್ದು, ಕುತ್ತಿಗೆ ಹಾಗೂ ತಲೆ ಭಾಗಕ್ಕೆ ಗಾಯಗಳಾಗಿ ನರಳಾಡುತ್ತಿದ್ದರು. ತಕ್ಷಣ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಸಹೋದರ ಮಧುಗೆ ಫೋನ್ ಮಾಡಿ ಕರೆಸಿಕೊಂಡು ತಂದೆಯನ್ನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಕೊಡಿಸಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆಸ್ತಿ ಮತ್ತು ವರದಕ್ಷಿಣೆ ಹಣದ ಆಸೆಗಾಗಿ ಗಂಡ ಚಂದ್ರು, ಅತ್ತೆ ಯಶೋಧಮ್ಮ, ಮಾವ ಅಂಜನಪ್ಪ, ಭಾವ ನರಸಿಂಹಮೂರ್ತಿ ಜೊತೆಗೆ ಇವರಿಗೆ ಸಹಕಾರವಾಗಿ ಚಿಂತಾಮಣಿ ತಾಲ್ಲೂಕಿನ ಅಮಿಟಿಗಾನಹಳ್ಳಿ ಗ್ರಾಮದ ಅಂಜನಮ್ಮ ಮತ್ತು ಅಂಜನಪ್ಪನವರು ಸೇರಿಕೊಂಡು ನಮ್ಮ ತಾಯಿ ಕವಿತಮ್ಮ, ತಂದೆ ಈಶ್ವರಪ್ಪನವರನ್ನು ಕೊಲೆ ಮಾಡಲು ಪ್ಲಾನ್ ಮಾಡಿಕೊಂಡು, ನಾನಿಲ್ಲದಿರುವುದನ್ನು ನೋಡಿ ತಾಯಿ ಜೊತೆ ಜಗಳ ತೆಗೆದು ಕೊಲೆ ಮಾಡಿ ಪರಾರಿಯಾಗಿರುವ ಗಂಡ ಚಂದ್ರು ಮತ್ತು ಉಳಿದ ಆರೋಪಿಗಳನ್ನು ಪತ್ತೆ ಮಾಡಿ ಅವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದರು.

ಮಮತಾ ನೀಡಿದ ದೂರಿನ ಮೇರೆಗೆ


ಶವಾಗಾರದ ಮುಂದೆ ಮೃತಳ ಮಗ ಮಧು ಮತ್ತು ಸಂಬಂಧಿಕರು ಗೋಳಾಡುತ್ತಿರುವುದು

ಪಿಎಸ್ಐ ನಾಗೇಂದ್ರಪ್ರಸಾದ್‌ರವರು ದೂರನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಹಿರಿಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದರು. ಸ್ಥಳಕ್ಕೆ ಎಸ್ಪಿ ಕುಶಾಲ್ ಚೌಕ್ಸೆ, ಎಎಸ್ಪಿ ರಾಜಾ ಇಮಾಂ ಖಾಸೀಂ, ಡಿವೈಎಸ್ಪಿ ಮುರುಳಿಧರ, ಪಿಐಗಳಾದ ಶಿವರಾಜ್ ಮತ್ತು ವಿಜಯಕುಮಾರ್, ಬೆರಳಚ್ಚು ತಜ್ಞರು, ಶ್ವಾನದಳ ಮತ್ತು ಸಿಬ್ಬಂದಿ ವರ್ಗದವರು ಭೇಟಿ ನೀಡಿ ಸ್ಥಳ ಮತ್ತು ಶವದ ಮಹಜರ್ ನಡೆಸಿದ ನಂತರ ಶವವನ್ನು ಚಿಂತಾಮಣಿ ನಗರದ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು. ಅಲ್ಲಿ ಪಂಚರ ಸಮಕ್ಷಮದಲ್ಲಿ ಶವದ ಪಂಚನಾಮೆ ನಡೆಸಿದ ಮೇಲೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆಯನ್ನು ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು.

**ಆಸ್ತಿ ಕೊಡದಿದ್ದಕ್ಕೆ ಅತ್ತೆ ಕೊಲೆ**

ಆಸ್ತಿ ಮತ್ತು ವರದಕ್ಷಿಣೆ ಹಣವನ್ನು ತಂದೆ ತವರು ಮನೆಯಲ್ಲಿಯೇ ಇರುವ ಪತ್ನಿಯನ್ನು ಕೊಲೆ ಮಾಡಬೇಕೆಂದು ಅತ್ತೆ ಮನೆಗೆ ಬಂದ ಅಳಿಯ ಚಂದ್ರು ನಡುವೆ ನಡೆದ ಜಗಳದಲ್ಲಿ ಅತ್ತೆ ಕವಿತಮ್ಮನನ್ನು ಕೊಲೆ ಮಾಡಿ ಮಾವನಿಗೆ ಮಾರಣಾಂತಿಕ ಹಲ್ಲೆ ಮಾಡಿ ತಲೆಮರೆಸಿಕೊಂಡಿರುವ ಆರೋಪಿಯನ್ನು ಪತ್ತೆ ಮಾಡಲು ಎಸ್ಪಿ ಕುಶಾಲ್ ಚೌಕ್ಸೆ ಮತ್ತು ಡಿವೈಎಸ್ಪಿ ಮುರುಳಿಧರರವರ ಮಾರ್ಗದರ್ಶನದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯ ಪಿಐ ಶಿವರಾಜ್‌ರವರ ನೇತೃತ್ವದಲ್ಲಿ ಪಿಎಸ್ಐಗಳಾದ ಇ.ಎಂ. ಮಮತಾ, ಪುನೀತ್ ನಂಜರಾಜ್, ನಾಗೇಂದ್ರಪ್ರಸಾದ್, ಎಎಸ್ಐ ದಿನೇಶ್, ಸಿಬ್ಬಂದಿ ವರ್ಗದವರಾದ ಮಂಜುನಾಥ್ ಟಿಕ್ಕಿ, ಸಂದೀಪ್‌ಕುಮಾರ್, ಚಂದ್ರಪ್ಪ, ವಿಶ್ವನಾಥ್, ನರೇಶ್, ಕೃಷ್ಣ, ರವೀಂದ್ರಕುಮಾರ್, ಶ್ರೀನಿವಾಸ್, ಬಸವರಾಜ್ ತೆನಿಗಿ, ಮುಂತಾದವರ ತಂಡವನ್ನು ರಚಿಸಲಾಗಿದ್ದು, ಆರೋಪಿ ಮೊಬೈಲ್ ಟವರ್ ಲೊಕೇಷನ್ ಆಧಾರದ ಮೇಲೆ ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಅಕ್ಟೋಬರ್ 18ರಂದು ಆಂಧ್ರಪ್ರದೇಶ, ಚಿತ್ತೂರು ಜಿಲ್ಲೆ, ಕುಪ್ಪಂ ತಾಲ್ಲೂಕಿನ ತಮಿಳುನಾಡು ಗಡಿ ಭಾಗದಲ್ಲಿ ಆರೋಪಿ ಚಂದ್ರುನನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಸೋದರಮಾವ ಈಶ್ವರಪ್ಪನ ಮಗಳು ಮಮತಾಳನ್ನು ಕಳೆದ ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದು, ಒಂದು ಗಂಡು ಮಗು ಇದೆ. ಮದುವೆಯಾದ ಕೆಲ ತಿಂಗಳ ಕಾಲ ಚೆನ್ನಾಗಿ ಇದ್ದೆವು. ನಮ್ಮ ತಾಯಿ ಯಶೋಧಮ್ಮನವರಿಗೆ ಅವರ ತವರುಮನೆಯಿಂದ ಆಸ್ತಿ ಭಾಗ ಬರಬೇಕಾಗಿದ್ದು, ಅದನ್ನು ಮಾವ ಈಶ್ವರಪ್ಪನ ಬಳಿ ಕೇಳಿದಕ್ಕೆ ನಿನ್ನ ಭಾಗದ ಜಮೀನನ್ನು ಮಾರಾಟ ಮಾಡಿ ಮದುವೆ ಮಾಡಿರುವುದಾಗಿ ಹೇಳಿಬಿಟ್ಟರು. ಇದರಿಂದ ಕೋಪಗೊಂಡ ನಮ್ಮ ಮನೆಯವರು ಪತ್ನಿ ಮಮತಾಳ ಮನೆಯವರ ಮೇಲೆ ದ್ವೇಷ ಸಾಧಿಸುತ್ತಿದ್ದರು. ಪತ್ನಿ ಮಮತಾಳನ್ನು ಅಸ್ತ್ರವಾಗಿಸಿಕೊಂಡು ಆಸ್ತಿ ಮತ್ತು ವರದಕ್ಷಿಣೆ ಹಣ ಪಡೆಯೋಣವೆಂದು ನೋಡಿದ್ದೆವು. ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ಆಗ ಬೆದರಿಕೆ ಹಾಕಿದರೆ ಮಮತಾಳ ಮನೆಯವರು ನಮ್ಮ ದಾರಿಗೆ ಬರುತ್ತಾರೆಂದು ತಿಳಿದು ಅಣ್ಣ ನರಸಿಂಹಮೂರ್ತಿರವರಿಂದ ಬೆದರಿಕೆ ಹಾಕಿಸಿ ನೋಡಿದ್ದೆವು. ಆದರೆ ಅವರು ಯಾವುದಕ್ಕೂ ಬಗ್ಗುವಂತೆ ಕಾಣಲಿಲ್ಲ. ನೇರವಾಗಿ ಮಾವನ ಮನೆಗೆ ಹೋಗಿ ಆಸ್ತಿಯಲ್ಲಿ ಭಾಗ ಕೊಡುವಂತೆ ಹಾಗೂ ಮಮತಾಳನ್ನು ನಮ್ಮ ಮನೆಗೆ ಕಳುಹಿಸಿ ಕೊಡುವಂತೆ ಕೇಳಬೇಕೆಂದು ಹೋಗಿದ್ದಾಗ ಮನೆಯಲ್ಲಿ ಅತ್ತೆ ಕವಿತಮ್ಮ, ಮಾವ ಈಶ್ವರಪ್ಪ ಮಾತ್ರ ಇದ್ದರು. ಪತ್ನಿ ಮಮತಾ ಮತ್ತು ನನ್ನ ಮಗ ಇರಲಿಲ್ಲ. ಆಗ ಆಸ್ತಿ ಮತ್ತು ಮಮತಾಳನ್ನು ನನ್ನ ಜೊತೆ ಕಳುಹಿಸಿ ಕೊಡಿ ಎಂದು ಕೇಳಿದಕ್ಕೆ ಅತ್ತೆ ಕವಿತಮ್ಮನವರು ನಾವು ನನ್ನ ಮಗಳು ಹಾಗೂ ಮೊಮ್ಮಗನನ್ನು ನಿಮ್ಮ ಮನೆಗೆ ಕಳುಹಿಸುವುದಿಲ್ಲ. ನಮ್ಮ ಮನೆಯಲ್ಲಿಯೇ ಇರಲಿ. ನಾನೇ ಅವರನ್ನು ನೋಡಿಕೊಳ್ಳುತ್ತೇವೆ. ಬಲವಂತಪಡಿಸಿ ಅವರನ್ನು ನಿಮ್ಮ ಮನೆಗೆ ಕಳುಹಿಸಿದರೆ ಅವರಿಬ್ಬರನ್ನು ಸಾಯಿಸಿಬಿಡುತ್ತೀರಾ ಎಂದು ಹೇಳಿದರು. ಇವರ ಮಾತಿನಿಂದ ಕೋಪ ಬಂದು ಮೊದಲೇ ಜೇಬಿನಲ್ಲಿ ಇಟ್ಟುಕೊಂಡು ಬಂದಿದ್ದ ಚಾಕುವನ್ನು ತೆಗೆದುಕೊಂಡು ಅದನ್ನು ತೋರಿಸುತ್ತಾ ಅವ್ಯಾಚ


ಶವಾಗಾರದ ಮುಂದೆ ಪೊಲೀಸರು ಮತ್ತು ಗ್ರಾಮಸ್ಥರು

ಶಬ್ದಗಳಿಂದ ಬೈದು ಹಲ್ಲೆ ಮಾಡಿ ಆಕೆಯನ್ನು ನೆಲದ ಮೇಲೆ ತಳ್ಳಿ ಚಾಕುವಿನಿಂದ ಕತ್ತು ಕೊಯ್ದು, ತಲೆಗೆ ತಿವಿಯುತ್ತಿದ್ದಾಗ ರೂಂನಿಂದ ಮಾವ ಈಶ್ವರಪ್ಪನವರು ನನ್ನ ಹೆಸರನ್ನು ಹೇಳಿಕೊಂಡು ಏನಪ್ಪಾ ಚಂದ್ರು ನಿನ್ನದು ಗಲಾಟೆ ಎಂದು ಹೇಳಿ ಪತ್ನಿಯ ರಕ್ಷಣೆಗೆ ನಿಂತರು. ಆಗ ಮಾವನ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ ಪರಾರಿಯಾಗಿ ತಲೆಮರೆಸಿಕೊಳ್ಳಲು ಆಂಧ್ರದ ಕಡೆಯಿಂದ ತಮಿಳುನಾಡಿನ ಕಡೆಗೆ ಹೋಗುತ್ತಿದ್ದಾಗ ನಿಮ್ಮಗಳ ಕೈಗೆ ಸಿಕ್ಕಿಹಾಕಿಕೊಂಡೆನೆಂದು ಹೇಳಿದನು.

ನಂತರ ಆರೋಪಿ ಚಂದ್ರುನನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ನಡೆಸಿದ ನಂತರ ಆರೋಪಿ ಚಂದ್ರು ಕೊಲೆಗೆ ಉಪಯೋಗಿಸಿದ್ದ ಚಾಕುವನ್ನು ತೆಗೆದುಕೊಟ್ಟಿದ್ದು ವಶಕ್ಕೆ ಪಡೆದ ಪೊಲೀಸರು ಆರೋಪಿ ಚಂದ್ರುನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಆರೋಪಿ ಚಂದ್ರುನನ್ನು ಬಂಧಿಸಲು ಯಶಸ್ವಿ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಎಸ್ಪಿ ಕುಶಾಲ್ ಚೌಕ್ಸೆರವರು ಶ್ಲಾಘಿಸಿ ಅಭಿನಂದಿಸಿದ್ದಾರೆ. ☯

---

2 ☞

ಬಾಯಿ ಮುಚ್ಚಿಸುವ ಕೆಲಸವನ್ನು ಹೈಕಮಾಂಡ್ ಮಾಡಿದ್ದರೆ ಇವತ್ತು ಈ ಮಟ್ಟಕ್ಕೆ ಹೋಗುತ್ತಿರಲಿಲ್ಲವೇನೋ? ಸಮ್ಮಿಶ್ರ ಸರ್ಕಾರವನ್ನು ಬೀಳಿಸಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರದಲ್ಲಿ ಯತ್ನಾಳ್‌ರನ್ನು ಸಚಿವರನ್ನಾಗಿ ಮಾಡಲಿಲ್ಲ, ಅದಾದ ನಂತರ ವಿಪಕ್ಷ ಸ್ಥಾನ ನೀಡುತ್ತಾರೆಂದು ಕಾದರು ಅದನ್ನೂ ನೀಡಲಿಲ್ಲ, ಕೊನೆಪಕ್ಷ ಬಿಜೆಪಿಯ ರಾಜ್ಯಾಧ್ಯಕ್ಷರನ್ನಾಗಿ ಮಾಡುತ್ತಾರಾ ಎಂದು ನೋಡಿದರು ಅದು ದಕ್ಕಲಿಲ್ಲ. ಹೀಗಾಗಿ ಬಿಜೆಪಿಯಲ್ಲಿ ಯಡಿಯೂರಪ್ಪ ನಂತರದ ಹಿರಿಯ ನಾಯಕರಲ್ಲಿ ನಾನು ಒಬ್ಬನಾಗಿದ್ದು, ನನಗೆ ಸೂಕ್ತ ಸ್ಥಾನ ಮಾನ ನೀಡಲಿಲ್ಲವಲ್ಲ ಎಂಬ ಅಸಮಾಧಾನ ಅವರು ಸಿಡಿದೇಳಲು ಕಾರಣವಾಗಿದೆ. ರಾಜ್ಯ ಬಿಜೆಪಿಯಲ್ಲಿ ಇವತ್ತಿನ ಬಣ ಬಡಿದಾಟ ನಿಷ್ಠ ನಾಯಕರು, ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿದೆ. ಅದರ ಜತೆಗೆ ಪರಿಸ್ಥಿತಿ ಕೂಡ ಗಡಿಮೀರುತ್ತಿದೆ. ಇದು ಮುಂದುವರೆದರೆ ಕಷ್ಟವಾಗಲಿದೆ ಎಂದರಿತ ಹೈಕಮಾಂಡ್ ಈಗ ಪ್ರವೇಶಕೊಟ್ಟಂತೆ ಕಾಣುತ್ತಿದೆ.

ಈಗಾಗಲೇ ವಕ್ಫ್ ಹೋರಾಟದ ಮೂಲಕ ಶಕ್ತಿ ಪ್ರದರ್ಶನಕ್ಕೆ ಮುಂದಾಗಿರುವ ಯತ್ನಾಳ್ ಅವರೊಂದಿಗೆ ಒಂದಷ್ಟು ಘಟಾನುಘಟಿ ನಾಯಕರು ಸೇರಿದ್ದಾರೆ. ಇನ್ನೊಂದೆಡೆ ಕೆಲವು ನಾಯಕರು ವಿಜಯೇಂದ್ರ ಪರ ನಿಂತು ಯತ್ನಾಳ್‌ನ್ನು ಪಕ್ಷದಿಂದ ಉಚ್ಚಾಟಿಸಿ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಆದರೆ ಇವರ ನಡುವೆ ಇನ್ನೊಂದಿಷ್ಟು ನಾಯಕರು ಮೌನವಾಗಿದ್ದು ಹೈಕಮಾಂಡ್ ಮೇಲೆ ಬೊಟ್ಟು ತೋರಿಸುತ್ತಾ ಕುಳಿತಿದ್ದಾರೆ.

ಸದ್ಯ ಒಡೆದ ಮನೆಯಾಗಿರುವ ರಾಜ್ಯ ಬಿಜೆಪಿಯನ್ನು ಒಂದು ಮಾಡುವ ಕೆಲಸ ಹೇಗೆ ನಡೆಯುತ್ತದೆ? ಯತ್ನಾಳ್‌ನ್ನು ಪಕ್ಷದಿಂದ ಉಚ್ಚಾಟಿಸುತ್ತಾರಾ? ಅಥವಾ ಪಕ್ಷದಲ್ಲಿಟ್ಟುಕೊಳ್ಳುತ್ತಾರಾ? ಈ ಪ್ರಶ್ನೆಗಳು ರಾಜಕೀಯ ಪಡಸಾಲೆಯಲ್ಲಿ ಹುಟ್ಟಿಕೊಂಡಿದ್ದು, ಸೆರಗಿನ ಕೆಂಡವಾಗಿರುವ ಯತ್ನಾಳ್ ರನ್ನು ಹೇಗೆ ನಿಭಾಯಿಸುತ್ತಾರೆ ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ. ☯

# ಪುಡಿ ರೌಡಿ ಕೊಂದ ಪಾತಕಿಗಳು!


ಸೋಮನಾಥ ಬದುಕಿದ್ದಾಗ


ಕೊಲೆಯಾದ ಸೋಮನಾಥ

**ಕಲಬುರಗಿ**

**✍ಬಿ.ವಿ. ಕುಲಕರ್ಣಿ**

ಕಲಬುರಗಿ ಜಿಲ್ಲೆ ಹಾಗೂ ತಾಲ್ಲೂಕಿನ ಪಟ್ಟಣ ಗ್ರಾಮದ ಸೋಮನಾಥ ಎಂಬ ಪುಡಿ ರೌಡಿಯುನ್ನು ಮನಬಂದಂತೆ ಚಾಕುವಿನಿಂದ, ರಾಡ್‌ನಿಂದ ಥಳಿಸಿ ಕೊಲೆ ಮಾಡಿರುವ ಘಟನೆ ಕಲಬುರಗಿ ನಗರದ ಸಬ್ ಅರ್ಬನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜರುಗಿದೆ.

ಕೊಂದವರೇ ರಾಬರಿ ಗುನ್ನೆ ದಾಖಲಿಸಿ ರೌಡಿ ಪಟ್ಟಕಟ್ಟಿ ಜೈಲಿಗೆ ಅಟ್ಟಿದರು. ಜೈಲಿನಿಂದ ಬಂದ ನಂತರ ಉಪಾಯ ಮಾಡಿ ಸಮಯ ಸಾಧಿಸಿ ಕೊಂದೇಬಿಟ್ಟರು. ಪಟ್ಟಣ ಗ್ರಾಮದ ಮಲ್ಲಮ್ಮ ಮತ್ತು ಶಿವಪುತ್ರಪ್ಪ


ಪತ್ನಿ ಭಾಗ್ಯಶ್ರೀ ಹಾಗೂ ಮಕ್ಕಳೊಂದಿಗೆ ಸೋಮನಾಥ

ತಾಳಿಕೋಟೆ ಎಂಬ ದಂಪತಿಗಳಿಗೆ ಐದು ಜನ ಗಂಡು, ನಾಲ್ಕು ಹೆಣ್ಣು ಮಕ್ಕಳು ಒಟ್ಟು ಒಂಭತ್ತು ಜನ ಮಕ್ಕಳಿದ್ದು, ಎಲ್ಲರ ಮದುವೆ ಮಾಡಲಾಗಿದೆ. ಎಲ್ಲರೂ ಬೇಸಾಯ ಮಾಡಿಕೊಂಡು ಬಂದಿರುತ್ತಾರೆ. ರಾಜಣ್ಣ, ಈರಣ್ಣ, ಲಕ್ಷ್ಮಿಕಾಂತ, ಸೋಮನಾಥ, ನಾಗಣ್ಣ ಎಲ್ಲರೂ ತಮ್ಮ ತಮ್ಮ ಕೆಲಸದಲ್ಲಿ ತೊಡಗಿಕೊಂಡಿರುತ್ತಾರೆ. ಸೋಮನಾಥ ಎಂಬುವ ನಾಲ್ಕನೇ ಮಗ ವಿದ್ಯಾಭ್ಯಾಸ ಹೆಚ್ಚಿಗೆ ಮಾಡದೇ ಕೇವಲ ನಾಲ್ಕನೇ ತರಗತಿವರೆಗೆ ಕಲಿತಿದ್ದು, ಉಡಾಳನಂತೆ ತಿರುಗುತ್ತಿದ್ದ ಈತನಿಗೆ ಚೊಂಚಿ ಗ್ರಾಮದ ಭಾಗ್ಯಶ್ರೀ ಎಂಬಾಕೆಯುನ್ನು ತಂದು ಲಗ್ನ ಮಾಡಿದರು. ಹೆಂಡತಿ ಮನೆಯವರೇ ಸೋಮನಾಥನಿಗೆ ಬೆಂಗಳೂರಿಗೆ ಕರೆದೊಯ್ದು ಕೆಲಸ ಹಚ್ಚಿದರು. ಅಲ್ಲಿ ಖಾನಾವಳಿಗೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ಆದಾಯ ಕೂಡಾ ಚೆನ್ನಾಗಿಯೇ ಇತ್ತು.

ಪಟಪಟನೇ ಎರಡು ಗಂಡು ಮಕ್ಕಳು ಜನಿಸಿದವು. ಸಮರ್ಥ (4), ಸಮೃದ್ಧ (ಎರಡೂವರೆ ವರ್ಷ). ಸ್ವಲ್ಪ ದುಡ್ಡು ಮಾಡಿಕೊಂಡು ತನ್ನೂರಿಗೆ ಬಂದ. ಬೇರೆಯವರ ಭೂಮಿ ಲೀಸ್‌ಗೆ ಪಡೆದು ಬೇಸಾಯ ಮಾಡತೊಡಗಿದ. ಜೊತೆಯಲ್ಲಿ ಕಿರಾಣಿ ಅಂಗಡಿ ಒಂದು ನಡೆಸಿಕೊಂಡು ಬರುತ್ತಿದ್ದ. ಗಂಡ-ಹೆಂಡತಿ ಕೂಡಿ ಉತ್ತಮ ಸಂಸಾರದ ಬಂಡಿ ಸಾಗಿಸಿಕೊಂಡು ಬರತೊಡಗಿದರು. ತುಂಬಿದ ಮನೆ ಗ್ರಾಮದಲ್ಲಿ ಮನೆತನದ ವರ್ಚಸ್ಸು ಬೆಳೆಯತೊಡಗಿತು. ಸೋಮನಾಥನ ಅತ್ತಿಗೆ (ಅಣ್ಣನ ಹೆಂಡತಿ) ನಾಗಮ್ಮ ಅವಿರೋಧವಾಗಿ ಗ್ರಾಮ ಪಂಚಾಯತಿಯ ಸದಸ್ಯೆಯಾದಳು. ಈತನಿಗೆ ಕುಡಿತದ ಚಟ ಒಂದಿತ್ತು. ಉಡಾಳರ ಸಹವಾಸ ಮಾಡಿ ಕೆಡುತ್ತಿದ್ದ. (ವ್ಯವಸಾಯದಲ್ಲಿ 10 ಲಕ್ಷ ಬೆಲೆಬಾಳುವ ಕಲ್ಲಂಗಡಿ ಬೆಳೆದಿದ್ದಾನೆ) ಅದೇ ಪಟ್ಟಣ ಗ್ರಾಮದ ಸಿದ್ದು ತಂದೆ ಶರಣಪ್ಪ ತುಗದಿ ಎಂಬುವವರು ಡ್ರೈವರ್ ರೋಡ್ ಲೈನ್ಸ್ ಎಂಬ ಹೆಸರಿನ ಧಾಬಾ ನಡೆಸಿಕೊಂಡು ಬಂದಿರುತ್ತಾರೆ. ಆರು ತಿಂಗಳ ಹಿಂದೆ ಸೋಮನಾಥ ತಾಳಿಕೋಟೆ ಮತ್ತು ಪಟಾಲಮ ಧಾಬಾಕ್ಕೆ ಹೋಗಿ ಕುಡಿದು ತಿಂದು ಊಟ ಮಾಡಿರುವ ಸಂದರ್ಭದಲ್ಲಿ ಬಿಲ್ ವಿಚಾರವಾಗಿ ಜಗಳವಾಗಿದೆ. ಧಾಬಾದವರ ಜೊತೆ ಕಿರಿಕ್ಕು ನಡೆದು ಬಡಿದಾಡಿಕೊಂಡಿದ್ದಾರೆ. ಧಾಬಾದವರು ಹೇಳುವಂತೆ ಬಿಲ್ ಕೊಡದೆ ಕಿರಿಕ್ ಮಾಡಿದ್ದಾನೆ ಎಂದು. ಆದರೆ ಮೂಲ ಕಿರಿಕ್ಕು ಎಂದರೆ ಬಿಲ್‌ನಲ್ಲಿ ಎರಡು ಬಿಯರ್ ಬಾಟಲ್‌ಗಳ ಚಾರ್ಜ್ ಹೆಚ್ಚಿಗೆ ಹಚ್ಚಿದ್ದಕ್ಕಾಗಿ ನಾವು ಜಗಳವಾಡಿರುತ್ತೇವೆ ಎಂದು ಸೋಮನಾಥನ ಮಾತು. ಯಾವುದು ನಿಜ, ಯಾವುದು ಸುಳ್ಳು ದೇವರೇ ಬಲ್ಲ. ಅಂದಿನಿಂದ ಧಾಬಾದ ಮಾಲೀಕರಿಂದ ಸೋಮನಾಥನ ಮೇಲೆ ಹಲ್ಲುಮಸಿಯಲು ಪ್ರಾರಂಭಿಸಿದರು.

**ಕೊಲೆಗೆ ಕೂಡಿ ಬಂದ ಸಮಯ**


ದಿನಾಂಕ 11-11-2024ರಂದು ಅದೇ ಗ್ರಾಮದ ಶಂಕರ ಪರಸ್ತಿ ಎಂಬುವವರ ಕಿರಾಣಿ ಅಂಗಡಿಯ ದೀಪಾವಳಿ ನಿಮಿತ್ತ ಪೂಜಾಕಾರ್ಯ ಇಟ್ಟುಕೊಳ್ಳಲಾಗಿತ್ತು. ಬೀದರ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಗ್ರಾಮ ಮತ್ತು ಪಟ್ಟಣಗಳಲ್ಲಿ ದೀಪಾವಳಿಯ ಅಮಾವಾಸ್ಯೆಯಿಂದ ಮುಂಬರುವ ಹುಣ್ಣಿಮೆತನಕ ಅಂಗಡಿಗಳ ಪೂಜಾಕಾರ್ಯ ನಡೆಯುತ್ತವೆ. ಹದಿನೈದು ದಿನಗಳಲ್ಲಿ ಅನುಕೂಲ ಆದಾಗ ತಮ್ಮ ತಮ್ಮ ಅಂಗಡಿಗಳ ಪೂಜಾಕಾರ್ಯ ಜೋರಾಗಿ ಮಾಡುತ್ತಾರೆ. ಇಡೀ ರಾತ್ರಿ ಎಲ್ಲಾ ಜಾಗರಣೆ ಮಾಡುತ್ತಾರೆ. ಕೆಲವರು ಭಜನೆ, ಹಾಡುಗರಿಗೆ, ಟಿವಿ ದೊಡ್ಡ ಪರದೆ ಮೇಲೆ ಸಿನಿಮಾ ತೋರಿಸುವುದು ಇಟ್ಟುಕೊಳ್ಳುತ್ತಾರೆ. ಆದರೆ ನೂರಕ್ಕೆ ಶೇ. 80ರಷ್ಟು ಜನ ರಾತ್ರಿ ಇಸ್ಪೀಟ್ ಆಟದಲ್ಲೇ ತೊಡಗಿಕೊಳ್ಳುತ್ತಾರೆ. ಆ ದಿನ ಸೋಮನಾಥನಿಗೆ ಪೂಜಾಕಾರ್ಯಕ್ಕೆ ಆಹ್ವಾನ ಬಂದಿತ್ತು. ಇದು ಮೋಜು ಮಜಾ ಮಾಡುವ ಸಮಯ ಎಂದು ರಾತ್ರಿ 10 ಗಂಟೆಗೆ ಹೆಂಡತಿಯಾದ ಭಾಗ್ಯಶ್ರೀಗೆ ಹೇಳಿ ಮನೆಯಿಂದ ಹೊರಟುಬಿಟ್ಟ. ಇದೇ ಸಮಯಕ್ಕೆ ಕಾದು ಕುಳಿತ ಡ್ರೈವರ್ ರೋಡ್ ಲೈನ್ಸ್ ಧಾಬಾದ ಮಾಲೀಕ ಸಿದ್ದಪ್ಪ ತಂದೆ ಶರಣಪ್ಪ ತುಗದಿ, ಲಕ್ಷ್ಮೀ ಪುತ್ರ ತುಗದಿ, ಲಕ್ಷ್ಮಿಪುತ್ರ ತುಗದಿ, ಅಣ್ಣಾರಾಯ ತಂದೆ ಶಂಕರೆಪ್ಪ ತುಗದಿ, ಶರಣಪ್ಪ ಶ್ರೀಮಂತ ತುಗದಿ, ಅಮಅಮಪ್ಪ ತುಗದಿ, ಸಿದ್ದು ತುಗದಿ ಇವರ ಅಳಿಯನಾದ ಜಗ್ಗು ಹಾಗೂ ಇನ್ನಿತರರು ಕೂಡಿ ಅದೇ ಪಟ್ಟಣದ ಗ್ರಾಮದ ಶಂಕರ ಪರಾಸ್ತಿ ಕಿರಆಮಿ ಅಂಗಡಿಗೆ ಬಂದು ಪೂಜಾ ನಿಮಿತ್ತ ಇಸ್ಪೀಟ್ (ಜೂಜು) ಆಡುತ್ತ ಕುಳಇತಿದ್ದ ಸೋಮನಾಥ , ರಾಜಣ್ಣ ತಂದೆ


ಪ್ರಮುಖ ಆರೋಪಿ ಲಕ್ಷ್ಮೀಪುತ್ರ

ಬಸವರಾಜ ಮಾಲಿ ಪಾಟೀಲ, ಶರಣಪ್ಪ ಮಾಸಳ್ಳಿ, ಬಾಬುರಾವ ವಗ್ಗೆ, ಕಿರಣ ಕಡ್ಲಾ, ಶ್ರೀನಿವಾಸ ಬಿಸಗೊಂಡ, ನಾಗರಾಜು, ಇತ್ತಾರ ಪಾಟೀಲ ಎಲ್ಲರೂ ಕೂಡಿ ಇಸ್ಪೀಟ್ ಆಡುತ್ತ ಕುಳಿತಿದ್ದಾಗ ಆಗ ಸಮಯ ರಾತ್ರಿ 2.30 ಗಂಟೆಯಾಗಿರಬಹುದು.

ದಿಢೀರನೆ ಸಿದ್ದಪ್ಪ ತಂದೆ ಶರಣಪ್ಪ ತುಗದಿ, ಲಕ್ಷ್ಮಿಪುತ್ರ ಶರಣಪ್ಪ ತುಗದಿ, ಅಣ್ಣಾರಾಯ ತಂದೆ ಶಂಕ್ರೆಪ್ಪ ತುಗದಿ, ಶರಣಪ್ಪ ಶ್ರೀಮಂತ ತುಗದಿ, ಅಣ್ಣಪ್ಪ ತಂದೆ ಶರಣಪ್ಪ ತುಗದಿ, ಸಿದ್ದು ತುಗದಿರವರ ಅಳಿಯನಾದ ಜಗ್ಗು ಹಾಗೂ ಇತರರೂ ಕೂಡಿಕೊಂಡು ಕೈಯಲ್ಲಿ ಮಚ್ಚು, ರಾಡ್ ಹಿಡಿದುಕೊಂಡು ಬಂದವರೇ ಮೊದಲು ಅಣ್ಣಾರಾಯ ತುಗದಿಯನ್ನು ಈತನು ಸೋಮನಾಥನ ಕಣ್ಣಿಗೆ ಖಾರದಪುಡಿ ಎರಚಿದನು. ಲಕ್ಷ್ಮಿಪುತ್ರನು ರಾಡ್‌ನಿಂದ ತಲೆಗೆ ಜೋರಾಗಿ ಹೊಡೆದನು.


ಕಮೀಷನರ್ ಡಾ. ಎಸ್.ಡಿ. ಶರಣಪ್ಪ


ಎಸಿಪಿ ಡಿ.ಜಿ. ರಾಜಣ್ಣ


ಪಿಐ ಸಂತೋಷ್ ತಟ್ಟೇಪಳ್ಳಿ


ರೈಟರ್ ಪ್ರಶಾಂತ್

ಸೋಮನಾಥನು ಎದ್ದು ತಪ್ಪಿಸಿಕೊಂಡು ಓಡುವಷ್ಟರಲ್ಲಿ ಎಲ್ಲರೂ ಕೂಡಿ ಕಿರಾಣಿ ಅಂಗಡಿಯ ಮುಂದೆ ನೆಲಕ್ಕೆ ಕೆಡದಿ ಮನಸೋ ಇಚ್ಛೆ ಥಳಿಸಿದರು. ರಕ್ತದ ಮಡುವಿನಲ್ಲಿ ಬಿದ್ದುಬಿಟ್ಟ. ಇದೇ ಸಮಯಕ್ಕೆ ಸೋಮುನ ಜೊತೆಯಲ್ಲಿದ್ದ ರಾಚಣ್ಣ ಮಾಲಿಪಾಟೀಲ ಓಡೋಡಿ ಮನೆಗೆ ಹೋಗಿ ಸೋಮನಾಥನ ಹೆಂಡತಿಯಾದ ಭಾಗ್ಯಶ್ರೀಯನ್ನು ನಡೆದ ವಿಷಯ ತಿಳಿಸಿದನು. ಆಗ ಭಾಗ್ಯಶ್ರೀ ಮತ್ತು ಭಾವ ೀರಣ್ಣ,

☞ 7


ಆರೋಪಿಗಳಾದ ಅಣ್ಣಾರಾಯ, ಮಾಳಪ್ಪ, ಸಿದ್ದಾರೋಢ, ಅಣ್ಣಪ್ಪ, ಶರಣಬಸಪ್ಪ ಹಾಗೂ ಜಗದೀಶ

## ರಾಯಭಾಗ ಪೊಲೀಸರ ಭರ್ಜರಿ ಕಾರ್ಯಾಚರಣೆ...

# ಅಕ್ರಮವಾಗಿ ಗಾಂಜಾ ಬೆಳೆದಿದ್ದ ಐನಾತಿ ರೈತನ ಬಂಧನ 7.81 ಲಕ್ಷ ರೂ.ಗಳ ಮೌಲ್ಯದ 89 ಕೆಜಿ ಗಾಂಜಾ ವಶಕ್ಕೆ!

**ಸನಾತನ ಕಾಲದಿಂದಲೂ ಬಲು ಬೇಡಿಕೆಯ ಅಮಲು ಪದಾರ್ಥ ಗಾಂಜಾ. ಈಗಲೂ ದೇಶ-ವಿದೇಶಗಳಲ್ಲೂ ತನ್ನ ಗಮಲು ಪಸರಿಸಿದೆ. ಇಂತಹ ಬಲು ಬೇಡಿಕೆಯ ಗಾಂಜಾ ಬೆಳೆಯನ್ನು ದಿಢೀರನೆ ಶ್ರೀಮಂತನಾಗುವ ದುರುದ್ದೇಶದಿಂದ ತಾನು ಪಾಲಿನಿಂದ ಮಾಡಿದ ಕಬ್ಬಿನ ಗದ್ದೆಯಲ್ಲಿ ಐನಾತಿ ರೈತನೊಬ್ಬನು ಬೆಳೆದಿದ್ದನು. ಇನ್ನೇನು ಕೆಲವೇ ದಿನಗಳಲ್ಲಿ ಮಾರಾಟಕ್ಕೆ ಈ ನಿಷೇಧಿತ ಅಮಲು ಪದಾರ್ಥ ಸಿದ್ಧವಾಗಿತ್ತು. ಡಿವೈಎಸ್ಪಿ ಪ್ರಶಾಂತ ಮುನ್ನೋಳಿ, ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಎಸ್. ಮಂಟೂರ ನಿರ್ದೇಶನದಲ್ಲಿ ಕ್ರೈಂ ಪಿಎಸ್ಐ ನರಸಿಂಹರಾಜು ಜೆ.ಡಿ. ಮತ್ತು ಸಿಬ್ಬಂದಿಗಳು ಖಚಿತ ಮಾಹಿತಿ ಆಧರಿಸಿ ಗಾಂಜಾ ಬೆಳೆದ ರೈತನ ಜಮೀನು ಮತ್ತು ಮನೆಯ ಮೇಲೆ ದಾಳಿ ಮಾಡಿ 7.81 ಲಕ್ಷ ರೂ. ಮೌಲ್ಯದ 89 ಕೆಜಿ ಗಾಂಜಾ ಜಪ್ತಿ ಮಾಡಿಕೊಂಡು ರೈತನನ್ನು ಬಂಧಿಸಿದ ಪ್ರಕರಣ ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ನಂದಿಕುರಳಿ ಗ್ರಾಮದ ವ್ಯಾಪ್ತಿಯಲ್ಲಿ ಜರುಗಿದೆ. ಈ ಗಾಂಜಾ ದಾಳಿ ಇತ್ತೀಚಿನ ವರ್ಷಗಳಲ್ಲಿ ದೊಡ್ಡದು ಎನ್ನಲಾಗುತ್ತಿದೆ.**



ಅಕ್ರಮವಾಗಿ ಕಬ್ಬಿನ ಗದ್ದೆಯಲ್ಲಿ ಬೆಳೆದಿದ್ದ ಬಲಿತ ಹಸಿ ಗಾಂಜಾ ಗಿಡಗಳು

ಬೆಳಗಾವಿ

✍ ಮನ್ನಾಪೂರ

ಅಮಲು ಪದಾರ್ಥಗಳಲ್ಲಿ ಅತ್ಯಂತ ವಿಶಿಷ್ಟವಾದದ್ದು ಗಾಂಜಾ. ಇದು ಸನಾತನ ಸಂಸ್ಕೃತಿಯಿಂದಲೂ ಪ್ರತಿಷ್ಟಿತ ಮಠ ಮಂದಿರಗಳಲ್ಲಿ ಋಷಿಮುನಿಗಳು ಮತ್ತು ಅಘೋರಿಗಳು ಚಿಲುಮೆ ಹಾಗೂ ಹುಕ್ಕಾ ಮುಖಾಂತರ ಸೇದುತ್ತಿದ್ದರು. ಇದು ಆಯುರ್ವೇದದಲ್ಲೂ ಬಳಕೆಯಾಗುತ್ತದೆ. ಆದರೆ ಇದೊಂದು ನಿಷೇಧಿತ ಅಮಲು ಪದಾರ್ಥವಾಗಿದೆ. ಇದೀಗ ಕಾಲ ಬದಲಾದಂತೆ ಹುಕ್ಕಾ, ಸಿಗರೇಟ್, ಚಾಕೋಲೇಟ್, ಮಾತ್ರೆಗಳ ರೂಪದಲ್ಲಿ ಖದೀಮರು ಗಾಂಜಾ ಮಾರಾಟ ಮಾಡುತ್ತಿದ್ದಾರೆ. ಇಂತಹ ಗಾಂಜಾ ಮಾರಾಟ ಮಾಡಲು ಡ್ರಗ್ ಪೆಡ್ಲರ್‌ಗಳು ಹುಟ್ಟಿಕೊಂಡು ಪ್ರತಿಷ್ಟಿತ ಬಾರ್‌ಗಳು, ಬಡಾವಣೆಗಳು, ಕಾಲೇಜುಗಳನ್ನು ತಮ್ಮ ಅಡ್ಡಾಗಳಾಗಿ ಮಾಡಿಕೊಂಡಿದ್ದಾರೆ. ಇಂತಹ ಗಾಂಜಾ ಬೆಳೆಯನ್ನು ಉಪ ಬೆಳೆ ರೂಪದಲ್ಲಿ ಬೆಳೆದು ಕೆಲವು ಐನಾತಿ ರೈತರು ದಿಢೀರ್ ಶ್ರೀಮಂತರಾಗಲು ಹವಣಿಸಿ ಕಾನೂನಿನ ಕುಣಿಕೆಯಲ್ಲಿ ಸಿಲುಕುವುದಂತೂ ಗ್ಯಾರಂಟಿ. ಇಲ್ಲಿಯೂ ಆದದ್ದು ಇಷ್ಟೇ. ಟಫ್ ಕಾಪ್ ಬಿ.ಎಸ್. ಮಂಟೂರ ಅವರ ನಿರ್ದೇಶನದಲ್ಲಿ ದಾಳಿ ನಡೆಸಿದ ಪೊಲೀಸರು ಇಂದು ಗಾಂಜಾ ಬೆಳೆದ ಐನಾತಿ ರೈತನನ್ನು ಜೈಲಿಗಟ್ಟಿದ್ದಾರೆ.

### ಗಾಂಜಾ ಬೆಳೆದಿದ್ದ ಐನಾತಿ ರೈತ...

ರಾಯಪ್ಪ ಸತ್ತೆಪ್ಪ ತೋಳೆ (35 ವ) ಎಂಬ ಐನಾತಿ ರೈತ ಗಾಂಜಾ ಬೆಳೆಯುವುದರಲ್ಲಿ, ಮಾರುವುದರಲ್ಲಿ ತುಂಬಾ ಪರಿಣಿತಿ ಹೊಂದಿದ್ದು ಕಂಡು ಬರುತ್ತಿದೆ. ಮೂಲತಃ ರಾಯಭಾಗ ತಾಲ್ಲೂಕಿನ ಕಂಚಕರವಾಡಿಯ ಈತ ಪಕ್ಕದ ನಂದಿಕುರಳಿ ವ್ಯಾಪ್ತಿಯಲ್ಲಿ ಬೇರೊಬ್ಬರ ಫಲವತ್ತಾದ ಜಮೀನನ್ನು ಪಾಲಿನಿಂದ ಮಾಡಿ ಅದರಲ್ಲಿ ಕಬ್ಬಿನ ಫಸಲನ್ನು ಬೆಳೆಯುತ್ತಿದ್ದನು. ಆದರೆ ತಾನು ಶ್ರೀಮಂತನಾಗುವ ದುರಾಸೆ ಈತನನ್ನು ಕಾಡುತ್ತಿತ್ತು. ಅದ್ಯಾರಿಗೂ ಗೊತ್ತಾಗದಂತೆ ಕಬ್ಬಿನ ಫಸಲಿನ ನಡುವೆ ಉಪ ಬೆಳೆಯಾಗಿ ಗಾಂಜಾ ಬೆಳೆಯನ್ನು ನಟ್ಟ ನಡುವೆ ನಾಟಿ ಮಾಡಿದ್ದನು. ಈಗಾಗಲೇ ಗಾಂಜಾ ಗಿಡಗಳು ಬಲಿತು ಕಟಾವಿಗೆ ಬಂದಿದ್ದವು. ಕೆಲವಷ್ಟು ಕತ್ತರಿಸಿ ಒಣಗಿದ ಗಾಂಜಾ ಸೊಪ್ಪು ಮಾರಾಟ ಮಾಡಲು ತಯಾರಿಸಿ ಕಂಚಕರವಾಡಿ ತನ್ನ ಮನೆಯ ಮುಂದಿರಿಸಿದ್ದನು. ತಾನು ಮಾಡುತ್ತಿದ್ದ ಗುಟ್ಟಾದ ಐನಾತಿ ದಂಧೆ ಯಾರಿಗೂ ಗೊತ್ತಾಗದಂತೆ ಎಚ್ಚರ ವಹಿಸಿದ್ದನು.



ಎಸ್ಪಿ ಡಾ. ಭೀಮಾಶಂಕರ ಗುಳೇದ



ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.



ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

### ಖಚಿತವಾದ ಮಾಹಿತಿ ಬಂದಿತು...

ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಎಸ್. ಮಂಟೂರ ತುಂಬಾ ಚತುರ ಮತ್ತು ಧಾಡಸಿ ಅಧಿಕಾರಿ. ಎಂದಿಗೂ ಯಾವುದೇ ಬಿಡೆ, ಮುರುವತ್ತು, ಪ್ರಭಾವಗಳಿಗೆ ಒಳಗಾಗದೇ ದಕ್ಷತೆಯಿಂದ ಕಾನೂನು ಮತ್ತು ಸುವ್ಯವಸ್ಥೆ ನಿಭಾಯಿಸಿಕೊಂಡು ಬಂದ ದಿಟ್ಟ ಅಧಿಕಾರಿ ಎಂದು ಹೆಸರಾದವರು. ಈ ಮೊದಲೇ ತಮ್ಮ ಆಧೀನದಲ್ಲಿ ಬರುವ ಪಿಎಸ್ಐಗಳಾದ ಶಿವಶಂಕರ ಮುಕರಿ ಮತ್ತು ನರಸಿಂಹರಾಜು ಜೆ.ಡಿ. ಹಾಗೂ ಸಿಬ್ಬಂದಿಗಳ ಸಭೆ ಕರೆದು ಖಡಕ್ ಸೂಚನೆ ನೀಡಿ ಯಾವುದೇ ರೀತಿಯ ಅಕ್ರಮಗಳು ಜರುಗದಂತೆ ಎಚ್ಚರ ವಹಿಸಲು ಸೂಚಿಸಿದ್ದರು. ಇನ್ಸ್‌ಪೆಕ್ಟರ್ ಮಂಟೂರ ಅವರಿಗೆ ಸಾಕಷ್ಟು ವಿಶ್ವಾಸಾರ್ಹ ಮಾಹಿತಿದಾರರು ಇದ್ದಾರೆ. ಇತ್ತೀಚಿಗೆ ತಮ್ಮ ಸಿಬ್ಬಂದಿಗಳು ಖಚಿತ ಮಾಹಿತಿ ಆಧರಿಸಿ ಗಾಂಜಾ ಬೆಳೆದ ರೈತನನ್ನು ಪತ್ತೆಹಚ್ಚಿದ್ದರು. ಸದರಿ ವಿಷಯವನ್ನು ಇನ್ಸ್‌ಪೆಕ್ಟರ್ ಮಂಟೂರ ಮುಂದೆ ತಿಳಿಸಿದರು. ತಕ್ಷಣ ಅವರು ತಡ ಮಾಡದೇ ಅಥಣಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ವಿಷಯ ತಿಳಿಸಿ ಅವರಿಂದ ಸೂಕ್ತ ನಿರ್ದೇಶನ ಪಡೆದುಕೊಂಡು ದಾಳಿಗೆ ಸಿದ್ಧತೆ ನಡೆಸಿ ಇದಕ್ಕಾಗಿ ವಿಶೇಷ ತನಿಖಾ ತಂಡವನ್ನು ರಚಿಸಿದರು.


### 7.81 ಲಕ್ಷ ರೂ.ಗಳ 89 ಕೆಜಿ ಗಾಂಜಾ...

ಕ್ರೈಂ ಪಿಎಸ್ಐ ನರಸಿಂಹರಾಜು ಜೆ.ಡಿ., ಎಎಸ್ಐ ಎಸ್.ಡಿ. ಹಮ್ಮನವರ, ಮುಖ್ಯಪೇದೆಗಳಾದ ಆರ್.ಬಿ. ಖಾನಾಪೂರೆ, ಎಸ್.ಎಸ್. ಸಾಸನೂರ, ಕೆ.ಎ. ಡಭಾಜ, ಚಂದ್ರು ಪಾಟೀಲ, ಪೇದೆಗಳಾದ ಆರ್.ಹೆಚ್. ಗಸ್ತಿ, ಎಂ.ಎಂ. ರಾಜಮಾನಿ, ವಿಠ್ಠಲ ಹೊರಟ್ಟಿ, ಬಿ.ಸಿ. ಕಾಂಬಳೆ ಇವರನ್ನೊಳಗೊಂಡ ತಂಡ ಮತ್ತು ಸರಕಾರಿ ಪಂಚರು, ತೂಕ ಮಾಡುವ ಮಶೀನ್ ಸಮೇತ ದಿನಾಂಕ 18-11-2024ರಂದು ಮುಂಜಾನೆ 11.30 ಗಂಟೆಗೆ ನಂದಿಕುರಳಿ ವ್ಯಾಪ್ತಿಯ ಪಾಲಿನಿಂದ ಮಾಡಿದ್ದ ರೈತ ರಾಯಪ್ಪ ಸತ್ತೆಪ್ಪ ತೋಳೆ ಇವರ ಜಮೀನಿಗೆ ಎಂಟ್ರಿ ಕೊಟ್ಟರು. ಪೊಲೀಸ್ ತಂಡವನ್ನು ಕಂಡ ರೈತನಿಗೆ ನಡುಕ ಶುರುವಾಗಿತ್ತು.



7.81 ಲಕ್ಷ ರೂ.ಗಳ ಮೌಲ್ಯದ 89 ಕೆಜಿ ಗಾಂಜಾ ಜಪ್ತಿ ಮಾಡಿಕೊಂಡಿರುವ ರಾಯಭಾಗ ಪೊಲೀಸರು


ಕಬ್ಬಿನ ಫಸಲಿನ ನಡುವೆ ಹುಲುಸಾಗಿ ಬೆಳೆದು ಕಟಾವಿಗೆ ಸಿದ್ಧವಾಗಿ ನಿಂತಿದ್ದ ಬಲಿತ ಗಿಡಗಳು ಬೆಳೆದು ನಿಂತಿದ್ದವು. ಪೊಲೀಸ್ ತಂಡ ಇಡೀ ಗಾಂಜಾ ಬೆಳೆಯನ್ನೆಲ್ಲ ಸರ್ಚ್ ಮಾಡಿ ಪಂಚನಾಮೆ ಕೈಗೊಂಡು ಗಾಂಜಾದ ಮೌಲ್ಯ ಮಾಪನ ಮಾಡಿದರು. ಈ ಸಂದರ್ಭದಲ್ಲಿ ಸರಕಾರಿ ಗೆಜೆಟೆಡ್ ಅಧಿಕಾರಿಗಳು ಪಂಚರು ಹಾಜರಿದ್ದರು. ರೈತ ವಾಸಿಸುವ ಮನೆಯ ಮುಂದೆ ಕೂಡಾ ದಾಳಿ ಮಾಡಿದಾಗ ಈ ಸಂದರ್ಭದಲ್ಲಿ 1) ಅರ್ಧಂಬರ್ಧ ಒಣಗಿದ ಎಲೆ, ಹೂ, ಬೀಜ ಇದ್ದ ಗಾಂಜಾ ತುಂಬಿದ ಪ್ಲಾಸ್ಟಿಕ್ ಗೊಬ್ಬರ ಚೀಲದಲ್ಲಿದ್ದ 5 ಕೆಜಿ 800 ಗ್ರಾಂ ಗಾಂಜಾ. ಇದರ ಮೌಲ್ಯ 87,000. 2) ಪ್ಲಾಸ್ಟಿಕ್ ಗೊಬ್ಬರ ಚೀಲದಲ್ಲಿ 57 ಸಾವಿರ ಮೌಲ್ಯದ 3 ಕೆಜಿ 800 ಗ್ರಾಂ ಗಾಂಜಾ ಜಪ್ತಿ. 3) ಹಸಿ ತೇವಾಂಶವಿದ್ದ ಗಿಡ, ಕಾಂಡ, ಬೇರು ಸಮೇತ ಎಲೆ, ಹೂ, ಬೀಜ ಇದ್ದ ಗಾಂಜಾದ 11 ಫೂಟ್ ಎತ್ತರದ 40 ಕೆಜಿ 650 ಗ್ರಾಂದ 3.25 ಲಕ್ಷ ರೂ. ಮೌಲ್ಯದ 15 ಗಿಡಗಳು ಜಪ್ತಿ. 4) ಹಸಿ ತೇವಾಂಶವಿದ್ದ ಗಿಡ, ಕಾಂಡ, ಬೇರು ಸಮೇತ ಎಲೆ, ಹೂ, ಬೀಜವಿದ್ದ 10.5 ಫೂಟ್ ಉದ್ದವಿದ್ದ 31 ಕೆಜಿ 600 ಗ್ರಾಂ. 2.52 ಲಕ್ಷ ರೂ. ಮೌಲ್ಯದ 12 ಗಿಡಗಳು ಜಪ್ತಿ. 5) ಹಸಿ ತೇವಾಂಶವಿದ್ದ ಎಲೆ, ಹೂ, ಬೀಜ ಇದ್ದ ಪ್ಲಾಸ್ಟಿಕ್ ಚೀಲದಲ್ಲಿದ್ದ 7 ಕೆಜಿ 470 ಗ್ರಾಂನಷ್ಟು ಗಾಂಜಾ ಇದರ ಮೌಲ್ಯ 59.760 ರೂ.ಗಳಾಗಿತ್ತು.



ಮಾರಲು ಸಿದ್ಧವಾಗಿರಿಸಿದ್ದ ಒಣ ಗಾಂಜಾ



ಡಿವೈಎಸ್ಪಿ ಪ್ರಶಾಂತ ಮುನ್ನೋಳಿ



ಇನ್ಸ್‌ಪೆಕ್ಟರ್ ಬಿ.ಎಸ್. ಮಂಟೂರ

ಈ ರೀತಿಯಾಗಿ ಒಣ ಗಾಂಜಾ 9 ಕೆಜಿ 600 ಗ್ರಾಂ ಅಂದಾಜು ಕಿಮ್ಮತ್ತು 1.44 ಲಕ್ಷ ರೂ.ಗಳು ಹಾಗೂ ಹಸಿ ಗಾಂಜಾ 79 ಕೆಜಿ 720 ಗ್ರಾಂ. ಅಂದಾಜು ಕಿಮ್ಮತ್ತು 6,37,760 ರೂ.ಗಳು. ಹೀಗೆ 89 ಕೆಜಿ ಗಾಂಜಾ ಜಪ್ತಿ ಮಾಡಿಕೊಂಡಿದ್ದು, ಇದರ ಮೌಲ್ಯ 7.81 ಲಕ್ಷ ರೂ.ಗಳು ಎಂದು ಅಂದಾಜಿಸಲಾಗಿದೆ. ಇಷ್ಟು ಬಾರಿ ಪ್ರಮಾಣದ ಗಾಂಜಾ ದೊರೆತ ಬಗ್ಗೆ ಎಎಸ್ಐ ಎಸ್.ಡಿ. ಹಮ್ಮನವರ ಸರಕಾರ ತರ್ಫೆಯಿಂದ ದೂರು ದಾಖಲಿಸಿದ್ದಾರೆ. ಕ್ರೈಂ ಪಿಎಸ್ಐ ನರಸಿಂಹರಾಜು ದೂರು ದಾಖಲಿಸಿಕೊಂಡಿದ್ದಾರೆ. ಗಾಂಜಾ ಜಪ್ತಿ ಮಾಡಿಕೊಂಡ ಸುದ್ದಿ ತಿಳಿಯುತ್ತಲೇ ಅಥಣಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಭೇಟಿ ನೀಡಿ ಪರಿಶೀಲಿಸಿದರು. ಪಿಎಸ್ಐ ಶಿವಶಂಕರ ಮುಕರಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

### ಅಭಿನಂದನೆಗಳು...

ರಾಯಭಾಗ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಎಸ್. ಮಂಟೂರ ಅವರ ನಿರ್ದೇಶನದಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಿದ ಕ್ರೈಂ ಪಿಎಸ್ಐ ನರಸಿಂಹರಾಜು ಜೆ.ಡಿ. ಮತ್ತು ಎಎಸ್ಐ ಎಸ್.ಡಿ. ಹಮ್ಮನವರ ಹಾಗೂ ಸಿಬ್ಬಂದಿಗಳ ಕರ್ತವ್ಯ ದಕ್ಷತೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಅವರು ಅಭಿನಂದಿಸಿದ್ದಾರೆ.



ಪಿಎಸ್ಐ (ಕಾ.ಸು) ಶಿವಶಂಕರ ಮುಕರಿ




ಪಿಎಸ್ಐ (ಕ್ರೈಂ) ನರಸಿಂಹರಾಜು ಜೆ.ಡಿ.

# ಬೀದರ: ವಿವಾಹಿತ ಮಹಿಳೆಯೊಂದಿಗೆ ಅನೈತಿಕ ಸಂಬಂಧದ ಶಂಕೆ; ಯುವಕನ ಶಿಶ್ನಕ್ಕೆ ಗಾಯ!


ಬಂಧಿತ ಆರೋಪಿ

ಬೀದರ
✍ ವೀರಶೆಟ್ಟಿ ಕುಂಬಾರ

ಆಕೆ ಮೂರು ಮಕ್ಕಳ ತಾಯಿಯಾದರೂ ಆಕೆಯ ಗಂಡನು ಇರುವಾಗಲೇ ಅವಿವಾಹಿತ ಯುವಕನೊಂದಿಗೆ ಅನೈತಿಕ ಸಂಬಂಧ ಹೊಂದಿದಳು. ದಿನಾಂಕ 19-9-2024ರಂದು ರಾತ್ರಿ ಸಮಯದಲ್ಲಿ ಮನೆಯಲ್ಲಿ ಗಂಡನಿಲ್ಲದ್ದರಿಂದ ಆ ಯುವಕನೊಂದಿಗೆ ಡಿಂಗ್ ಡಾಂಗ್ ನಡೆಸತೊಡಗಿದಾಗ ರೆಡ್‌ಹ್ಯಾಂಡ್ ಆಗಿ ಆಕೆಯ ಗಂಡನ ಅಣ್ಣ ಹಾಗೂ ಇತರೆ ಜನರು ಸೇರಿ ಹಿಡಿದು ಯುವನ


ಗಾಯಾಳು ಸುನೀಲ್


ಶಿಶ್ನಕ್ಕೆ ಗಾಯವಾಗಿರುವುದು

ಶಿಶ್ನದ ಮೇಲೆ ಹೊಡೆದು ಶಿಶ್ನವನ್ನು ಮಾರಕಾಸ್ತ್ರಗಳಿಂದ ಗಾಯಗೊಳಿಸಿದ ಘಟನೆ ಬೀದರ ಜಿಲ್ಲೆಯ ಮನ್ನಾಏಖೆಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯೊಳಗೆ ಬರುವ ಬಂಬಳಗಿ ಗ್ರಾಮದಲ್ಲಿ ಜರುಗಿದೆ.

ಗಾಯಾಳು ಸುನೀಲ ತಂದೆ ಬಾಬುರಾವ ಹೂಗೊಂಡ (27) ಭೈರನಳ್ಳಿ ಗ್ರಾಮದ ನಿವಾಸಿಯಾಗಿದ್ದು, ಅಜ್ಜಿಯ ಮನೆಯಾದ ಬಂಬಳಗಿ ಗ್ರಾಮದಲ್ಲಿ ವಾಸವಾಗಿರುತ್ತಾನೆ. ಸುಮಾರು ದಿವಸಗಳಿಂದ ಬಂಬಲಗಿ ಗ್ರಾಮದ ವಿವಾಹಿತ ಮಹಿಳೆ ಮಾಲಾಳ ಪರಿಚಯವಾಗಿರುತ್ತದೆ. ಸುನೀಲನು ಮಾಲಾಳ ಮನೆಗೆ ಆಗಾಗ ಹೋಗಿ ಬರುವುದು ಮಾಡುತ್ತಾ ಇರುತ್ತಾನೆ.

ದಿನಾಂಕ 19-9-2024ರಂದು ರಾತ್ರಿ 11 ಗಂಟೆಯ ಸುಮಾರಿಗೆ ಸುನೀಲನು ಮಾಲಾಳ ಮನೆಗೆ ಹೋಗಿದ್ದು, ಇಬ್ಬರು ಮನೆಯಲ್ಲಿರುವಾಗ ಮಾಲಾಳ ಗಂಡನ ಅಣ್ಣನಾದ ಶಾಮರಾವರವರು ಅವರು ಇರುವ ಕೋಣೆಯ ಹೊರಗಿನಿಂದ ಬಾಗಿಲು ಹಾಕಿದ್ದು ಒಳಗೆ ಕೂಡಿ ಹಾಕಿದ.

ದಿನಾಂಕ 20-9-2024 ರಂದು ಮುಂಜಾನೆ 8 ಗಂಟೆಯಲ್ಲಿ ಮಾಲಾಳಿಗೆ ಕೋಣೆಯಿಂದ ಹೊರಗೆ ತೆಗೆದು ಮಾಲಾಳ ಗಂಡ ಈರಪ್ಪಾ ತಂದೆ ಝುರಪ್ಪಾ (35) ಮನೆಯ ಬಾಗಿಲು ತೆಗೆದು ಸುನೀಲನಿಗೆ ಹೊರಗೆ ಎಳೆದು ಅವ್ಯಾಚ ಶಬ್ದಗಳಿಂದ ಬೈಯುತ್ತಾ ತನ್ನ ಹೆಂಡತಿಯೊಂದಿಗೆ ಏನು ಮಾಡುತ್ತಿದ್ದಿ ಎಂದು ಬೈದು ತನ್ನ ಕೈ ಮುಷ್ಠಿ ಮಾಡಿ ಕಪಾಳಕ್ಕೆ ಹೊಡೆದರು.

ನಂತರ ಶಾಮರಾವ ತಂದೆ ಝುರಪ್ಪಾ (45), ಸಂಜುಕುಮಾರ ತಂದೆ ಝುರಪ್ಪಾ (40), ವಿಜಯಲಕ್ಷ್ಮಿ ಗಂಡ ಸಂಜಕುಮಾರ (35), ವಿಠಲ ತಂದೆ ವೈಜಿನಾಥ (30), ದಶರಥ ತಂದೆ ಮಾರುತಿ ಮಲಗೊಂಡ (40), ರಘುನಾಥ ತಂದೆ ಅಶೋಕ ಜಮದಾರ (28), ಸುರೇಶ ತಂದೆ ಮಾರುತಿ (35) ಮತ್ತು ಪರಮೇಶ ತಂದೆ ಈಶ್ವರ (27) ಇವರೆಲ್ಲರು ಅಕ್ರಮ ಕೂಟ ರಚಿಸಿಕೊಂಡು ಸುನೀಲನ ಕೊಲೆ ಮಾಡುವ ಉದ್ದೇಶದಿಂದ ತಮ್ಮ ಕೈಯಲ್ಲಿನ ಬಡಿಗೆ ಮತ್ತು ಚಾಕು ಹಿಡಿದುಕೊಂಡು ಬಂದರು.

ಇವರೆಲ್ಲರು ಬರುತ್ತಿರುವುದನ್ನು ನೋಡಿ ಸುನೀಲನು ಅಲ್ಲಿಂದ ಹೋಗಲು ಪ್ರಯತ್ನಿಸಿದಾಗ ಶಾಮರಾವ ಮತ್ತು ವಿಜಯಲಕ್ಷ್ಮಿರವರು ಸುನೀಲನಿಗೆ ಅಕ್ರಮವಾಗಿ ತಡೆದು ಸುನೀಲನ ಎರಡು ಕೈಗಳನ್ನು ಒತ್ತಿ ಹಿಡಿದರು. ಸಂಜಕುಮಾರನು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಅವನ ಸೊಂಟಕ್ಕೆ ಹೊಡೆದು ಗುಪ್ತಗಾಯಪಡಿಸಿದನು ಮತ್ತು ವಿಠಲ ಹಾಗೂ ದಶರಥ ಇಬ್ಬರು ತಮ್ಮ ತಮ್ಮ ಕಾಲಿನಿಂದ ಸುನೀಲನ ಬೆನ್ನಿನ ಮೇಲೆ ಹಾಗೂ ಅವನ ಕಾಲಿಗೆ ಹೊಡೆದು ಗುಪ್ತಗಾಯಪಡಿಸಿದರು. ರಘುನಾಥನು ಸುನೀಲನಿಗೆ ಹೊಡೆಯಿರಿ ಎಂದು ಬೈಯುತ್ತಾ ಇತರರಿಗೆ ಪ್ರಚೋದಿಸುತ್ತಾ ಜೀವಸಹಿತ ಬಿಡಬೇಡಿ ಎಂದು ಬೈದು ಕೈಮುಷ್ಟಿ ಮಾಡಿ ಹೊಡೆದನು.

ಸುನೀಲನು ಅಲ್ಲಿಂದ ಓಡಿ ಹೋಗಲು ಪ್ರಯತ್ನಿಸಿದಾಗ ಸುರೇಶ ಮತ್ತು ಪರಮೇಶ ಇಬ್ಬರು ಸುನೀಲನಿಗೆ ಒತ್ತಿ ಹಿಡಿದಿಟ್ಟು ಆಕೆಯ ಗಂಡ ಈರಪ್ಪಾನು ಸುನೀಲನಿಗೆ ತನ್ನ ಹೆಂಡತಿ ಮಾಲಾಳ ಜೊತೆಯಲ್ಲಿ ಅನೈತಿಕ ಸಂಬಂಧ ಇಟ್ಟಿದ್ದಿ ಎಂದು ತಿಳಿದು ಅವನ ಕೊಲೆ ಮಾಡುವ ಉದ್ದೇಶದಿಂದ ಸುನೀಲನ ಪ್ಯಾಂಟ್ ಬಿಚ್ಚಿ ಚಾಕುವಿನಿಂದ ಅವನ ಶಿಶ್ನದ ಮೇಲೆ ಹೊಡೆದು ಶಿಶ್ನದ ಚರ್ಮ ತೆಗೆದು ರಕ್ತಗಾಯ ಮಾಡಿದರು.

ಅಷ್ಟರಲ್ಲಿ ಜಗಳದ ಸುದ್ದಿ ತಿಳಿದು ಅಲ್ಲಿಗೆ ಸುನೀಲನ ಮಾವ ಜಗನ್ನಾಥ ತಂದೆ ಮಾಣಿಕಪ್ಪಾ, ಸಂಬಂಧಿ ಚಂದ್ರಪ್ಪಾ ತಂದೆ ಭೀಮಣ್ಣಾ ಚಿಂತಲಗೇರಾ ನಿವಾಸಿ ಇವರುಗಳು ಜಗಳ ಬಿಡಿಸಿಕೊಂಡಿದ್ದರು. ವಿಷಯ ಗೊತ್ತಾಗಿ ಗಾಯಾಳುವಿನ ತಂದೆಯಾದ ಬಾಬುರಾವರವರು ಬಂದು ನೋಡಿ ಗಾಯಗೊಂಡ ಸುನೀಲನಿಗೆ ಖಾಸಗಿ ವಾಹನದಲ್ಲಿ ಹಾಕಿಕೊಂಡು ಮನ್ನಾಏಖಳ್ಳಿ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೀದರ ಸರಕಾರಿ ಆಸ್ಪತ್ರೆಗೆ ದಾಖಲಿಸಿದರು.

ಗಾಯಾಳು ಸುನೀಲನ ದೂರಿನ ಮೇರೆಗೆ ಮನ್ನಾಏಖೆಳ್ಳಿ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಮಲ್ಲಿಕಾರ್ಜುನರವರು ಠಾಣೆಯ ಅಪರಾಧ ಸಂಖ್ಯೆ 129/2024 ಕಲಂ 189(2), 191(2), 191(3), 126(2), 118(1), 109, 352, 351(3) ಷ !27(2) ಜೊತೆ 190 ಬಿಎನ್‌ಎಸ್ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದರು.


ಎಸ್ಪಿ ಪ್ರದೀಪ್ ಗುಂಟಿ


ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿ


ಹೆಚ್ಚುವರಿ ಎಸ್ಪಿ ಮಹೇಶ್ ಮೇಘಣ್ಣನವರ


ಸಿಪಿಐ ಶ್ರೀನಿವಾಸ್ ಅಲ್ಲಾಪೂರೆ


ಪಿಎಸ್‌ಐ ಮಹೇಂದ್ರಕುಮಾರ್

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಹೆಚ್ಚುವರಿ ಎಸ್ಪಿಗಳಾದ ಚಂದ್ರಕಾಂತ ಪೂಜಾರಿ, ಮಹೇಶ್ ಮೇಘಣ್ಣನವರ್, ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ, ಸಿಪಿಐ ಶ್ರೀನಿವಾಸ್ ಅಲ್ಲಾಪೂರೆರವರ ಸೂಕ್ತ ಮಾರ್ಗ ದರ್ಶನದಲ್ಲಿ ಪಿಎಸ್‌ಐ ಮಹೇಂದ್ರಕುಮಾರ್‌ರವರು ತನಿಖೆ ಕೈಗೊಂಡಿದ್ದಾರೆ.

☯

---

5 ☞

ಶಾಂತೂ, ನಾಗರಾಜುರವರು ಕೂಡಿಕೊಂಡು ಘಟನಾ ಸ್ಥಳಕ್ಕೆ ಬಂದು ನೋಡಿದಾಗ ಬರೇ ರಕ್ತ, ಮಾಂಸಖಂಡ ಬಿದ್ದುದ್ದು ಇದ್ದು ಸೋಮನಾಥನ ದೇಹ ಇರಲಿಲ್ಲ. ಕೊಲೆಗೈದವರು ಸೋಮನಾಥನ ಕಾಲಿಗೆ ಹಗ್ಗ ಕಟ್ಟಿ ಎಳೆದುಕೊಂಡು ಬೇರೆಡೆ ಬಿಸಾಕಿದರು. ಈ ವಿಷಯ ಮೃತನ ಪತ್ನಿ ಭಾಗ್ಯಶ್ರೀ ತಮ್ಮೂರಿನಿಂದ ಸಂಬಂಧಪಟ್ಟ ಸಬ್ ಅರ್ಬನ್ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದಳು.

ಗುನ್ನೆ ನಂ. 240/2024 ಕಲಂ 182(2), 191(3), 103(1) ಸಂಗಡ 190 ಬಿಎನ್‌ಎಸ್ 2023 ಪ್ರಕಾರ ದಾಖಲಿಸಿಕೊಳ್ಳಲಾಯಿತು. ಘಟನಾ ಸ್ಥಳಕ್ಕೆ ಹಿರಿಯ ಅಧಿಕಾರಿಗಳಾದ ಕಲಬುರಗಿ ನಗರ ಪೊಲೀಸ್ ಆಯುಕ್ತರಾದ ಡಾ. ಶರಣಪ್ಪ ಎಸ್.ಡಿ., ಡಿಸಿಪಿಗಳಾದ ಕವಿತಾ ಸಿಕ್ರಿವಾಲ, ಪ್ರವೀಣ್ ನಾಯಕ (ಅ ಮತ್ತು ಸಂ), ಎಸಿಪಿ ಡಿ.ಸಿ. ರಾಜಣ್ಣ, ಸಬ್ ಅಬ ದನ್ ಉಪವಿಭಾಗರವರು ಭೇಟಿ ನೀಡಿ ಆರೋಪಿಗಳ ಪತ್ತೆಗೆ ತಂಡ ರಚಿಸಲು ಸೂಚಿಸಿದರು. ಇದರ ಪ್ರಕಾರ ಪಿಐ ಸಂತೋಷ್, ಪಿಎಸ್‌ಐ ಬಸವರಾಜ, ಪಿಸಿಗಳಾದ ಭೀಮಾ ನಾಯಕ, ಮಂಜುನಾಥ, ಫಿರೋಜ್, ವೆಂಕಟೇಶ್, ಪ್ರಶಾಂತ್, ಮಹಾಂತೇಶ್, ಹೀಗೆ ತಂಡ ರಚಿಸಿ ವಿವಿಧ ಆಯಾಮಗಳ ಮೂಲಕ ಆಪಾದಿತರು ಇರುವಿಕೆ ಬಗ್ಗೆ ಖಚಿತ ಬಾತ್ಮಿ ಮೇರೆಗೆ ದಿನಾಂಕ 14-11-2024ರಂದು ಪ್ರಮುಖ ಆರೋಪಿ ಲಕ್ಷ್ಮೀಪುತ್ರ ತಂದೆ ಶರಣಬಸಪ್ಪ ತುಗದಿ, ಆರೋಪಿಗಳಾದ ಅಣ್ಣಾರಾಯ ತಂದೆ ಶಂಕ್ರೆಪ್ಪ ತುಗದಿ, ಮಾಳಪ್ಪ ತಂದೆ ಶಿವರಾಯ ಕಂಟಿಕರ, ಸಿದ್ದಾರೂಢ ತಂದೆ ಶರಣಬಸಪ್ಪ ತುಗದಿ, ಅಣ್ಣಪ್ಪಾ ತಂದೆ ಶರಣಬಸಪ್ಪ ತುಗದಿ, ಶರಣಬಸಪ್ಪ ತಂದೆ ಶ್ರೀಮಂತ ತುಗದಿ, ಜಗದೀಶ ತಂದೆ ದತ್ತಾತ್ರೇಯ ಗೋಗಾಂವ ಎಲ್ಲರೂ ಪಟ್ಟಣ ಗ್ರಾಮದವರು. ಇವರನ್ನು ಹೆಡೆಮುರಿಕಟ್ಟಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.



ಆಸ್ಪತ್ರೆಯಲ್ಲಿ ಮಹಜರ್ ಮಾಡುತ್ತಿರುವುದು


ರಸ್ತೆ ಮೇಲೆ ಎಳೆದು ಒಯ್ದಿದ್ದರಿಂದ ಕಾಲಿನ ಉಗುರುಗಳು ಕಿತ್ತು ಹೋಗಿರುವ ದೃಶ್ಯ

☯

## ಕಚಗುಳಿ

# ಅಂಕಲ್ ಆಟ ಆಡಿದ್ರು

ಅಂಕಲ್‌ಗೆ ನಲವತ್ತೆಂಟು ವರ್ಷ. ಅವರೆಂತ ಆಟ ಆಡಲು ಸಾಧ್ಯ ?

ಆಸೆ, ಉತ್ಸಾಹ ಮತ್ತು ತೀರಲಾರದ ಬಯಕೆಗಳಿದ್ದರೆ ಮತ್ತು ಅವಕಾಶ ಸಿಕ್ಕರೆ ಖಂಡಿತಾ ಆಟ ಆಡುತ್ತಾರೆ.

ಈ ಮಾತು ಕೇಳಿಲ್ವ?

ಹುಣಿಸೆ ಮರದ ಮುಪ್ಪಾದರೂ ಹುಳಿ ಮುಪ್ಪಲ್ಲ ಅಂತ. ಇದು ತುಂಬಾ ಮಂದಿಯ ವಿಚಾರದಲ್ಲಿ ನಿಜವಾಗಿದೆ ಬಿಡಿ.

ಆ ಅಂಕಲ್ ಯಾರು?

ಭದ್ರಗಿರಿಗೌಡ...! ಪರವಾಗಿಲ್ಲ ಶ್ರೀಮಂತಿಕೆ ಸಾಕಷ್ಟು ಇದೆ. ಅವರಿಗೆ ಹೆಡಂತಿ ಇದ್ದಾರೆ. ಆಕೆಗೆ ಹಲವಾರು ವರ್ಷಗಳಿಂದ ಕಾಯಿಲೆ. ಹಾಗಾಗಿ ಅವಳನ್ನು ಟಚ್ ಮಾಡುತ್ತಿಲ್ಲ.

ಆಕೆ ಪ್ರಾಯದಲ್ಲಿ ಸಹ ಸುಂದರಿ ಆಗಿರಲಿಲ್ಲ. ಹಾಗಾಗಿ ಭದ್ರಗಿರಿಗೌಡ ಅವರ ದೃಷ್ಟಿ ಆಗಾಗ ಪ್ರಾಯ ಮತ್ತು ಸೌಂದರ್ಯ ತುಂಬಿರುವ ಯುವತಿಯರ ಕಡೆ ಹೊರಳುತ್ತದೆ.

ಅವರಿಗೆ ಮಚ್ಚೆ ಇದೆ! ಇಪ್ಪತ್ತರ ಪ್ರಾಯದ ಯುವತಿನ ಪಟಾಯಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.

ಆ ಯುವತಿ ಯಾರು? ಆ ಪ್ರಸಂಗ ಏನು?

●●●

ಅವಳು ಮಾಲ...! ಮಾಲಾಶ್ರೀ ಅಲ್ಲ, ಜಯಮಾಲ ಅಥವಾ ಜಯಮಾಲಿನಿ ಅಲ್ಲ, ಕಾಲೇಜಿನ ಕನ್ಯೆ. ಸೂಪರ್ ಸೌಂದರ್ಯದ ಬೆಡಗಿ ಈ ಮಾಲ. ಅವಳ ಬಾಡಿ ಶೇಪ್ ಸೋ ಕಾಲ್ಡ್ ಬ್ಯುಟಿಫುಲ್. ಅವಳು ಸೆಕ್ಸೀ ಕ್ವೀನ್. ಇಂತಹ ಆಕರ್ಷಕ ರೂಪವತಿ ಯಾಕೆ ಈ ಅಂಕಲ್ ಬಲೆಗೆ ಬಿದ್ದಳು?

ಅದಕ್ಕೆ ಅವಳಪ್ಪ-ಅಮ್ಮ ಕಾರಣ!

●●●

ತಂದೆ - ಗುರುಪ್ರಸಾದ್. ತಾಯಿ - ಕಲಾವತಿ. ಇವರಿಬ್ಬರು ಸಹ ಸರ್ಕಾರದ ಪ್ರಮುಖ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಬಳದ ಜೊತೆಗೆ ಅದರ ಹತ್ತರಷ್ಟು, ಕೆಲವು ಸಲ ಇಪ್ಪತ್ತರಷ್ಟು ಗಿಂಬಳ ಬರುತ್ತದೆ.

ಒಬ್ಬಳೇ ಮಗಳು ಮಾಲ! ಗಂಡ-ಹೆಂಡತಿ ಇಬ್ಬರದ್ದೂ ಒಂದೇ ರೀತಿಯ ಗುಣ ಮತ್ತು ಸ್ವಭಾವ. ಮಹಾ ಜಿಪುಣರು. ಹತ್ತು ರೂಪಾಯಿ ಖರ್ಚು ಮಾಡಬೇಕಾದರೂ ಸಹ ಹತ್ತಾರು ಸಲ ಲೆಕ್ಕಾಚಾರ ಮಾಡುತ್ತಾರೆ. ಅವರು ವಾಸ ಮಾಡುತ್ತಿರೋದು ಕಡಿಮೆ ಬಾಡಿಗೆಯ ಸಾಧಾರಣವಾದ ಮನೇಲಿ.

ಹೆಂಡತಿಯ ಸಂಬಳ ಪೂರ್ತಿ ಉಳಿತಾಯದ ಡೆಪಾಸಿಟ್‌ಗಳಿಗೆ ಹೋಗುತ್ತದೆ. ತಂದೆಯ ಸಂಬಳದ ಬಹುಭಾಗ ಸಹ ತುಂಬಾ ಲಾಭ ಬರುವ ಶೇರುಗಳ ಮೇಲೆ ಇನ್‌ವೆಸ್ಟ್ ಮಾಡುತ್ತಾರೆ. ಇನ್ನು ಬರುವ ಲಂಚದ ಪ್ರಮಾಣ ಬ್ಲಾಕ್ ಹಣ ಅಲ್ವ? ಹಾಗಾಗಿ ಅದನ್ನು ಅವರು ಚಿನ್ನ ಖರೀದಿ ಮಾಡಿ ತುಂಬಾ ಜೋಪಾನವಾಗಿ ಮುಚ್ಚಿಡುತ್ತಾರೆ.

ಮನೇಲಿ ವಿಶೇಷವಾಗಿ ಯಾವ ತಿಂಡಿ, ಅಡುಗೆ ಮಾಡೋಲ್ಲ. ಯಾರೊಬ್ಬರೂ ಸಹ ತುಂಬಾ ಬೆಲೆಬಾಳುವ ಬಟ್ಟೆ ಹಾಕೋಲ್ಲ. ಚಿನ್ನ ಬೇಕಾದಷ್ಟಿದೆ. ಆದರೆ ಚಿನ್ನದ ಆಭರಣಗಳನ್ನು ಅವರಿಬ್ಬರೂ ಸಹ ಹಾಕಿಕೊಳ್ಳುವುದಿಲ್ಲ. ಮಗಳು ಮಾಲಳಿಗಂತೂ ಪ್ಯಾಕೆಟ್ ಮನಿ ಅಂತ ಹತ್ತು ರೂಪಾಯಿ ಕೊಡಲ್ಲ. ಒಳ್ಳೆಯ ಬಟ್ಟೆಗಳನ್ನು ಕೊಡಿಸಲ್ಲ. ಪಿಕ್‌ನಿಕ್ ಅಥವಾ ಟೂರ್‌ಗೆ ಕಳಿಸೋಲ್ಲ.

ಮಾಲ ಕಾಲೇಜಿನ ಕನ್ಯೆ! ಅವಳಿಗೆ ತನ್ನ ಗೆಳತಿಯರಂತೆ ಎಂಜಾಯ್ ಮಾಡಬೇಕು ಅಂತ ಆಸೆ ಇದೆ. ಅಪ್ಪಿತಪ್ಪಿ ಏನಾದರೂ ಹಣ ಕೇಳಿದರೆ ಗೋವಿಂದಾ... ಗೋವಿಂದಾ. ಬಾಯಿಗೆ ಬಂದಂತೆ ಬೈದು, ಅರ್ಧ ಗಂಟೆ ತಲೆ ಡ್ರಿಲ್ ಮಾಡಿಬಿಡುತ್ತಾರೆ. ಅವಳು ಅಳುತ್ತಾಳೆ. ಆತ್ಮೀಯ ಗೆಳತಿಯರ ಹತ್ತಿರ ಎಲ್ಲಾ ಹೇಳಿಕೊಂಡು ಬೇಜಾರು ಮಾಡಿಕೊಳ್ಳುತ್ತಾಳೆ. ಅವಳಿಗೆ ಎಲ್ಲಾ ಆಸೆಗಳಿವೆ.

ಪ್ರತಿದಿವಸ ಕಾಲೇಜ್ ಕ್ಯಾಂಟೀನ್‌ಗೆ ಹೋಗ್ಬೇಕು ಮತ್ತು ಗೆಳತಿಯರ ಇರೀತಿ ಹೊಸ ಡ್ರೆಸ್‌ಗಳನ್ನು ಹಾಕಬೇಕು ಮತ್ತು ಆಧುನಿಕ ರೀತಿಯ ಮೊಬೈಲ್ ಮತ್ತು ಇನ್ನಿತರ ಬೆಲೆಬಾಳುವ ಫ್ಯಾಷನಬಲ್ ಆರ್ಟಿಕಲ್‌ಗಳನ್ನು ತರಬೇಕು ಎಂಬ ಆಸೆಯಾಗಿದೆ.

ಮತ್ತೊಂದು ಆಸೆ ಇದೆ. ಪಬ್ ಬಾರ್‌ಗೆ ಹೋಗ್ಬೇಕು! ಗೆಳತಿಯರಲ್ಲಿ ಕೆಲವರು ಕಾಲೇಜಿಗೆ ಚಕ್ಕರ್ ಹೊಡೆದು ಬಾರ್‌ಗೆ ಹೋಗಿ ಚಿಲ್ಡ್ ಬಿಯರ್ ಕುಡಿದು ಅಮಲೇರಿಸಿಕೊಂಡು ಮಜಾ ಮಾಡುತ್ತಾರೆ.

ಧಾರಾಳವಾಗಿ ಹಣ ಖರ್ಚು ಮಾಡುತ್ತಾರೆ. ಇವಳು ಆಸೆ, ಬಯಕೆ ಕಣ್ಣುಗಳಿಂದ ನೋಡುತ್ತಾಳೆ. ಇವಳನ್ನು ಗೆಳತಿಯರು ಗೇಲಿ ಮಾಡುತ್ತಾರೆ. ಅನುಕಂಪದಿಂದ ಕೆಲವರು ಕ್ಯಾಂಟಿನ್‌ಗೆ ಕರೆಯುತ್ತಾರೆ. ಆದರೆ... ಆದರೆ ಅವಳು ಹೋಗುವುದಿಲ್ಲ. ಅದಕ್ಕೆ ಕಾರಣ ಏನು?

ಇವತ್ತು ಅವರು ಪಾರ್ಟಿ ಮಾಡಿಸಿದರೆ ನಾಳೆ ಇವಳು ಕೊಡಿಸಬೇಕಾಗುತ್ತದೆ. ಇವಳ ವ್ಯಾನಿಟಿ ಬ್ಯಾಗಲ್ಲಿ ಐವತ್ತು ರೂಪಾಯಿ ಇರುತ್ತದೆ. ಅದನ್ನು ಖರ್ಚು ಮಾಡಲಾರಳು. ಮಾಡಲು ಅಧಿಕಾರ ಇಲ್ಲ.

ಮನೆಗೆ ಹೋದ ಕೂಡಲೇ ಅವಳ ತಂದೆ-ತಾಯಿ ವ್ಯಾನಿಟಿ ಬ್ಯಾಗ್ ನೋಡುತ್ತಾರೆ. ಐವತ್ತು ರೂಪಾಯಿ ಅದೇ ರೀತಿ ಇರಬೇಕು. ಹತ್ತು ರೂಪಾಯಿ ಖರ್ಚು ಮಾಡಿದ್ದರೂ ಒಂದು ಗಂಟೆ ತಲೆ ಕೊರೆಯುತ್ತಾರೆ. ಇದೆಂತಹ ಬದುಕು?

ಅವಳಿಗೆ ಈ ಆಲೋಚನೆ ಬಂದಿತ್ತು. ಯಾಕೆ ಕಳ್ಳತನ ಮಾಡಬಾರದು? ಬೀರುವಿನ ಲಾಕರ್‌ನಲ್ಲಿ ಬೇಕಾದಷ್ಟು ಹಣ ಇಟ್ಟಿರುತ್ತಾರೆ. ಅದರಲ್ಲಿ ಐದು ಸಾವಿರ ತೆಗೆದರೂ ಕೂಡಲೇ ಗೊತ್ತಾಗುವುದಿಲ್ಲ. ಆದರೆ ನೋ... ನೋ ಚಾನ್ಸ್! ಯಾಕೆ ಅಂದರೆ ಲಾಕರ್ ಕೀ ಇವಳಿಗೆ ಸಿಗದಂತೆ ಬೇರೆ ಕಡೆ ಇಟ್ಟಿರುತ್ತಾರೆ.

ಅವಳು ತಲೆ ಚಚ್ಚಿಕೊಂಡು ಅಳುತ್ತಾಳೆ. ಕೆಲವೊಂದು ಸಲ ಅಪ್ಪ-ಅಮ್ಮನ ಜೊತೆ ಈ ವಿಚಾರವಾಗಿ ಜಗಳ ಆಡುತ್ತಾಳೆ. ಆದರೆ ಅವರು ಕೇರ್ ಮಾಡುವುದಿಲ್ಲ. ರಂಪ, ರಾದ್ಧಾಂತ ಮಾಡಿ ಮಗಳ ಬಾಯಿ ಮುಚ್ಚಿಸುತ್ತಾರೆ. ಇದೇ ಅವಳ ಬದುಕು! ಮಕ್ಕಳು ದಾರಿ ತಪ್ಪಲು ಮನೆಯ ವಾತಾವರಣ ಮತ್ತು ಅಪ್ಪ-ಅಮ್ಮನ ವಿಪರೀತ ಶಿಸ್ತಿನ ವರ್ತನೆ ಕಾರಣ ಆಗಿರುತ್ತದೆ.

ಅವಳು ಮಾನಸಿಕವಾಗಿ ರೋಸಿದ್ದಾಳೆ. ಆತ್ಮೀಯ ಗೆಳತಿಯೊಬ್ಬಳು ''ಏ ಮಾಲ... ನೀನು... ನೀನು ಚೆಲುವೆಯರಲ್ಲಿ ಚೆಲುವೆ. ನೀನು ಗ್ರೀನ್ ಸಿಗ್ನಲ್ ನೀಡಿದರೆ, ಕಾಲೇಜಿನ ಪಡ್ಡೆ ಯುವಕರಲ್ಲಿ ಯಾರಾದರೂ ಬಾಯ್ ಫ್ರೆಂಡ್ ಆಗುತ್ತಾರೆ. ಅವರಿಂದ ಬೇಕಾದಷ್ಟು ಹಣ ಸಿಗುತ್ತದೆ.

''ಏ ಮಾಲ... ನಾವು ಎಂಜಾಯ್ ಮಾಡ್ತಿರೋದು ಅಪ್ಪ-ಅಮ್ಮ. ಕೊಡುವ ಪ್ಯಾಕೇಟ್ ಮನಿಯಿಂದ ಅಲ್ಲ. ನಾವು ನಗು ನಗುತ್ತಾ ಅವರ ಜೊತೆ ಬಾರ್ ಮತ್ತು ಸಿನಿಮಾಗಳಿಗೆ ಹೋಗುತ್ತೇನೆ. ಎಲ್ಲಾ ಅವರೇ ಖರ್ಚು ಮಾಡುತ್ತಾರೆ. ಅಷ್ಟೇ ಅಲ್ಲ, ನಾವು ಶಾಪಿಂಗ್ ಮಾಡಿದರೂ ಸಹ ಅವರೇ ಕೊಡುತ್ತಾರೆ. ನೀನು ಒಪ್ಪಿಕೊಂಡರೆ ಶ್ರೀಮಂತ ಯುವಕನನ್ನು ಪರಿಚಯ ಮಾಡಿಸುತ್ತೇನೆ.''

ಮಾಲ ಒಪ್ಪಿರಲಿಲ್ಲ. ಅವಳಿಗೆ ತುಂಬಾ... ತುಂಬಾ ಆಸೆಯಾಗುತ್ತಿದೆ. ಅವಳಿಗೆ ಕಂಟ್ರೋಲ್ ಮಾಡಲು ಆಗುತ್ತಿಲ್ಲ. ಆಸೆ ಪ್ರಚೋದಿಸುತ್ತಿದೆ. ಹಣ ಬೇಕು... ಬೇಕೇ ಬೇಕು! ಆದರೆ ಬಾಯ್ ಫ್ರೆಂಡ್‌ಗಳ ಜೊತೆ ಹೋಗಲಾರಳು. ಅದು ಅಪ್ಪ-ಅಮ್ಮನಿಗೆ ಗೊತ್ತಾದರೆ, ಬೇರೆ ರೀತಿ ಎಡವಟ್ಟಾದರೆ ಹೆಸರಿಗೆ ಕಳಂಕ ಬರುತ್ತೆ. ಅಪಪ್ರಚಾರ ಆಗಿ ಕಾಲೇಜಿಗೆ ಗುಡ್‌ಬೈ ಹೇಳಬೇಕಾಗುತ್ತದೆ.

ಅವಳು ಮಾನಸಿಕವಾಗಿ ರೆಡಿಯಾಗಿದ್ದಾಳೆ. ಅವಳ ಅಂತರಂಗದಲ್ಲಿ ಆಸೆ ಸುಪ್ತವಾಗಿದೆ. ಆದರೆ ಹಿಂಜರಿಯುತ್ತಿದ್ದಾಳೆ.

●●●

ಅಂಕಲ್ ಭದ್ರಗಿರಿಗೌಡ! ಅವರು ಕಾಲೇಜಿನ ಲೆಕ್ಚರರ್. ಉತ್ತರ ಪತ್ರಿಕೆಗಳ ಮೌಲ್ಯ ಮಾಪನಕ್ಕೆ ಅಂತ ಈ ಊರಿಗೆ ಬಂದಿದ್ದಾರೆ. ಹತ್ತು ದಿನಗಳ ಲಾಡ್ಜ್‌ನಲ್ಲಿ ಉಳಿಯಲು ಬೇಜಾರಾಗಿದ್ದರಿಂದ ಗೆಳೆಯನ ಮನೆಗೆ ಬಂದರು.

ಗೆಳೆಯ... ಜಿಪುಣ ಗೆಳೆಯನ ಗುಣ ಮತ್ತು ಸ್ವಭಾವ ಗೊತ್ತಿದ್ದರಿಂದ ಕಾರಿನ ಡಿಕ್ಕಿಯಲ್ಲಿ ಎಲ್ಲಾ ತಂದಿದ್ದರು.

ಐವತ್ತು ಕೆಜಿ ಅಕ್ಕಿ, ತರಕಾರಿ-ದಿನಸಿ ಸಾಮಾನು, ಎಲ್ಲರಿಗೂ ಬಟ್ಟೆಗಳು, ಮಾಲಳಿಗೆ ಮೊಬೈಲ್ ಗಿಫ್ಟ್, ಇನ್ನಿತರ ವಸ್ತುಗಳು.

ಇದರಿಂದ ಜಿಪುಣ ದಂಪತಿಗಳಿಗೆ ತುಂಬಾ... ತುಂಬಾ ಸಂತೋಷ ಆಗಿದೆ. ಸಡಗರ, ಸಂಭ್ರಮದ ಉಪಚಾರ ಮಾಡಿದರು. ಪ್ರತ್ಯೇಕ ಕೋಣೆಯ ವ್ಯವಸ್ಥೆಯನ್ನು ಮಾಡಿದರು. ಐದು ಸಾವಿರ ಕ್ಯಾಶ್ ಕೊಡುತ್ತಾ ''ನಾನಿರುವಾಗ ಬೇರೆ ಏನಾದರೂ ಸಾಮಾನು ತರಬೇಕಾದರೆ ಉಪಯೋಗಿಸಿಕೊಳ್ಳಿ.''

ಅವರು ಬೇಡ... ಬೇಡ ಎಂದು ಬಾಯಲ್ಲಿ ಹೇಳಿದರೂ ಹಣ ಪಡೆದಿದ್ದರು.

ದಂಪತಿಗಳು ಕೆಲಸಕ್ಕೆ ಹೋಗುತ್ತಾರೆ. ಆಗ... ಆಗ ಅಲ್ಲಿ ಯಾರೂ ಸಹ ಇರಲಿಲ್ಲ. ಭದ್ರಗಿರಿಗೌಡ ತುಂಬಾ ಮೆಲ್ಲಗೆ ''ಏ ಮಾಲ... ನಿನ್ನ ಹತ್ತಿರ ಡ್ರೆಸ್‌ಗಳಿಲ್ಲ. ಬಾ ಕಾರಲ್ಲಿ ಒಂದು ರೌಂಡ್ ಹೋಗಿ ಬರೋಣ. ನಿನಗೆ ಏನು ಬೇಕಾದರೂ ಕೊಡಿಸುತ್ತೇನೆ.''

ಅವಳ ಮುಖ ಅರಳಿತು. ಅವಳು ಉತ್ಸಾಹದಿಂದ ರೆಡಿಯಾದಳು. ನಗರದ ಪ್ರಮುಖ ಶಾಪಿಂಗ್ ಕಾಂಪ್ಲೆಕ್ಸ್‌ಗಳಲ್ಲಿ ಅವಳು ಕೇಳಿದ್ದನ್ನೆಲ್ಲಾ ಕೊಡಿಸಿದರು. ಹತ್ತು ಸಾವಿರ ಬಿಲ್ ಆಗಿದೆ.

ಮೊಬೈಲ್‌ಅನ್ನು ಗಿಫ್ಟ್ ಆಗಿ ಮನೆಗೆ ಬಂದ ಕೂಡಲೇ ಕೊಟ್ಟಿದ್ದರು. ಒಂದು ವರ್ಷದ ಕರೆನ್ಸಿ ಹಾಕಿಸಿದ್ದರು. ಅವಳಿಗೆ ದಿಲ್‌ಖುಷ್ ಆಗಿದೆ. ಅವಳು ಫ್ರೀಯಾಗಿದ್ದಾಳೆ. ನಗು, ನಗುತ್ತಾ ಅವರ ಜೊತೆ ಈಗ ಕಾಲ ಕಳೆಯುತ್ತಾಳೆ.

ಅವಳ ಕೈ ಹಿಡಿದರು. ಸುಂದರವಾದ ಬೆರಳುಗಳನ್ನು ಸವರುತ್ತಾ ''ಏ... ನೈಲ್ ಪಾಲೀಶ್ ಮಾಡಿಲ್ವ. ನಾಳೆ ನೀನು ಗ್ರಾಂಡ್ ಆಗಿ ರೆಡಿಯಾಗಬೇಕು. ನಿನಗೆ ಏನೇನು ಬೇಕು ಅಂತ ಹೇಳು. ಎಲ್ಲಾ... ಎಲ್ಲಾ ಕೊಡಿಸುತ್ತೇನೆ.

ಅವಳ ಮೈಗೆ ಮೈ ಒತ್ತಿಕೊಂಡು ನಿಂತು ಕೆನ್ನೆ ಹಿಂಡಿದರು. ತುಟಿಗಳನ್ನು ಸವರಿದರು. ಅವಳಿಂದ ವಿರೋಧ ಬರಲಿಲ್ಲ. ಫೋನ್ ಕಾಲ್ ಬಂದಿತು! ಗುರುಪ್ರಸಾದ್ ಅವರ ತಾತನಿಗೆ ಹಾರ್ಟ್ ಅಟ್ಯಾಕ್ ಆಗಿದ್ದರಿಂದ ಹೆಂಡತಿಯ ಜೊತೆ ಬೇರೆ ಊರಿಗೆ ಹೋಗಬೇಕಾಯಿತು.

ಫೋನ್ ಮಾಡಿ ಹೇಳಿದರು. ''ನೀನು, ಭದ್ರಗಿರಿಗೌಡ ಮನೇಲಿ ಊಟ ಮಾಡಿ ಮಲಗಿ.''

''ಆಗಲಿ ಡ್ಯಾಡಿ.''

ವಿಷಯ ತಿಳಿದ ಮೇಲೆ ಭದ್ರಗಿರಿಗೌಡ ''ಏ... ಏ ಮಾಲ... ನಿನಗೆ ಹೋಟೆಲ್ ಊಟ ಇಷ್ಟ ಅಂತ ನಂಗೆ ಗೊತ್ತಿದೆ. ಗ್ರಾಂಡ್ ಆಗಿರೋ ನಾನ್‌ವೆಜ್ ಊಟ ಕೊಡಿಸುತ್ತೇನೆ'' ಎಂದಾಗ ಅವಳು ಉತ್ಸಾಹದಿಂದ ರೆಡಿಯಾಗಿ ಅವರ ಜೊತೆ ಕಾರಲ್ಲಿ ಹೊರಟಳು.

ಕಾರು ಚಲಿಸುತ್ತಿದೆ. ಗೌಡ ಈಗ ಅವಳ ಕೈ ಮೇಲೆ ಕೈ ಹಾಕಿ ''ಏ ಮಾಲ... ಹತ್ತಿರ ಕೂರಬಾರದೆ'' ಎಂದಾಗ ಅವಳು ಅವರ ಮೈಗೆ ಮೈ ತಗುಲುವ ರೀತಿ ಕುಳಿತಳು. ಅವಳ ಕೈ ಎಳೆದು ತಮ್ಮ ಮುಖ, ಕತ್ತಿನ ತುಂಬಾ ಸವರಿಕೊಂಡಳು. ಬೆರಳುಗಳನ್ನು ಮುದ್ದಾಡಿದರು.

''ಮಾಲ... ನನಗೊಂದು ಆಸೆ ಇದೆ.''

ಅವಳು ನಗುತ್ತಾ ''ಏನದು?''

ಅವರು ಜೇಬಿನಿಂದ ಹತ್ತು ಸಾವಿರ ರೂಪಾಯಿ ಹಣ ತೆಗೆದು ಅವಳಿಗೆ ಕೊಡುತ್ತಾ ''ನಿನ್ನ ಹತ್ತಿರ ಸದಾ ಹಣ ಇರಬೇಕು. ನಿನ್ನ ಬ್ಯಾಂಕ್ ಡೀಟೈಲ್ಸ್ ಮೆಸೇಜ್ ಮಾಡು ಪ್ರತಿ ತಿಂಗಳೂ ಹತ್ತು ಸಾವಿರ ಹಾಕ್ತೀನಿ.''

ಅವಳು ಪುಳುಕಗೊಂಡಳು. ಮಜಾ ಮಾಡುವ ಅಂದರೆ, ಕಾಲೇಜಿನ ಗೆಳತಿಯರ ಜೊತೆ ಮಜಾ ಮಾಡುವ ಕನಸು ಕಾಣುತ್ತಿದ್ದಾಳೆ.

ಸ್ಟಾರ್ ಹೋಟೆಲ್‌ಗೆ ಬಂದರು. ಅವಳ ಕೈ ಬಿಟ್ಟಿಲ್ಲ. ಮೃದುವಾಗಿ ಅದುಮಿತ್ತಿದ್ದಾರೆ. ಬೆರಳುಗಳನ್ನು ತೀಡುತ್ತಿದ್ದಾರೆ.

''ಏ... ಮಾಲ... ನಿನಗೆ ನಾನ್‌ವೆಜ್ ಬೇಕಾ ಅಥವಾ ನಾರ್ತ್ ಇಂಡಿಯನ್ ಐಟಂ ಬೇಕಾ?''

''ನಾನ್‌ವೆಜ್ ಸ್ಪೆಷಲ್.''

''ಆದರೆ ನನಗೇನೂ ಬೇಡ.''

''ಅರೆ... ಯಾಕೆ... ಯಾಕೆ?''

''ನೀನು ನಾನ್‌ವೆಜ್ ತಿನ್ನು. ನಾನು ನಿನ್ನನ್ನು ತಿಂದು ಬಿಡ್ತೀನಿ'' ಎಂದು ಅವಳ ಎದೆ ಉಬ್ಬುಗಳ ಕಡೆ ನೋಡಿದರು.

ಅವಳ ಮುಖ ಕೆಂಪಾಯಿತು. ಒಂದು ಗಂಟೆ ಕಾಲ ಸ್ಪೆಷಲ್ ಊಟ ಮಾಡಿ ಹೊರಗೆ ಬಂದರು.

●●●

ರಾತ್ರಿ ಒಂಭತ್ತೂವರೆ. ಆ ರೂಮಲ್ಲಿ ಅವರಿಬ್ಬರೇ ಇದ್ದಾರೆ. ಅವರು ''ಮಾಲ... ಈಗಲೇ ಮಲಗಲು ನಿದ್ದೆ ಬರೋಲ್ಲ. ಇಸ್ಪೀಟ್ ಆಡೋಣ್ವ?''

''ಓಕೆ ರೆಡಿ ಅಂಕಲ್.''

''ನೀನು ಶೋ ಮಾಡಿದರೆ ಇಪ್ಪತ್ತೈದು ಸಾವಿರ ಕೊಡ್ತೀನಿ. ನಾನು ಗೆದ್ದರೆ ನನಗೆ ಆ ಹಣ ಬೇಡ. ಅದನ್ನ ನಿನಗೇ ಕೊಡ್ತೀನಿ. ನಾನು ಗೆದ್ದಿರೋದ್ರಿಂದ ನಾನು ಕೇಳಿದ್ದನ್ನು ನೀನು ಕೊಡಬೇಕು.''

ಅವಳು ಕೆಂಪಾದಳು.

''ನಿನ್ನ ಮುಖವನ್ನು ಮುದ್ದಾಡ್ತೀನಿ. ಐದು ನಿಮಿಷಗಳ ಕಾಲ ನಿನ್ನ ತುಟಿಗಳನ್ನು...''

ಅವಳು ಚಡಪಡಿಸಿದಳು.

''ಏನು... ಓಕೆನಾ'' ಎಂದು ಈಗ ಇಪ್ಪತ್ತೈದು ಸಾವಿರ ಇಟ್ಟರು.

ಅವಳ ಮುಖ ಅರಳಿತು. ಕೇವಲ ಐದು ನಿಮಿಷ ಕಿಸ್ ಮಾಡಲು ಇಪ್ಪತ್ತೈದು ಸಾವಿರ ಕೊಡುತ್ತಾರೆ. ಮನೇಲಿ ಯಾರೂ ಇಲ್ಲ. ಈ ಘಟನೆ ಗೌಪ್ಯವಾಗಿರುತ್ತದೆ. ಅವಳು ತಲೆಯಾಡಿಸಿದಳು. ಇಸ್ಪೀಟ್ ಆಡುತ್ತಿದ್ದಾರೆ. ಭದ್ರಗಿರಿ ಗೌಡ ಗೆದ್ದರು. ಆ ಕೂಡಲೇ ನೋಟಿನ ಕಂತೆಯನ್ನು ಎತ್ತಿ ಅವಳ ಕೈಗೆ ಕೊಟ್ಟು ''ಪಂದ್ಯದ ನಿಯಮದ ಪ್ರಕಾರ'' ಎಂದು ಹೇಳಿ ಅವಳ ಮುಖದತ್ತ ಬಾಗಿದರು.

ಅವಳು ನಡುಗುತ್ತಿದ್ದಾಳೆ. ಕಣ್ಣುಗಳನ್ನು ಮುಚ್ಚಿದ್ದಳು. ಮುಖ ಮೇಲೆ ಎತ್ತಿದಳು. ಅವರೀಗ ಅವಳನ್ನು ತಬ್ಬಿಕೊಂಡು ಮುದ್ದಾದ ತುಟಿಗಳನ್ನು ಚುಂಬಿಸಿದರು. ಕೆನ್ನೆಗೆ ಬಾಯಿ ಹಾಕಿದರು. ಅವಳು ಸಹಕರಿಸುತ್ತಿದ್ದಾಳೆ. ಅವಳನ್ನು ಬಿಗಿಯಾಗಿ ತಬ್ಬಿಕೊಂಡು ಬೆನ್ನು ಮತ್ತು ಹಿಂಭಾಗದ ಉಬ್ಬುಗಳನ್ನು ಸವರುತ್ತಿದ್ದಾರೆ. ಎಂಟು ನಿಮಿಷಗಳಾಯಿತು. ಅವಳ ತುಟಿಗಳು ಉರಿಯುತ್ತಿದೆ. ಅವಳು ದೂರ ಸರಿದಳು. ಟವಲ್ ಎತ್ತಿಕೊಂಡು ತುಟಿಗಳನ್ನು ಒರೆಸಿಕೊಂಡಳು.

ಎರಡನೆ ಆಟ ಪ್ರಾರಂಭವಾಯಿತು. ಪಂದ್ಯದ ಹಣ ಎಷ್ಟು? ನಲವತ್ತು ಸಾವಿರ. ಹದಿನೈದು ನಿಮಿಷಗಳ ಕಾಲ ಅವಳ ಎದೆ ಸೌಂದರ್ಯವನ್ನು ರಸಿಕನಿಗೆ ಕೊಡಬೇಕು. ನಲವತ್ತು ಸಾವಿರ! ಅವಳು ಒಪ್ಪಿಕೊಂಡಳು. ಶೋ ಮುಗಿಯಿತು.

ಅವರು ಅವಳ ಎದೆ ಭಾಗದ ಉಡುಪುಗಳನ್ನು ಸಡಿಲಿಸಿ ಶೃಂಗಾರದಾಟ ಆಡಿದರು. ಪ್ರಾಯದ ಯುವತಿ ಬಿಸಿಯಾಗಿದ್ದಾಳೆ. ಅವಳನ್ನು ತಬ್ಬಿಕೊಂಡು ಮಂಚದ ಹತ್ತಿರ ಕರೆತಂದು ಪುನಹ ಹಣ ಕೊಟ್ಟರು. ಭದ್ರಗಿರಿಗೌಡ ವಿಜೃಂಭಿಸಿದರು. ಅವಳಿಗೆ ಸುಖದ ಅನುಭವ ಆಯಿತು.

●●●

ಒಂದು ವಾರ ಮನೇಲಿದ್ದರು. ಹಲವಾರು ಸಲ ಸೇರಿದ್ದರು. ಇವಳು ಚೆನ್ನಾಗಿ ಹಣವನ್ನು ವಸೂಲಿ ಮಾಡಿದ್ದಳು.

ಭದ್ರಗಿರಿಗೌಡ ಊರಿಗೆ ಹೋಗಿದ್ದಾರೆ. ಇವಳಿಗೆ ಪ್ರತಿ ತಿಂಗಳು ಹಣ ಹಾಕಲಿಲ್ಲ. ಫೋನ್ ಸಹ ಮಾಡಲಿಲ್ಲ. ದಂಡಿಯಾಗಿ ಹಣ ಇದುದ್ದರಿಂದ ಗೆಳತಿಯರ ಜೊತೆ ಮಜಾ ಮಾಡಿದಳು.

ಮಾಲ ಪ್ರೆಗ್ನೆಂಟ್ ಆಗಿದ್ದಾಳೆ. ಭೀತಳಾಗಿ ಕಂಪಿಸುತ್ತಿದ್ದಾಳೆ. ಮುಂದೇನು ಗತಿ?

☯

# ತನ್ನ ಹಾದರಕ್ಕೆ ಅಡ್ಡ ಬಂದ ಗಂಡನನ್ನು ಮಿಂಡ ಮತ್ತವನ ಸ್ನೇಹಿತನಿಂದ ಕೊಲೆ ಮಾಡಿಸಿದ ಹೆಂಡತಿ!



9 ☞

ಉತ್ತರ ನೀಡಿದನು. ಕುಡುಕ ಮಗ ಎಲ್ಲಿಯಾದರೂ ಹೋಗಿರಬಹುದು ಇಂದು-ನಾಳೆ ಬಂದಾನು ಎಂದು ತಾಯಿ ದಾರಿ ಕಾಯುತ್ತಲೇ ಇದ್ದಳು. 'ಮಗ ಬದುಕಿದ್ದರೆ ತಾನೇ ಬಂದಾನು.' ಪರಿಚಯದವರು ಮತ್ತು ಸಂಬಂಧಿಕರು ಎಲ್ಲ ಕಡೆಗೆ ಹುಡುಕಿದರೂ ಕೂಡಾ ಮಲ್ಲಪ್ಪ ಬರಲೇ ಇಲ್ಲ. ಮಲ್ಲಪ್ಪನ ಕೊಲೆ ನಡೆದ ಒಂದೆರಡು ದಿನಗಳಲ್ಲಿ ಶವ ನೀರಿನಲ್ಲಿ ತೇಲಿತ್ತು. ಅಥಣಿ ಪೊಲೀಸರು ಅನಾಮಧೇಯ ಶವ ಎಂದು ಪಂಚನಾಮೆ ಮಾಡಿದ್ದರು. ಆದರೂ ಕೂಡಾ ಮಲ್ಲಪ್ಪ ಕಾಣೆಯಾದ ಬಗ್ಗೆ ದೂರು ಸಲ್ಲಿಸಿರಲಿಲ್ಲ.

**ದಾನಮ್ಮ-ಪ್ರಕಾಶ ಖುಷಿಯಿದ್ದರು...**

ಇತ್ತ ತಮ್ಮ ಅನೈತಿಕ ಸಂಬಂಧಕ್ಕೆ ಅಡ್ಡಗಾಲಾಗಿದ್ದ ಮಲ್ಲಪ್ಪ ಕಂಬಾರನ ಕೊಲೆ ಮಾಡಿ ವರ್ಷವಾಗುತ್ತ ಬಂದರೂ ಕೂಡಾ ಅದ್ಯಾರಿಗೂ ಗೊತ್ತಾಗಿಲ್ಲ. ಇನ್ನು ಏನಿದ್ದರೂ 'ನಾನು-ನೀನು' ಸುಖವಾಗಿರೋಣ ಎಂದು ಪ್ರಕಾಶ ವೈಯ್ಯಾರಿ ದಾನಮ್ಮಳಿಗೆ ಹೇಳಿದ್ದನು. ಇತ್ತೀಚೆಗಂತೂ ದಾನಮ್ಮ ಕಾಲು ಬಿಟ್ಟ ಕತ್ತೆಯಂತಾಗಿದ್ದಳು. ಸದಾಕಾಲ ಪ್ರಕಾಶನಿಗೆ ತನ್ನದೆಲ್ಲವನ್ನು ಎತ್ತೆತ್ತಿ ಕೊಡುತ್ತಲಿದ್ದಳು. ಪ್ರಕಾಶನು ಕೂಡಾ ಅಷ್ಟೇ ದಾನಮ್ಮಳಿಗೆ ದುಡ್ಡು-ಕಾಸು ಕಡಿಮೆಯಾಗದಂತೆ ನೋಡಿಕೊಂಡು ಅವಳನ್ನು ಎಲ್ಲದರಿಂದ ತೃಪ್ತಳಾಗಿರಿಸಿದ್ದನು.

**ತಾಯಿಗೆ ಗೊತ್ತಾದ ಮಗನ ಕೊಲೆ...**

ಮಲ್ಲಪ್ಪ ಕಂಬಾರನ ತಾಯಿ ಪರವ್ವ ತುಂಬಾ ದುಃಖಿತಳಾಗಿದ್ದಳು. ಒಂದು ವರ್ಷವಾಗುತ್ತ ಬಂದರೂ ಮಗನ ಇರುವಿಕೆಯ ಸುಳಿವು ಇರಲಿಲ್ಲ. ಇತ್ತೀಚೆಗಂತೂ ಸೊಸೆ ದಾನವ್ವ ಮತ್ತವಳ ಮಿಂಡನ ಒಡನಾಟ ಹೊತ್ತು-ಗೊತ್ತಿಲ್ಲದೆ ನಡೆಯುತ್ತಿತ್ತು. ಇವರಿಬ್ಬರ ಸರಸ, ಸಲ್ಲಾಪ ಕಂಡು ಹಡೆದೊರರಲ್ಲಿ ಬೆಂಕಿ ಬಿದ್ದಂತಾಗುತ್ತಿತ್ತು. ಇತ್ತೀಚೆಗೆ 13-11-2024ರಂದು ರಾತ್ರಿ 8 ಗಂಟೆಯ ಸುಮಾರಿಗೆ ದಾನವ್ವ ಮಿಂಡ ಪ್ರಕಾಶನೊಡನೆ ಗುಸು... ಗುಸು ಮಾತನಾಡುವುದು ನಡೆದಿತ್ತು. 'ನಮ್ಮಿಬ್ಬರ ಸುಖಕ್ಕೆ ಅಡ್ಡಗಾಲಾಗಿದ್ದ ನಿನ್ನ ಗಂಡ ಮಲ್ಯಾನ ಯಾರಿಗೂ ಗೊತ್ತಾಗದಂತೆ ಮರ್ಡರ್ ಮಾಡಿ ಹೊಳೆಗೆ ಎಸೆದಿದ್ದೇವೆ. ಒಂದು ವರ್ಷ ಆಗುತ್ತ ಬಂದರೂ ಅದ್ಯಾರಿಗೂ ಗೊತ್ತಾಗಿಲ್ಲ. ನಮ್ಮ ದೊಸ್ತ ರಾಮಪ್ಪ ಮಾದರ ಕೂಡಾ ಯಾರ ಮುಂದೆ ಬಾಯಿ ಬಿಟ್ಟಿಲ್ಲ. ಇನ್ನ ನಮಗ ಹೆಂಗ ಬೇಕು ಹಂಗ ಇರೋಣ ಎಂದು ಪ್ರಕಾಶ ಬೆನ್ನಳ್ಳಿ ಹೇಳಿದ್ದನ್ನು ಕೇಳಿಸಿಕೊಂಡ ಪರವ್ವ ಕಂಬಾರ 'ಏನೋ ಪ್ರಕಾಶ ಅದು' ಎಂದಾಗ 'ನಾವ ಮಾತಾಡಿದ್ದ ಕೇಳಿಸಿಕೊಂಡಿದಿ. ಇದನ ಯಾರ ಮುಂದ ಹೇಳಿದ್ದಾದರ ನಿನಗೂ ಮಲ್ಯಾನಂಗ ಕೊಂದ ಬಿಡತೇನ ಹುಷಾರ್' ಎಂದು ಸರ್ರಕ್ಕನೇ ತನ್ನ ಮೋಟಾರ್ ಸೈಕಲ್ ಏರಿ ಹೋದನು. ಇದರಿಂದ ತೀವ್ರ ಹೆದರಿದ ಪರವ್ವ ಮನೆಯಲ್ಲಿ ಸುಮ್ಮನೆ ಉಳಿದಳು.

**ಮಗನ ಕೊಲೆ... ಪೊಲೀಸರಿಗೆ ದೂರು...**

ತನ್ನ ಮಗನನ್ನು ಕೊಲೆ ಮಾಡಿದ ಸಂಗತಿ ಗೊತ್ತಾದ ಮರುದಿನ ದಿ. 14-11-2024ರಂದು ನೇರವಾಗಿ ಪರವ್ವ ಕಂಬಾರ ತನ್ನ ಪರಿಚಯದವರೊಂದಿಗೆ ಹಾರೂಗೇರಿ ಪೊಲೀಸ್ ಠಾಣೆಗೆ ಧಾವಿಸಿ ಬಂದು ಅಂದು ಕರ್ತವ್ಯದ ಮೇಲಿದ್ದ ಪಿಎಸ್ಐ ಮಾಳಪ್ಪ ಪೂಜೇರಿಯನ್ನು ಕಂಡು ಮುಖಕ್ಕೆ ಸೆರಗು ಹಾಕಿಕೊಂಡು ರೋಧಿಸುತ್ತಲೇ 'ಸಾಹೇಬ್ರ ಯಪ್ಪಾ ನನ್ನ ಮಗನ ಖೂನಿ ಮಾಡ್ಯಾರ್ರಿ' ಎಂದು ಬಿಕ್ಕತೊಡಗಿದ್ದಳು. ತಕ್ಷಣ ಪಿಎಸ್ಐ ಮಾಳಪ್ಪ ಅವರು ವೃದ್ಧೆಯನ್ನು ಸಮಾಧಾನಪಡಿಸಿ ನಡೆದು ಹೋದ ಸಂಗತಿ ಬಗ್ಗೆ ವಿವರವಾಗಿ ಆಲಿಸಿದರು. ತಮ್ಮ ಅನೈತಿಕ ಸಂಬಂಧಕ್ಕೆ ಅಡ್ಡ ಬಂದ ಕಾರಣ ಸೊಸೆ ದಾನಮ್ಮ ಅವಳ ಮಿಂಡ ಪ್ರಕಾಶ ಬೆನ್ನಳ್ಳಿ, ಮತ್ತವನ ಸ್ನೇಹಿತ ರಾಮಪ್ಪ ಮಾದರ ಮನೆಯಿಂದ ದಿನಾಂಕ 22-12-2023ರಂದು ರಾತ್ರಿ 8 ಗಂಟೆಗೆ ಕರೆದೊಯ್ದು ಮರ್ಡರ್ ಮಾಡಿ ಹೊಳೆಗೆ ಬೀಸಾಕಿದ್ದ ಬಗ್ಗೆ ವಿವರವಾದ ದೂರನ್ನು ಪಡೆದುಕೊಂಡರು. ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಸಿಪಿಐ ರವಿಚಂದ್ರ ಡಿ.ಬಿ., ಅಥಣಿ ಡಿವೈಎಸ್ಪಿ ಪ್ರಸಾಂತ ಮುನ್ನೋಳಿ ಅವರಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡರು.


**ಸಿಪಿಐ ರವಿಚಂದ್ರ ಡಿ.ಬಿ. ಚಾಣಾಕ್ಷ ತನಿಖೆ...**

ಸುಮಾರು ಒಂದು ವರ್ಷದ ಹಿಂದೆ ನಡೆದಿದ್ದ ಇಟ್ನಾಳ ಗ್ರಾಮದ ಮಲ್ಲಪ್ಪ ಪರಪ್ಪ ಕಂಬಾರನ ನಿಗೂಢ ಕೊಲೆಯನ್ನು ಸಿಪಿಐ ರವಿಚಂದ್ರ ಡಿ.ಬಿ. ಅವರು ಸವಾಲಾಗಿ ಸ್ವೀಕರಿಸಿದರು. ಕೊಲೆ ಪ್ರಕರಣದಲ್ಲಿ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿಗಳಾದ ಎಸ್ಪಿ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಅಥಣಿ ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಇವರ ನಿರ್ದೇಶನದಲ್ಲಿ ಅತ್ಯಂತ ರಹಸ್ಯವಾಗಿ ತನಿಖೆಗೆ ಮುಂದಾದರು.

ಪಿಎಸ್ಐ (ಕಾ.ಸು) ಮಾಳಪ್ಪ ಪೂಜೇರಿ, ಸಿಬ್ಬಂದಿಗಳಾದ ಬಿ.ಎಲ್. ಹೊಸಟ್ಟಿ, ರಮೇಶ ಮುಂದಿನಮನಿ, ಅಶೋಕ ಶಾಂಡಗೆ, ಪ್ರಕಾಶ ಸಪ್ತಸಾಗರ, ಹೆಚ್.ಆರ್. ಅಂಬಿ, ಟೆಕ್ನಿಕಲ್ ಸೆಲ್‌ನ ವಿನೋದ ಠಕ್ಕಣ್ಣವರ ಸೇರಿದಂತೆ ಒಂದು ವಿಶೇಷ ತನಿಖಾ ತಂಡ ರಚಿಸಿ ನೇತೃತ್ವವನ್ನು ರವಿಚಂದ್ರ ಡಿ.ಬಿ. ವಹಿಸಿಕೊಂಡು ಅಗತ್ಯ ನಿರ್ದೇಶನಗಳನ್ನು ನೀಡುತ್ತಲಿದ್ದರು. ದಿ. 27-12-2023ರಂದು ಅಥಣಿ ಪೊಲೀಸ್ ಠಾಣೆ ವ್ಯಾಪ್ತಿಯ ಕೃಷ್ಣಾ ನದಿಯಲ್ಲಿ ಸಿಕ್ಕ ಶವವು ಮಲ್ಲಪ್ಪ ಬಸಪ್ಪ ಕಂಬಾರನದಾಗಿತ್ತು. ಈ ಕುರಿತು ಕೊಲೆಯಾದ ಮಲ್ಲಪ್ಪನ ತಾಯಿಯಿಂದ ದೃಢಪಡಿಸಿಕೊಂಡು ಹಂತಕರ ಪತ್ತೆಗೆ ಖಾಕಿ ತಂಡ ದಾಂಗುಡಿಯಿಟ್ಟಿತು. ಎಲ್ಲಾ ಹಂತದಲ್ಲೂ ಹಂತಕರ ಹೆಜ್ಜೆ ಗುರುತುಗಳನ್ನು ದೃಢಪಡಿಸಿಕೊಂಡು ಇವರ ಸಮಗ್ರ ಕುಂಡಲಿಯನ್ನು ಅಂಗೈಲಿರಿಸಿಕೊಂಡು ಸಿಪಿಐ ರವಿಚಂದ್ರ ಡಿ.ಬಿ. ಕಾಯ್ದು ಕುಳಿತಿದ್ದರು.

**ಹಂತಕರ ಬಂಧನ...**

ನಿಷ್ಪಾಪಿ ಕುಡುಕ ಮಲ್ಲಪ್ಪ ಬಸಪ್ಪ ಕಂಬಾರನನ್ನು ಈತನ ಹೆಂಡತಿ ಮತ್ತು ಮಿಂಡ ಬದುಕಲು ಬಿಟ್ಟಿದ್ದರೆ ಎಲ್ಲಿಯಾದರೂ ಬದುಕುತ್ತಿದ್ದನು. ಅದು ಬಿಟ್ಟು ತಮ್ಮ ಕಾಮದಾಟಕ್ಕೆ ಅಡ್ಡಗಾಲಾಗಿದ್ದಾನೆಂದು ನಿರ್ಧಯವಾಗಿ ಕೊಲೆಗೈದಿದ್ದ ಹಂತಕರನ್ನು ಖಾಕಿ ಪಡೆ ಸದ್ದಿಲ್ಲದೇ ಬೇಟೆಯಾಡಿತ್ತು. ಒಬ್ಬೊಬ್ಬರನ್ನಾಗಿ ವಶಕ್ಕೆ ತೆಗೆದುಕೊಂಡು ಕೊಲೆಯಾದ ಮಲ್ಲಪ್ಪನ ಹೆಂಡತಿಯ ಮಿಂಡನಾಗಿದ್ದ ಪ್ರಕಾಶ ಶಿವಬಸು ಬೆನ್ನಳ್ಳಿ ಮತ್ತು ಈತನ ಸ್ನೇಹಿತ ರಾಮಪ್ಪ ಮಾದರ ಹಾಗೂ ಕಾಮುಕಿ ದಾನಮ್ಮ ಕಂಬಾರನನ್ನು ಸಿಪಿಐ ರವಿಚಂದ್ರ ಡಿ.ಬಿ. ಅವರ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಹಂತಕರು ತಮ್ಮ ಕೃತ್ಯವನ್ನೆಲ್ಲ ಗಿಳಿಪಾಠದಂತೆ ಒಪ್ಪಿಸಿದ್ದಾರೆ. ಮತ್ತು ಪಂಚನಾಮೆ ಕಾಲಕ್ಕೆ ಕೃತ್ಯಕ್ಕೆ ಬಳಸಿದ ಮೋಟಾರ್ ಸೈಕಲ್ ಒಪ್ಪಿಸಿದ್ದು, ಹಾಗೂ ಮೊಬೈಲ್ ಸಿಮ್‌ಗಳನ್ನು ಬಿಸಾಕಿರುವ ಸ್ಥಳಗಳನ್ನು ತೋರಿಸಿದ್ದಾರೆ. ಹಂತಕ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗದ ವಶಕ್ಕೆ ಒಪ್ಪಿಸಿದಾಗ ಮಾನ್ಯ ನ್ಯಾಯಾಧೀಶರು ಎಲ್ಲರನ್ನೂ ಜೈಲಿಗಟ್ಟಿದ್ದಾರೆ. ಮಾಡಿದ ತಪ್ಪಿಗಾಗಿ ಜೈಲು ಸೇರಿ ತಂಗಳು ಮುರಿಯುತ್ತಿದ್ದಾರೆ ಹರಾಮಿಗಳು.



ಮಲ್ಲಪ್ಪನ ಕೊಲೆಗೆ ಬಳಸಲಾದ ಮೋಟಾರ್ ಸೈಕಲ್ ತನಿಖಾಧಿಕಾರಿಗಳಿಗೆ ಹಾಜರು ಮಾಡುತ್ತಿರುವ ಹಂತಕ ಪ್ರಕಾಶ

**ಶ್ಲಾಘನೆ...**

ಸುಮಾರು ಒಂದು ವರ್ಷದ ಹಿಂದೆ ನಿಗೂಢವಾಗಿ ಕೊಲೆಯಾಗಿ ಹೋಗಿದ್ದ ಇಟ್ನಾಳ ಗ್ರಾಮದ ಮಲ್ಲಪ್ಪ ಬಸಪ್ಪ ಕಂಬಾರನ ಕೊಲೆಯನ್ನು ಅತ್ಯಂತ ಚಾಣಾಕ್ಷತನದಿಂದ ಪತ್ತೆ ಮಾಡಿ ಮಲ್ಲಪ್ಪನ ಹೆಂಡತಿ ಮತ್ತವಳ ಮಿಂಡ ಹಾಗೂ ಸ್ನೇಹಿತನನ್ನು ಬಂಧಿಸುವಲ್ಲಿ ಯಶಸ್ವಿಯಾದ ಸಿಪಿಐ ರವಿಚಂದ್ರ ಡಿ.ಬಿ., ಪಿಎಸ್ಐ ಮಾಳಪ್ಪ ಪೂಜೇರಿ ಅವರ ತಂಡದ ಕಾರ್ಯಾಚರಣೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಪ್ರಶಾಂತ ಮುನ್ನೋಳಿ ಅವರುಗಳು ಶ್ಲಾಘಿಸಿದ್ದಾರೆ.

☯



ಸಿಬ್ಬಂದಿಗಳಾದ ಬಿ.ಎಲ್. ಹೊಸಟ್ಟಿ, ರಮೇಶ ಮುಂದಿನಮನಿ, ಅಶೋಕ ಶಾಂಡಗೆ, ಪ್ರಕಾಶ ಸಪ್ತಸಾಗರ, ಹೆಚ್.ಆರ್. ಅಂಬಿ, ವಿನೋದ ಠಕ್ಕಣ್ಣವರ (ಟೆಕ್ನಿಕಲ್ ಸೆಲ್)

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699 policenewsreporter@gmail.com 080-23588510

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

## ಪಾತಕ ಪ್ರಪಂಚ

# ಮ್ಯಾಡ್ ಮ್ಯಾನ್

ಅವಳು ಆಕರ್ಷಕ ರೂಪವತಿ. ಅವಳ ಮುಖದಲ್ಲಿ ಚೆಲುವಿನಲ್ಲಿ ಮಾದಕ ಸೌಂದರ್ಯ ಇದೆ. ವಿಶಿಷ್ಟವಾದ ದೇಹ ಸೌಂದರ್ಯವಿದೆ. ನಗುಮುಖದ ಚೆಲುವೆಯ ಪ್ರತಿ ಅಂಗ ಅಂಗಗಳಲ್ಲಿ ಕಾಂತಿಯ ಸೊಬಗಿದೆ. ಅವಳು ಸೋಫಾದಲ್ಲಿ ಮೈಚೆಲ್ಲಿ ಕುಳಿತಿದ್ದಾಳೆ. ಅವಳು ಆಗಿನ ಸ್ಥಿತಿ ನೋಡಿದರೆ ವಿಪರೀತ ಗುಂಡು ಹಾಕಿದ್ದಾಳೆ ಎಂದು ಅನಿಸುತ್ತದೆ. ತೇಲುಗಣ್ಣು ಮಾಡುತ್ತಿದ್ದಾಳೆ. ಅವಳು ತುಂಬಾ ಕಷ್ಟದಿಂದ ಎದ್ದು ನಿಂತು ಈಗ ತೂರಾಡಿದಳು. ನೆಲದತ್ತ ವಾಲಿಕೊಂಡಳು. ಆದರೆ ನೆಲಕ್ಕೆ ಬೀಳುವ ಮೊದಲೇ ದಡೂತಿ ಆಕೃತಿಯ ವ್ಯಕ್ತಿ ಓಡಿ ಬಂದು ಅವಳನ್ನು ತಬ್ಬಿ ಹಿಡಿದುಕೊಂಡಳು.

ಆ ವ್ಯಕ್ತಿ ಅವಳ ಬೆನ್ನು ಸವರುತ್ತಾ, ಕೈಗಳನ್ನು ಜಾರಿಸುತ್ತಾ ಹಿಂಭಾಗದ ಉಬ್ಬುಗಳನ್ನು ಹಿಡಿದು ಹಿಂಡಿದನು.

ಅವಳು ಕಷ್ಟದಿಂದ ಕಣ್ಣುಗಳನ್ನು ಅರಳಿಸಿ ನಗಾಡಿದಳು.

ಆ ದಡೂತಿ ಅವಳ ಕೆನ್ನೆ ಭಾಗವನ್ನು ಮೃದುವಾಗಿ ಕಚ್ಚಿದನು. ತುಟಿಗಳನ್ನು ಚುಂಬಿಸಿದನು.

ಅವಳು ಉಡುಪುಗಳು ಸಡಿಲಗೊಳ್ಳುತ್ತಾ ಒಂದೊಂದಾಗಿ ನೆಲ ಸೇರಲಾರಂಭಿಸಿದ್ದರಿಂದ ಅವಳೀಗ ಬಹುತೇಕ ಬೆತ್ತಲಾಗಿದ್ದಾಳೆ.

ಅವಳು ಕಾಲೇಜ್ ಕ್ವೀನ್!

'ಮಿಸ್ ತಮಿಳುನಾಡು' ಎಂಬ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಿರುವ ಕಾಲೇಜಿನ ಆಕರ್ಷಕ ಬೆಡಗಿ.

ಆ ದಡೂತಿ ಯಾರು? ಅವಳನ್ನು ಬಹುತೇಕ ಬೆತ್ತಲೆಗೊಳಿಸಿ ಮೈ ಹಿಂಡುತ್ತಿರುವ ಮತ್ತು ನಾಲಿಗೆ, ತುಟಿಗಳಿಂದ ತೀಡುತ್ತಾ ದೇಹದಲ್ಲಿ ವಿಕೃತ ಆಟಗಳನ್ನು ಆಡುತ್ತಿರೋದು ಯಾರು? ಗಂಡಸಲ್ಲ... ದಡೂತಿ ಶರೀರದ ಭಾರೀ ತೂಕದ ಕುರೂಪಿ ಹೆಂಗಸು.

ಸಲಿಂಗ ಕಾಮದಾಟ ಆಡುತ್ತಿದ್ದಾರೆ. ಇದು ಈಗ ನಡೆಯುತ್ತಿರುವ ಸೆಕ್ಸ್ ದೃಶ್ಯ ಅಲ್ಲ...! ವೀಡಿಯೋ ದೃಶ್ಯ! ಬಂಗಲೆಯ ಟಾಪ್ ಸೀಕ್ರೆಟ್ ರೂಮಿನಲ್ಲಿರುವ ಟಿ.ವಿ. ಪರದೆಯ ಮೇಲೆ ದೃಶ್ಯ ಬರುತ್ತಿದೆ. ಆ ರೂಮಿನಲ್ಲಿ ಎಲ್ಲಾ ಕಡೆ ಕತ್ತಲಾವರಿಸಿದೆ. ಕತ್ತಲಿನಲ್ಲಿ ಕುಳಿತಿರುವ ವ್ಯಕ್ತಿಯೊಬ್ಬ ಈ ಸಲಿಂಗಕಾಮ ದೃಶ್ಯ ನೋಡುತ್ತಿದ್ದಾನೆ.

ಆ ದಡೂತಿ ಹೆಂಗಸು ಯಾರು? ಅವಳ ಹೆಸರಾಗಲಿ, ಫ್ಯಾಮಿಲಿ ಬ್ಯಾಕ್‌ಗ್ರೌಂಡ್ ಆಗಲಿ ಗೊತ್ತಿಲ್ಲ. ಸಲಿಂಗಕಾಮ ದೃಶ್ಯವನ್ನು ಏಕಾಂತ ರಾತ್ರಿಯಲ್ಲಿ ನೋಡುತ್ತಿರುವ ವ್ಯಕ್ತಿ ಯಾರು? ಅವಳು ಮಂದಾರ ಮಾಲ...!

●●●

ಸ್ಥಳ-ತಮಿಳುನಾಡು.

ರಾಜಧಾನಿ- ಚೆನ್ನೈ.

ಕೇಂದ್ರಸ್ಥಳ- ವಾಲಿಗಪುರಂ

●●●

ಅವಳು ಕಾಲೇಜಿನ ಡಯಾಸ್ ಮೇಲೆ ತುಂಬಾ ಅದ್ಭುತವಾಗಿ ಬ್ರೇಕ್ ಡ್ಯಾನ್ಸ್ ಮಾಡುತ್ತಿದ್ದಾಳೆ. ಕಾಲೇಜಿನ ಯುವಕ-ಯುವತಿಯರು ಚಪ್ಪಾಳೆ ತಟ್ಟಿ ವಿಶಲ್ ಹೊಡೆಯುತ್ತಾ ಎಂಜಾಯ್ ಮಾಡುತ್ತಿದ್ದಾರೆ.

ಇಂಟರ್ ಕಾಲೇಜ್ ಫಂಕ್ಷನ್. ಸ್ಪರ್ಧೆ ಮುಗಿದಿದೆ! ವೇದಿಕೆ ಕಾರ್ಯಕ್ರಮ ಪ್ರಾರಂಭವಾಗಿದೆ. ಎಂಟುನೂರು ವಿದ್ಯಾರ್ಥಿಗಳು ಸಭಾಂಗಣದಲ್ಲಿದ್ದಾರೆ. ಇದರಲ್ಲಿ ಬೇರೆ ಬೇರೆ ಕಾಲೇಜಿನ ವಿದ್ಯಾರ್ಥಿಗಳಿದ್ದಾರೆ. ಬಹುಮಾನ ವಿತರಣೆ!

ಭರತನಾಟ್ಯದಲ್ಲಿ ಪ್ರಥಮ ಬಹುಮಾನ ಮಂದಾರ ಮಾಲ...! ಬ್ರೇಕ್ ಡ್ಯಾನ್ಸ್‌ನಲ್ಲಿ ಪ್ರಥಮ ಸ್ಥಾನ ಇದೇ ಮಂದಾರ ಮಾಲ...! ಕಾಲೇಜಿನ ಸೌಂದರ್ಯ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದಿರುವ ವಿದ್ಯಾರ್ಥಿನಿ ಇದೇ ಮಂದಾರ ಮಾಲ...! ಅವಳು ವೇದಿಕೆಗೆ ಬಂದಳು. ನೋಡುಗರನ್ನು ನೋಟದಲ್ಲೇ ಸೆರೆ ಹಿಡಿದು ಇಡುವ ಬದಲು ಅಪರೂಪದ ಚೆಲುವೆ. ಈ ಕಾಲೇಜಿನ ಸ್ಟುಡೆಂಟ್ ಮಂದಾರ ಮಾಲ.

ಅಬ್ಬ... ಅದೆಂತಹ ಚೆಲುವು. ಈ ಸಭಾ ಕಾರ್ಯಕ್ರಮಕ್ಕೆ ಸಿನಿಮಾ ಪ್ರೊಡ್ಯೂಸರ್ ವೆಂಕಟೇಶನ್ ಮತ್ತು ಡೈರಕ್ಟರ್ ಮುತ್ತುಸ್ವಾಮಿ ಬಂದಿದ್ದಾರೆ. ಮತ್ತೊಬ್ಬ ಮುಖ್ಯ ಅತಿಥಿ ಯಾರು? ತಮಿಳುನಾಡಿನ ಆಡಳಿತ ಪಕ್ಷದ ಪ್ರಭಾವಶಾಲಿ ಸಚಿವರಾಗಿರುವ ರಂಗವೇಲನ್ ಬಂದಿದ್ದಾರೆ. ನಲವತ್ತೈದರ ಪ್ರಾಯ. ಬಾಹ್ಯರೂಪ ಚೆನ್ನಾಗಿಲ್ಲ. ಆದರೆ ಅವರ ಶ್ರೀಮಂತಿಕೆ ಮತ್ತು ರಾಜಕೀಯ ರಂಗದಲ್ಲಿರುವ ಅವರ ಪ್ರಭಾವ ವಿಶೇಷವಾಗಿದೆ. ಇದೇ... ಇದೇ ರಾಜಕಾರಣಿ ಸಿನಿಮಾ ರಂಗದಲ್ಲಿ ಸಹ ಪ್ರಭಾವ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ.

ಮಂದಾರ ಮಾಲ ಈ ಮೂವರು ಮುಖ್ಯ ಅತಿಥಿಗಳಿಂದ ಬಹುಮಾನ ಸ್ವೀಕರಿಸಿದಳು.

ರಂಗವೇಲನ್ ಹೇಳಿದರು.

''ನಿಮ್ಮ ಮುಂದಿನ ಸಿನಿಮಾಕ್ಕೆ ಇವಳನ್ನ ಹೀರೋಯಿನ್ ಆಗಿ ಹಾಕಿಕೊಳ್ಳಬೇಕು. ಮಂದಾರ ಮಾಲ ನಿಮ್ಮ ಸಿನಿಮಾಕ್ಕೆ ನನ್ನ ಕೊಡುಗೆ.''

ಆ ಪ್ರೊಡ್ಯೂಸರ್ ಡೈರಕ್ಟರ್ ಇಬ್ಬರೂ ಸಹ ತಲೆಯಾಡಿಸಿದರು. ಎಲ್ಲಾ... ಎಲ್ಲಾ ಓಕೆ ಆಗಿದೆ.

ಮಂದಾರ ಮಾಲ ರೋಮಾಂಚನಗೊಂಡಿದ್ದಾಳೆ.

●●●

ರಾತ್ರಿ ಹತ್ತು ಗಂಟೆ. ಮಂದಾರ ಮಾಲ ಮಧ್ಯಮ ವರ್ಗದ ಕುಟುಂಬದವಳು. ಅವಳ ತಂದೆ-ತಾಯಿ ಮತ್ತು ಹತ್ತಿರದ ಸಂಬಂಧಿಕರಿಗೆ ಇವಳ ಸೌಂದರ್ಯ ಮತ್ತು ಸಾಧನೆ ಕಂಡು ಸಂತೋಷವಾಗಿದೆ.

ರಾತ್ರಿಯ ಊಟ ಮುಗಿದಿದೆ.

ಅವಳು ರೂಮಲ್ಲಿ ಮಲಗಿದ್ದಾಳೆ.,

ಕಾಲೇಜಿನ ಗೆಳತಿಯರು, ಗೆಳೆಯರು ಮತ್ತು ಲೆಕ್ಚರರ್‌ಗಳು ಹೇಗಿದ್ದರು. ರಂಗವೇಲನ್ ಸಿನಿಮಾ ಪ್ರೊಡ್ಯೂಸರ್‌ಗೆ ಆರ್ಡರ್ ಮಾಡಿದ್ದಾರೆ. ಅಂದ ಮೇಲೆ ಇದು ಓಕೆ ಆಗಲೇಬೇಕು. ನಿನಗೆ ಖಂಡಿತಾ ಸಿನಿಮಾದಲ್ಲಿ ಅವಕಾಶ ಸಿಗುತ್ತದೆ ಎಂಬ ಮಾತುಗಳು ನೆನಪಿಗೆ ಬಂದು ಅವಳು ರೋಮಾಂಚನಗೊಂಡಿದ್ದಾಳೆ.

ಫೋನ್ ಕಾಲ್ ಬಂದಿತು. ರಂಗವೇಲನ್ ಫೋನ್ ಮಾಡಿದ್ದಾರೆ. ಅವಳು ಉತ್ಸಾಹ, ಸಡಗರದಿಂದ ''ನಮಸ್ತೆ ಸಾರ್, ನೀವು ಫೋನ್ ಮಾಡಿರೋದು ನನ್ನ ಅದೃಷ್ಟ ಅಂತ ಹೇಳಬಹುದು.''

''ನೀನು ನಾಳೆ ಫ್ರೀಯಾಗಿರ್ತೀಯ?''

''ನಾಳೆ ಫ್ರೀಯಾಗಿರ್ತೀನಿ ಸಾರ್.''

''ಸಿನಿಮಾ ಪ್ರೊಡ್ಯೂಸರ್, ಡೈರಕ್ಟರ್‌ನ ನನ್ನ ಗೆಸ್ಟ್‌ಹೌಸ್‌ಗೆ ಕರೆಸುತ್ತಿದ್ದೀನಿ. ನೀನು ಅಲ್ಲಿಗೆ ಬಂದರೆ ಸಿನಿಮಾ ಕತೆ ಹೇಳ್ತಾರೆ. ನಿನಗೆ ಹತ್ತು ಲಕ್ಷ ಅಡ್ವಾನ್ಸ್ ಕೊಡಲು ಹೇಳಿದ್ದೀನಿ. ಅಗ್ರಿಮೆಂಟ್‌ಗೆ ಸೈನ್ ಮಾಡಿ ಹಣ ತಗೊಂಡು ಹೋಗು.''

ಮೈಗಾಡ್... ನಂಬಲಾಗುತ್ತಿಲ್ಲ ಅವಳಿಂದ. ವಾಟ್ ಎ ಮಿರಾಕಲ್! ಇದು ನಿಜವೆ... ನಿಜವೆ?

''ಸಾರ್... ತುಂಬಾ ಥ್ಯಾಂಕ್ಸ್... ನಾಳೆ ಬರುವಾಗ ನನ್ನ ಡ್ಯಾಡಿ ಮತ್ತು ಅಂಕಲ್‌ನ ಕರ್ಕೊಂಡ್ ಬರ್ತೀನಿ.''

''ನೋ... ನೋ... ಮಂದಾರ.''

''ಯಾಕೆ ಸಾರ್?''

''ಇದು ಸಿನಿಮಾದ ವಿಚಾರ. ಅಗ್ರಿಮೆಂಟ್ ಆಗಿ ಹಣ ನಿನ್ನ ಕೈಗೆ ಬರುವ ತನಕ ಗ್ಯಾರಂಟಿ ಇರೋಲ್ಲ. ನನ್ನ ಪ್ರಭಾವದಿಂದ ನೀನು ಹೀರೋಯಿನ್ ಆಗ್ತೀಯ. ನಾಳೆ ಸಂಜೆತನಕ ಇದನ್ನು ಬಹಿರಂಗಪಡಿಸಬೇಡ. ಅಡ್ವಾನ್ಸ್ ಹಣವನ್ನು ತಗೊಂಡು ಹೋಗಿ ನಿನ್ನ ತಂದೆಗೆ ಕೊಟ್ಟು ಆಮೇಲೆ ಈ ಸಂಗತಿನ ಹೇಳು.''

''ಆಗಲಿ ಸಾರ್.''

''ನಾಳೆ ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ನೀನು ಜೆಮಿನಿ ಸರ್ಕಲ್ ಹತ್ತಿರ ಬರಬೇಕು. ಅಲ್ಲಿಗೊಂದು ಕಾರು ಬರುತ್ತದೆ. ಆ ಕಾರಿನ ನಂಬರ್...'' ಹೇಳಿದ ನಂತರ ''ಆ ಕಾರಲ್ಲಿ ಡ್ರೈವರ್ ಮತ್ತು ನಿನ್ನ ಬಾಡಿಗಾರ್ಡ್ ಆಗಿ ಒಬ್ಬಳು ಹೆಂಗಸು ಇರುತ್ತಾಳೆ.''

ಈಗ ಇವಳಿಗೆ ಧೈರ್ಯ ಬಂದಿದೆ.

''ಆ ಹೆಂಗಸನ್ನು ಕಂಡು ಹೆದರಬಾರದು.''

''ಯಾಕೆ... ಯಾಕೆ ಸಾರ್?''

''ಅವಳು ದಡೂತಿ ಶರೀರದವಳು. ಮುಖಲಕ್ಷಣ ಚೆನ್ನಾಗಿಲ್ಲ. ಒರಟು ಹೆಂಗಸು.''

ಅವಳು ಚಡಪಡಿಸಿದಳು.

''ಯಾಕೆ ಈಗಲೇ ಭಯವಾಗುತ್ತಿದ್ಯ ?''

''ಹಾಗೇನಿಲ್ಲ... ಸಾರ್.''

''ನಾಳೆ ನೀನು ಈ ವಿಚಾರವನ್ನ ಕಾಲೇಜಿನವರಿಗೆ ಆಗಲಿ, ಬೇರೆ ಗೆಳೆಯರಿಗೆ ಆಗಲಿ ಹೇಳಲೇಬಾರದು ಮಂದಾರ. ಪತ್ರಿಕೆಗಳಲ್ಲಿ ಮತ್ತು ಟಿ.ವಿ. ಚಾನಲ್‌ಗಳಲ್ಲಿ ಮತ್ತು ಸೋಷಿಯಲ್ ಮೀಡಿಯಾಗಳಲ್ಲಿ ನೀನು ನಾಯಕಿ ಆಗಿರುವ ಸಿನಿಮಾ ಪ್ರಸಾರವಾದಾಗ ಎಲ್ಲರಿಗೂ ಆನಂದ ಮತ್ತು ಆಶ್ಚರ್ಯ ಉಂಟಾಗಬೇಕು.''

ಅವಳಿಗೆ ಈ ರೀತಿ ಮಾಡೋದು ಸರಿ ಎಂದು ಅನಿಸುತ್ತಿದೆ.

''ಆ ಹೆಂಗಸಿನ ಹೆಸರೇನು?''

''ಪಳನಿಯಮ್ಮ ಅಂತ. ನನ್ನ ಕಾರಿನ ನಂಬರ್'' ಎಂದು ಡೀಟೈಲ್ ಆಗಿ ಹೇಳಿದರು.

ಮರುದಿನ ಮಧ್ಯಾಹ್ನ!

ಸಾಮಾನ್ಯವಾಗಿ ಅವಳು ಕಾಲೇಜಿಗೆ ಡ್ರೆಸ್ ಹಾಕಿಕೊಂಡು ಹೋಗುತ್ತಾಳೆ. ಇವತ್ತು ತುಂಬಾ ಗ್ರಾಂಡ್ ಆಗಿರುವ ಸೀರೆ ಉಟ್ಟಿದ್ದಾಳೆ ಮತ್ತು ಸೌಂದರ್ಯಕ್ಕೆ ಈಗ ಗ್ಲಾಮರ್ ಟಚ್ ಕೊಟ್ಟಿದ್ದಾಳೆ.

ಫೋನ್ ಕಾಲ್ ಬಂದಿತು.

''ನಾನು ಪಳನಿಯಮ್ಮ.''

''ಹಾಂ... ಹೇಳಿ ಮೇಡಂ.''

''ನೀನು ಈಗ ಎಲ್ಲಿದ್ದೀಯ?''

''ಜೆಮಿನಿ ಸರ್ಕಲ್‌ನಲ್ಲಿ ಇದ್ದೀನಿ.''

''ಬಲಗಡೆ ತಿರುಗಿ ನೋಡು ನಿನ್ನ ಕಾಲೇಜಿನ ಗೆಳತಿಯರು ಬರುತ್ತಿದ್ದಾರೆ.''

ಆ ಕಡೆ ತಿರುಗಿದಳು.

ನಿಜ... ಎಂಟು ಮಂದಿ ಬರುತ್ತಿದ್ದಾರೆ.

ಪಳನಿಯಮ್ಮ ''ನೀನು ಇರೋದು ಅವರಿಗೆ ಗೊತ್ತಾಗಬಾರದು. ಅಲ್ಲಿಂದ ಬೇಗ ಹೊರಟು ಸೂಪರ್ ಬಜಾರ್ ಹತ್ತಿರ ಬಾ. ಅಲ್ಲಿ ಕಾರು ನಿಂತಿರುತ್ತದೆ'' ಎಂದು ಹೇಳಿದಳು.

ಮಂದಾರ ಮಾಲ ರೂಟ್ ಬದಲಿಸಿದಳು.

ಸಂಜೆ ಐದು ಗಂಟೆ. ನಗರದ ಹೊರವಲಯದ ಗ್ರಾಮಾಂತರ ಪ್ರದೇಶದಲ್ಲಿರುವ ಮಿನಿ ಬಂಗಲೆ ಇದೆ. ಒಳಗೆ ಗಾರ್ಡನ್ ಇದೆ. ಹಿಂಭಾಗದಲ್ಲಿ ಸ್ವಿಮ್ಮಿಂಗ್ ಪೂಲ್ ಇದೆ. ಸುತ್ತಲು ಎತ್ತರವಾದ ಕಾಂಪೌಂಡ್ ಗೋಡೆ ಇದೆ. ಒಳಗಿನ ದೃಶ್ಯ ರಸ್ತೆಯಲ್ಲಿ ತಿರುಗಾಡುವವರಿಗೆ ಕಾಣಿಸುವುದಿಲ್ಲ.

ಅವಳು ರೂಮಲ್ಲಿ ಕುಳಿತಿದ್ದಾಳೆ.

ಕುರೂಪಿ ಹೆಂಗಸು ಪಳನಿಯಮ್ಮ ಇವಳನ್ನು ನುಂಗುವ ರೀತಿ ನೋಡುತ್ತಿದ್ದಾಳೆ. ಅವಳಿಗೆ ಪ್ರಾರಂಭದಲ್ಲಿ ಮುಜುಗರ ಆಗಿತ್ತು. ಆದರೆ ಈಗ... ಈಗ ಏನಾಗಿದೆ? ಭಯ ಆಗುತ್ತಿದೆ.

''ಸಿನಿಮಾದವರು ಇಲ್ಲಿಗೆ ಬರುತ್ತಾರೆ. ಅಲ್ಲಿಯತನಕ ತಿಂದು, ಕುಡಿದು ಮಾಡುತ್ತಿರು'' ಎಂದು ಹೇಳಿ ಕೂಲ್ ಡ್ರಿಂಕ್ಸ್ ಮತ್ತು ಬೇಕರಿ ಐಟಂಗಳನ್ನು ತಂದಿಟ್ಟಳು.

ತಂಪು ಪಾನೀಯ ಕುಡಿಯುತ್ತಿದ್ದಾಳೆ.

ನಂತರ ಏನಾಯಿತು.

ಅವಳಿಗೆ ವಿಪರೀತ ಅಮಲೇರಿದೆ.

ನಿಂತಲ್ಲೇ ತೂರಾಡುತ್ತಿದ್ದಾಳೆ.

ತೇಲುಗಣ್ಣು ಮಾಡುತ್ತಿದ್ದಾಳೆ.

ಇಲ್ಲ... ಅವಳಿಂದ ಆಗುತ್ತಿಲ್ಲ.

ಯಾರೋ ಅವಳನ್ನು ತಬ್ಬಿ ಹಿಡಿದುಕೊಂಡು ಮೈ ಸವರುತ್ತಾ ಮುದ್ದಾಡುತ್ತಿದ್ದಾರೆ.

●●●

ಅವಳಿಗೆ ಎಚ್ಚರವಾಗಿದೆ.

ಅವಳು ಕಣ್ಣುಗಳನ್ನು ತೆರೆದಳು.

ದೀಪದ ಬೆಳಕಲ್ಲಿ ತಂದೆ-ತಾಯಿ ಮತ್ತು ಅಂಕಲ್ ಕಂಡು ಬಂದರು.

ಅವಳಿಗೆ ಏನೋ ನೆನಪಾಯಿತು. ಗಾಬರಿಯಿಂದ ಎದ್ದು ಕುಳಿತು ತನ್ನ ಮೈ ನೋಡಿಕೊಂಡಳು. ಮನೆಯಿಂದ ಹೋಗುವಾಗ ಸೀರೆ ಉಟ್ಟುಕೊಂಡು ಹೋಗಿದ್ದಳು.

ಸೀರೆ, ರವಿಕೆ ಸಡಿಲಗೊಂಡಿಲ್ಲ ಮತ್ತು ಶರೀರದಲ್ಲಿ ಗಾಯಗಳಾಗಿಲ್ಲ. ಆದರೆ ಅವಳಿಗೆ ಮೈಯೆಲ್ಲಾ ಅಂಟು, ಅಂಟಾಗಿರುವ ಅನುಭವ ಆಗುತ್ತಿದೆ. ತಂದೆ-ತಾಯಿ ಗಾಬರಿಯಿಂದ ''ಎಲ್ಲಿಗಮ್ಮ ಹೋಗಿದ್ದೆ. ನೀನು ತಲೆ ತಿರುಗಿ ರಸ್ತೆಯಲ್ಲಿ ಬಿದ್ದಿದ್ದೆಯಂತೆ. ಯಾರೋ ದಡೂತಿ ಹೆಂಗಸು ಕಾರಲ್ಲಿ ಬಂದು ನಿನ್ನನ್ನು ಬಿಟ್ಟು ಹೋದಳು.''

ತಾಯಿ ''ಯಾಕಮ್ಮ ಹೀಗಾಯ್ತು ?''

ಅವಳು ಕ್ಷಣಗಳ ನಂತರ ಎಲ್ಲರಿಗೂ ನಂಬಿಕೆ ಉಂಟಾಗುವಂತ ಸುಳ್ಳು ಹೇಳಿದ ನಂತರ ಸ್ನಾನ ಮಾಡಿದಳು.

ರಾತ್ರಿ ಹನ್ನೊಂದು ಗಂಟೆ! ಅವಳ ಮೊಬೈಲ್ ಫೋನ್ ಮ್ಯೂಸಿಕಲ್ ಸೌಂಡ್ ಉಂಟು ಮಾಡಿತು. ರಂಗವೇಲನ್ ಮಾಡಿದ್ದಾರೆ. ಕೋಪದ ಜ್ವಾಲೆ ಆಸ್ಫೋಟಗೊಂಡಿತು.

ರಂಗವೇಲನ್ ''ಮಂದಾರ... ನಿನಗೆ ವೀಡಿಯೋ ಕ್ಲಿಪ್ ಕಳಿಸುತ್ತೇನೆ. ನೋಡಿದ ಮೇಲೆ ಸೈಲೆಂಟ್ ಆಗ್ತೀಯ. ನಡೆದಿರುವ ಘಟನೆಯ ಬಗ್ಗೆ ಬಾಯಿ ಬಿಡೋಲ್ಲ... ಬಿಡಲೇಬಾರದು'' ಎಂದು ಹೇಳಿದನು.

ವೀಡಿಯೋ ಕ್ಲಿಪ್ ಬಂದಿದೆ.

ಓಪನ್ ಮಾಡಿ ನೋಡಿದಳು.

●●●

ಬಂಗಲೆಯ ಸೀಕ್ರೇಟ್ ಬೆಡ್‌ರೂಮಲ್ಲಿರುವ ರಂಗವೇಲನ್ ವೀಡಿಯೋ ಪ್ಲೇ ಮಾಡಿ ಹೋಮ್ ಸ್ಕ್ರೀನ್‌ನಲ್ಲಿ ನೋಡುತ್ತಿದ್ದಾನೆ.

ಸಲಿಂಗ ಕಾಮದಾಟ! ಮಂದಾರ ಮಾಲಾಳ ಬಲು ಸುಂದರವಾದ ಬೆತ್ತಲೆ ದೇಹದ ತುಂಬಾ ಸಲಿಂಗ ಕಾಮದಾಟ ಆಡುತ್ತಿದ್ದಾಳೆ ಕುರೂಪಿ ಹೆಂಗಸು ಪಳನಿಯಮ್ಮ...! ರಂಗವೇಲನ್ ಕಾಮದ ಆಸೆ ಶಾಶ್ವತವಾಗಿದೆ. ಕೆಟ್ಟ ರೀತಿಯಲ್ಲಿ ನಗುತ್ತಾ ಕೆಟ್ಟ ಕಾಮದಾಟ ನೋಡುತ್ತಾ ಉದ್ರಿಕ್ತನಾಗಿದ್ದಾನೆ.

●●●

ಮಂದಾರ ಮಾಲಳಿಗೆ ಕುಡಿತದ ಅಮಲಿನಲ್ಲಿದ್ದಾಗ ಏನು ನಡೆದಿದೆ ಅಂತ ಗೊತ್ತಿರಲಿಲ್ಲ. ಆದರೆ ವೀಡಿಯೋ ದೃಶ್ಯ ನೋಡಿದ ಮೇಲೆ ಹೇಸಿಗೆ, ಮುಜುಗರ ಉಂಟಾಯಿತು. ಅವಳ ಬೆತ್ತಲೆ ದೇಹದ ಮೇಲೆ ಯಾವುದೋ ಕಾಡು ಹಂದಿ ಬಿದ್ದು ಉರುಳಾಡುತ್ತಿರುವಂತೆ ಕಂಡು ಬರುತ್ತಿದೆ.

ಅವಳ ಮುದ್ದಾದ ಮುಖದ ತುಂಬಾ ಪಳನಿಯಮ್ಮನ ನಾಲಿಗೆ ಆಡುತ್ತಿದೆ. ಬಲು ಸುಂದರವಾದ ಜೇನು ತುಟಿಗಳನ್ನು ಚಪ್ಪರಿಸುತ್ತಿರುವ ಹೇಸಿಗೆ ದೃಶ್ಯ ಕಾಣುತ್ತಿದೆ.

ಅವಳು ವೀಡಿಯೋ ದೃಶ್ಯವನ್ನು ಕೂಡಲೇ ಡಿಲೀಟ್ ಮಾಡಿದಳು. ಆದರೆ ಈ ಅಸಹ್ಯಕರವಾದ ಘಟನೆಯಿಂದ ಚೇತರಿಸಿಕೊಳ್ಳಲು ಒಂದು ವಾರ ಬೇಕಾಯಿತು.

☞ 14

13 ☜

ಅವಳು ಗಾಬರಿ, ಆತಂಕದಿಂದ ಚಡಪಡಿಸಿದ್ದಳು. ರಂಗವೇಲನ್ ಬ್ಲಾಕ್‌ಮೇಲ್ ಪುನಹ ನನ್ನನ್ನು ಕರೆಸಿಕೊಳ್ಳ ಬಹುದು ಎಂಬ ಭಯ ಇತ್ತು.

ಒಂದು ತಿಂಗಳು ಕಳೆಯಿತು! ಆ ರೀತಿ ಆಗಲಿಲ್ಲ. ಅವಳು ನಿರಾಳವಾಗಿ ಉಸಿರಾಡಿದಳು.

●●●

ರಂಗವೇಲನ್ ಹೆಂಡತಿ ಬದುಕಿಲ್ಲ. ವಿವಾಹವಾಗಿ ಒಂದು ತಿಂಗಳಲ್ಲಿ ಇವನ ವಿಲಕ್ಷಣ, ವಿಕೃತ ಆಟಗಳನ್ನು ಸಹಿಸಲಾರದೆ ಒದ್ದಾಡಿದ್ದಳು.

ಇಂತಹ ಪ್ರಭಾವಶಾಲಿ, ಶ್ರೀಮಂತ ಗಣ್ಯ ಮತ್ತು ರಾಜ್ಯದ ರಾಜಕಾರಣದಲ್ಲಿ ಸಚಿವ ಸ್ಥಾನ ಪಡೆದಿರುವ ರಾಜಕಾರಣಿಯ ಹೆಂಡತಿ ಸಂಸಾರದ ತೊರೆದು ಹೋಗಿದ್ದಾಳೆ ಎಂಬುದು ಬಹಿರಂಗ ಆಗಬಾರದು. ಅವಳು ಬದುಕಿದ್ದರೆ ಈ ಶ್ರೀಮಂತನ ವಿಚಿತ್ರ ಮತ್ತು ವಿಲಕ್ಷಣ ತೆವಲು ಬಹಿರಂಗ ಆಗುತ್ತದೆ ಎಂದು ಹೆದರಿದ್ದರು ಮತ್ತು ಬೇರ್ಲ್ಲೋ ಇದ್ದ ಅವಳನ್ನು ಪತ್ತೆ ಮಾಡಿ, ನಿಗೂಢ ರೀತಿಯಲ್ಲಿ ಕೊಲೆ ಮಾಡಿ ಅವಳ ಶವವನ್ನು ರಹಸ್ಯವಾಗಿ ಸಮಾಧಿ ಮಾಡಿಸಿದ್ದನು.

ಪ್ರತಿ ರಾತ್ರಿ ಹತ್ತು ಗಂಟೆಯಿಂದ ಒಂದು ಗಂಟೆಯ ಕಾಲ ಸಲಿಂಗ ಕಾಮದ ದೃಶ್ಯ ನೋಡುತ್ತಾನೆ. ಮಂದಾರ ಮಾಲ ಆಗಿರಲಿ ಮತ್ತೊಬ್ಬಳಾಗಿರಲಿ ಆ ದೃಶ್ಯ ನೋಡುವುದು ಎರಡು ಸಲ ಮಾತ್ರ.

ಈಗ ನೋಡುತ್ತಿರುವುದು ಬೇರೊಬ್ಬಳು ಅಮಲಿನಲ್ಲಿ ಆಡಿರುವ ಸಲಿಂಗಕಾಮದ ದೃಶ್ಯ ಮಾತ್ರ...!

ಚೆಲುವೆಯರು ಬದಲಾಗುತ್ತಾರೆ. ಆದರೆ ಪಳನಿಯಮ್ಮ ಪರ್ಮನೆಂಟ್ ಅವಳಿಗೆ ಸೂಚನೆ ಕೊಡುತ್ತಾನೆ. ಚೆಲುವೆಯರನ್ನು ಒಂದೇ ರೀತಿ ಅನುಭವಿಸಬೇಡ. ಬೇರೆ ಬೇರೆ ಭಂಗಿಗಳಲ್ಲಿ, ಅತ್ಯಂತ ವಿಕೃತ ರೀತಿಯಲ್ಲಿ ಆಟ ಆಡಬೇಕು.

ಪಳನಿಯಮ್ಮನ ಪೇಮೆಂಟ್ ಏನು ಕಡಿಮೆ ಅಲ್ಲ!

ತಿಂಗಳಿಗೆ ಐವತ್ತು ಸಾವಿರ...!

●●●

ಡಿಸೆಂಬರ್ 31. ಆ ದಿವಸ ರಂಗವೇಲನ್ ಅವರ ಬರ್ತ್‌ಡೇ ಮತ್ತು ನ್ಯೂವ್ ಈಯರ್ ಸೆಲಬರೇಷನ್‌ಅನ್ನು ಒಟ್ಟಿಗೆ ಮಾಡುತ್ತಾರೆ.

ಸಿನಿಮಾರಂಗದವರು. ಉದ್ಯಮಿಗಳು, ರಾಜಕಾರಣಿಗಳು, ಮುಖ್ಯವಾಗಿ ಆಕರ್ಷಕ ರೂಪವತಿಯರು (ಸಿನಿಮಾ ಮತ್ತು ಟಿ.ವಿ. ಚಾನಲ್ ಸೀರಿಯಲ್ ನಟಿಯರು) ಇವರುಗಳಿಗೆ ವಿಶೇಷ ಆಹ್ವಾನ ಇರುತ್ತದೆ.

ರಾತ್ರಿ ಒಂಭತ್ತು ಗಂಟೆ. ಬಂಗಲೆಯ ಆವರಣದಲ್ಲಿ ಹಾಕಿರುವಂತಹ ಸ್ಟಾರ್ ಲೆವೆಲ್ ಶಾಮಿಯಾನದಲ್ಲಿ ಎಲ್ಲಾ ವ್ಯವಸ್ಥೆ ಗ್ರಾಂಡ್ ಆಗಿದೆ. ಬರುತ್ತಿರುವ ಅತಿಥಿಗಳಿಗೆ, ಅವರ ಅಂತಸ್ತು , ಅಧಿಕಾರಕ್ಕೆ ತಕ್ಕಂತೆ ಗಿಫ್ಟ್‌ಗಳನ್ನು ರೆಡಿ ಮಾಡಿಸಲಾಗಿದೆ. ಈ ಶ್ರೀಮಂತ ರಾಜಕಾರಣಿಯ ಆಹ್ವಾನ ಎಂದರೆ, ಸಡಗರದಿಂದ ಬರುತ್ತಾರೆ. ಈ ಸಲ ಅದೇಕೋ ಸಿನಿಮಾರಂಗದವರು ಬಂದಿರಲಿಲ್ಲ.

ಕಾರಣ ಏನು?

ಸ್ಟಾರ್ ನಟನೊಬ್ಬ ಸತ್ತಿದ್ದರಿಂದ ಎಲ್ಲರೂ ಆ ಕಾರ್ಯಕ್ರಮದಲ್ಲಿ ಹೋಗಿದ್ದರು. ಈ ಫಂಕ್ಷನ್‌ಗೆ ಬಂದು ಮಜಾ ಮಾಡಲು ಸಾಧ್ಯವೆ?

ಸೌಂದರ್ಯ ತುಂಬಿರುವ ನಟಿಯರ ಬಗ್ಗೆ ಇವನಿಗೆ ಕ್ರೇಜ್ ಇತ್ತು. ಆದರೆ ಈಗ ನಿರಾಸೆಯಾಗಿದೆ.

ಆ ಕ್ಷಣದಲ್ಲಿ ದೃಶ್ಯ ಬದಲಾಯಿತು.

ವಿಚಿತ್ರ-ವಿಲಕ್ಷಣದ ತೆವಲಿನ ಮನುಷ್ಯನಲ್ಲಿ ಮಿಂಚಿನ ಸಂಚಾರವಾಯಿತು.

ಬೆಳದಿಂಗಳ ಬೆಡಗಿ ಬರುತ್ತಿದ್ದಾಳೆ.

ಚೆಲುವೆಯರಲ್ಲಿ ಚೆಲುವೆ.

ಅವಳು ಸಿನಿಮಾ ಅಥವಾ ಸೀರಿಯಲ್ ನಟಿ ಅಲ್ಲ ಅಥವಾ ಗಗನಸಖಿಯರಲ್ಲ.

ಆಕೆ ಗೃಹಿಣಿ.

ಶ್ರೀಮತಿ ವಂದನ ಪಾಂಡ್ಯನ್.

ಪೊಲೀಸ್ ಇಲಾಖೆಯಲ್ಲಿ ಕಮೀಷನರ್ ಆಗಿರುವ ಪಾಂಡ್ಯರಾಜನ್ ಅವರ ಪತ್ನಿ ವಂದನ. ವಿವಾಹವಾಗಿ ಎರಡು ವರ್ಷಗಳಾಗಿವೆ. ಇನ್ನೂ ಮಕ್ಕಳಾಗಿರಲಿಲ್ಲ.

ಆಕೆಯ ಪ್ರಾಯ ಎಷ್ಟು?

ಮುವತ್ತೆರಡು ದಾಟುತ್ತಿದೆ.

ಆದರೆ ಆಕೆ ಹದಿನಾರರ ಪ್ರಾಯದ ಯುವತಿ ರೀತಿ ಕಂಗೊಳಿಸುತ್ತಿದ್ದಾಳೆ. ಸಿನಿಮಾ ನಟಿಯರು ಮೇಕಪ್‌ನಲ್ಲಿ ಮಿಂಚುತ್ತಾರೆ. ಆದರೆ ಇವಳು ಮೇಕಪ್ ಇಲ್ಲದೆ ಕಂಗೊಳಿಸುತ್ತಿದ್ದಾಳೆ.

ಈಕೆ ಗೃಹಿಣಿ!

ಅಬ್ಬ... ಎರಡು ವರ್ಷಗಳಿಂದ ಗಂಡನ ಜೊತೆ ಸಂಸಾರ ಮಾಡುತ್ತಿದ್ದರೂ ಸಹ ಅವಳ ಮೈಮಾಟ, ಚೆಲುವು, ಕಣ್ಣುಗಳ ಹೊಳಪು, ತುಟಿಗಳ ಮಿಂಚು ಕಡಿಮೆ ಆಗಿಲ್ಲ. ಅಬ್ಬ... ಅಬ್ಬ... ಗೃಹಿಣಿಯರಲ್ಲಿಇಂತಹ ಸೌಂದರ್ಯವತಿಯನ್ನು ನಾನು ಕಂಡಿಲ್ಲ.

ಪೊಲೀಸ್ ಕಮೀಷನರ್ ಪಾಂಡ್ಯನ್ ಅವರು ಪತ್ನಿಯ ಜೊತೆಗೆ ಬಂದಾಗ, ರಂಗವೇಲನ್ ಅವರು ವೇದಿಕೆಯಿಂದ ಇಳಿದು ಬಂದು ಸಡಗರ ಮತ್ತು ಸಂಭ್ರಮದಿಂದ ಸ್ವಾಗತಿಸಿದರು.

ಅವರ ದೃಷ್ಟಿ ಎಲ್ಲಿದೆ!

ವಂದನಾಳ ಚೆಲುವಿನ ಮೇಲಿದೆ.

ಆ ಕ್ಷಣಗಳಲ್ಲಿ ಅವರ ಅಂತರ್ಯದಲ್ಲಿ ಸುಪ್ತವಾಗಿದ್ದ ಬಯಕೆ (ವಿಲಕ್ಷಣ) ಪ್ರಚೋದಿಸಿತು.

ಕಲ್ಪನೆಯಲ್ಲಿ ಅವಳು ಬೆತ್ತಲಾಗಿದ್ದಾಳೆ. ಅವಳು ಸಲಿಂಕಾಮದಾಟ ಆಡುತ್ತಿರುವ ಕಲ್ಪನೆ ಉಂಟಾಗಿ ಮೈ ಬೆಚ್ಚಗಾಯಿತು.

ಕಾರ್ಯಕ್ರಮ ಒಂದು ಗಂಟೆಯ ಕಾಲ ನಡೆಯಿತು. ಅವರ ದೃಷ್ಟಿ ಬಹುತೇಕ ಅವಳ ಮೇಲೆ ಇತ್ತು.

ಆ ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲ.

ಅವರು ವಿಪರೀತ ಕುಡಿದು ಮೈಚೆಲ್ಲಿ ಮಲಗಿದರು. ಬೆಳಗಿನ ಜಾವದಲ್ಲಿ ಎಚ್ಚರವಾದಾಗ ಅವರು ತೀರ್ಮಾನ ಮಾಡಿದ್ದರು.

ವಂದನಾಳ ಆಟ ನೋಡಬೇಕು!

ಆದರೆ ವಿವೇಕ ಎಚ್ಚರಿಸಿತು. ಉನ್ನತ ಪೊಲೀಸ್ ಅಧಿಕಾರಿಯ ಹೆಂಡತಿ ಬಗ್ಗೆತಲೆಕೆಡಿಸಿಕೊಂಡರೆ ಪರಿಣಾಮ ಕೆಟ್ಟದಾಗಿರುತ್ತದೆ.

ಆದರೆ ವಿಲಕ್ಷಣ ಬಯಕೆ ಗೆದ್ದಿತು.

ಅಂತಿಮವಾಗಿ ಎಲ್ಲಾ ಪ್ಲಾನ್ ಮಾಡಿ ಫೋನ್ ಮಾಡಿದರು.

ಪಳನಿಯಮ್ಮನಿಗೆ ವಿಷಯ ತಿಳಿಸಿದರು.

ಪೊಲೀಸ್ ಅಧಿಕಾರಿಯ ಕುಟುಂಬದ ಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿಸಲು ಆದೇಶಿಸಿದರು. ಅವಳು ಈ ಕೆಲಸಕ್ಕೆ ಇನ್ನಿಬ್ಬರು ಯುವತಿಯರನ್ನು ನೇಮಿಸಿಕೊಂಡಳು. ಒಂದು ವಾರಗಳ ಕಾಲ ಪತ್ತೆದಾರಿ ಕೆಲಸ ಮಾಡಿದರು.

ಮಾಹಿತಿ ಬಂದಿದೆ! ಯಾರೊಬ್ಬರಿಗೂ ಸುಳಿವು ಸಿಗದ ರೀತಿಯಲ್ಲಿ ಆ ಗೃಹಿಣಿಯ ಜೊತೆ ಸಲಿಂಗದ ಆಟ ಆಡಲು ಪ್ಲಾನ್ ಮಾಡಿದ್ದಾರೆ.

ಅವಳನ್ನ ಕಿಡ್ನಾಪ್ ಮಾಡಲಿಲ್ಲ ಅಥವಾ ಬುದ್ಧಿವಂತಿಕೆಯ ಆಟ ಆಡಿ ವಳನ್ನು ಒಂಟಿ ಮನೆಗೆ ಕರೆಸಿಕೊಳ್ಳಲಿಲ್ಲ.

ಪಳನಿಯಮ್ಮ ಇವರ ಪ್ಲಾನ್ ಪ್ರಕಾರ ಎಲ್ಲಾ ರೆಡಿ ಮಾಡಿಕೊಂಡು ಪೊಲೀಸ್ ಅಧಿಕಾರಿಯ ಬಂಗಲೆಯ ಕಡೆ ಹೋಗುತ್ತಿದ್ದಾರೆ.

ಆ ಮಾಸ್ಟರ್ ಪ್ಲಾನ್ ಏನು?

ಪಳನಿಯಮ್ಮ ತುಂಬಾ ಬುದ್ಧಿವಂತಿಕೆಯ ಆಟ ಆಡಿ, ಪೊಲೀಸ್ ಕಮೀಷನರ್ ಅವರ ಗಾರ್ಡನ್ ಮತ್ತು ಬಂಗಲೆಯನ್ನುಪ್ರತಿದಿನ ಕ್ಲೀನ್ ಮಾಡುವ ಕೆಲಸ ಪಡೆದಳು. ಇದು ಸಾಧ್ಯವಾಗಲಿ ಅಂತ ರಾಜಕಾರಣಿ ರಂಗವೇಲನ್ ಪ್ರಭಾವ ಬೀರಿದ್ದರು.

●●●

ಒಂದು ವಾರ ಕಳೆಯಿತು.

ರಾತ್ರಿ ಹತ್ತು ಗಂಟೆ. ಬಂಗಲೆಯ ಟಾಪ್ ಸೀಕ್ರೆಟ್ ರೂಮಿನಲ್ಲಿ ಅವರು ಕುಳಿತಿದ್ದಾರೆ.

ಹೋಮ್ ಸ್ಕ್ರೀನ್ ಪರದೆಯ ಮೇಲೆ ವೀಡಿಯೋ ದೃಶ್ಯ ಬರುತ್ತಿದೆ.

ವಿದೇಶಿ ವಿಸ್ಕಿ ಕುಡಿಯುತ್ತಿದ್ದಾರೆ. ಆ ದೃಶ್ಯ ನೋಡುತ್ತಿದ್ದಾರೆ. ಅವರ ಮೈ ಬೆಚ್ಚಗಾಗುತ್ತಿದೆ. ವಂದನಾಳ ಬೆತ್ತಲೆ ದೇಹದ ಸೊಬಗು ಬಲು ವಿಶಿಷ್ಟವಾಗಿದೆ. ಪ್ರತಿ ಅಂಗ ಅಂಗಗಳಲ್ಲಿ ವಿಶೇಷ ಸೌಂದರ್ಯ ಇದೆ. ಪಳನಿಯಮ್ಮ ಅವಳ ಗುಪ್ತಾಂಗವನ್ನು ಬಿಡಿಸಿ ತೋರಿಸುತ್ತಿದ್ದಾಳೆ.

ದುರ್ಬಲ ಗಂಡಸು ವಿಪರೀತ ಕಾಮದ ಉದ್ರಿಕ್ತತೆ ಯಿಂದ ಸರೆಂಡರ್ ಆಗಿದ್ದಾನೆ.

ಸುಖದ ಮುಲುಗಾಟ ಜಾಸ್ತಿಯಾಗಿದೆ. ತುಂಬಾ ದಿನಗಳಿಂದ ಸಲಿಂಗ ಕಾಮದ ದೃಶ್ಯ ನೋಡುತ್ತಿದ್ದರೂ ಈ ರೀತಿ ಸ್ಖಲನಗೊಂಡಿರಲಿಲ್ಲ. ಇದು ವಂದನಾಳ ಸೌಂದರ್ಯದ ಪ್ರಭಾವವಾಗಿದೆ.

●●●

ಸಂಜೆ ಆರು ಗಂಟೆ. ವಂದನಾಳಿಗೆ ಎಚ್ಚರವಾಗಿದೆ. ಆದರೆ ಅವಳಿಗೆ ಎದ್ದು ಕೂರಲು ಆಗುತ್ತಿಲ್ಲ. ತಲೆ 'ಧೀಂ... ಧೀಂ' ಎಂಬಂತೆ ಹಿಡಿಯುತ್ತಿದೆ.

ಅವಳು ಬೆಚ್ಚಿಬಿದ್ದಳು. ವಂದನ ಬೆತ್ತಲಾಗಿದ್ದಾಳೆ.

ಅವಳ ಶರೀರ ತುಂಬಾ ಅಂಟು ಅಂಟಾಗಿದೆ. ಅಸಹ್ಯ, ಹೇಸಿಗೆ ಉಂಟಾಗುತ್ತಿದೆ. ಕತ್ತಿನ ಭಾಗ, ಎದೆ ಉಬ್ಬುಗಳ ಮೇಲೆ ಕಚ್ಚಿರುವ ಗುರುತುಗಳು ಮೂಡಿವೆ.

ಅವಳು ತಡಬಡಿಸುತ್ತಿದ್ದಾಳೆ.

ಯಾಕೆ ಹೀಗಾಯಿತು?

ಅವಳು ತುಂಬಾ ಕಷ್ಟದಿಂದಲೇ ಎದ್ದು ತೂರಾಡುತ್ತಿರುವ ರೀತಿ ನಡೆಯುತ್ತಾ, ಬಾತ್‌ರೂಮಿಗೆ ಹೋಗಿ ಸ್ನಾನ ಮಾಡಿದಳು.

ಮನೆಯಲ್ಲಿ ಯಾರೂ ಇರಲಿಲ್ಲ. ಗಂಡ ಪಾಂಡ್ಯನ್‌ಗೆ ಈ ರಾಜ್ಯದ ವರಿಷ್ಠ ಪೊಲೀಸ್ ಅಧಿಕಾರಿಯಿಂದ ತುರ್ತು ಕರೆ ಬಂದಿದ್ದರಿಂದ, ಯವುದೋ ಕ್ರೈಂ ಬಗ್ಗೆ ತನಿಖೆ ಮಾಡಲು, ಇವರ ಕೈಕೆಳಗಿನ ಅಧಿಕಾರಿಗಳಿಗೆ ಸೂಚನೆ ಕೊಡಲು ಹೋಗಿದ್ದಾರೆ. ಎಲ್ಲಾ ಸಂಬಂಧಿಕರು ಮದುವೆಯ ಫಂಕ್ಷನ್‌ಗೆ ಅಂತ ಕಾಂಚಿಪುರಂಗೆ ಹೋಗಿದ್ದಾರೆ. ಮಧ್ಯಾಹ್ನ ಒಂದು ಗಂಟೆತನಕ ಮನೇಲಿ ಯಾರೂ ಇರಲಿಲ್ಲ.

ತಟ್ಟನೆ ನೆನಪಿಗೆ ಬಂತು.

ಹೊಸದಾಗಿ ಕೆಲಸಕ್ಕೆ ಸೇರಿದ್ದ ಪಳನಿಯಮ್ಮ ಎಂಬ ಹೆಂಗಸು ಮನೆಯೊಳಗೆ ಬಂದಿದ್ದಳು. ಅವಳು ಏನೋ ಮಾತಾಡುತ್ತಾ ಸರ್ರನೆ ಉದ್ದವಾದ ಕೊಳವೆ ತೆಗೆದು ಇವಳ ಮುಖದ ಮೇಲೆ ಸ್ಪ್ರೇ ಮಾಡಿದ್ದಳು.

ಪ್ರಜ್ಞೆ ತಪ್ಪಿರಲಿಲ್ಲ ನಿಜ. ಆದರೆ ನಿಯಂತ್ರಣ ಕಳೆದುಕೊಂಡಿದ್ದಳು. ಇದೆಲ್ಲಾ ಏನು?

ಅವಳಿಗೆ ಅಲ್ಪಸ್ವಲ್ಪ ನೆನಪಿದೆ. ಇವಳ ದೇವರ ಅಂಗ ಅಂಗಗಳನ್ನು ಮುಟ್ಟಿ, ತೀಡಿ, ಹಲ್ಲುಗಳ ಮತ್ತು ನಾಲಿಗೆ ಆಟ ಆಡಿ ಇವಳ ಕಾಮ ಪ್ರಚೋದನೆ ಮಾಡಿದ್ದಳು.

ಎಲ್ಲಿ... ಪಳನಿಯಮ್ಮ ಎಲ್ಲಿ?

ಅವಳು ತಡ ಮಾಡಲಿಲ್ಲ. ಉಳಿದ ಯುವತಿಯರ ರೀತಿ ಹೆದರಿ ಘಟನೆಯನ್ನು ಮುಚ್ಚಿಡಲಿಲ್ಲ. ಗಂಡನಿಗೆ ಫೋನ್ ಮಾಡಿ ಎಲ್ಲಾ ವಿಚಾರ ಹೇಳಿದಳು.

ಪೊಲೀಸ್ ಕಮೀಷನರ್ ಪಾಂಡ್ಯನ್ ವಿಷಯವನ್ನು ಗೌಪ್ಯವಾಗಿಡಲು ಹೇಳಿದರು. ಆ ಕೂಡಲೇ ಪೊಲೀಸ್ ಅಧಿಕಾರಿಗಳಿಗೆ ಗೌಪ್ಯವಾಗಿ ತನಿಖೆ ಮಾಡಲು ಹೇಳಿದರು. ಕೆಲವು ಸನ್ನಿವೇಶಗಳಲ್ಲಿ ಬುದ್ಧಿವಂತರೂ ಸಹ ಎಡವುತ್ತಾರೆ ಎಂಬುದಕ್ಕೆ ಕುತಂತ್ರಿ, ರಾಜಕಾರಣಿ ರಂಗವೇಲನ್ ಸಾಕ್ಷಿಯಾಗಿದ್ದಾರೆ. ಅವರು ಉಳಿದ ಸುಂದರಿಯರಿಗೆ ಸಲಿಂಗಕಾಮ ದೃಶ್ಯ ವೀಡಿಯೋ ಕ್ಲಿಪ್‌ಗಳನ್ನು ಕಳಿಸಿ ಬ್ಲಾಕ್‌ಮೇಲ್ ಬೆದರಿಕೆ ಹಾಕಿದ್ದರು.

ನಂತರ ಆಗಿದ್ದೇನು?

''ವಂದನ... ಇದು ಬಹಿರಂಗ ಆಗಬಾರದು. ಆ ರೀತಿ ಮಾಡಿದರೆ ಈ ವೀಡಿಯೋ ಎಲ್ಲಾ ಮೀಡಿಯಾಗಳಲ್ಲಿ ಏಕಕಾಲದಲ್ಲಿ ಪ್ರಸಾರ ಆಗುತ್ತದೆ ಎಂಬುದು ನಿಜ. ಇದನ್ನು ಮರೆತುಬಿಡು.

ಬುದ್ಧಿವಂತೆ ವಂದನ ರಂಗವೇಲನ್ ಅವರ ಫೋನ್ ಸಂಭಾಷಣೆ ರೆಕಾರ್ಡ್ ಮಾಡಿದ್ದಳು. ಗಂಡನಿಗೆ ವೀಡಿಯೋ ತೋರಿಸಿ ಎಲ್ಲಾ ಹೇಳಿದ್ದಳು. ಪಾಂಡ್ಯನ್ ಎಂಬ ಅಧಿಕಾರಿ ದುಡುಕಲಿಲ್ಲ. ಆತುರ ಪಡಲಿಲ್ಲ. ತುಂಬಾ ಬುದ್ಧಿವಂತಿಕೆಯಿಂದ ಆಟ ಆಡಿದರು.

ತಮ್ಮ ವಿಶ್ವಾಸಕ್ಕೆ ಪಾತ್ರರಾಗಿರುವ ನಾಲ್ಕು ಮಂದಿ ಬುದ್ಧಿವಂತ ಅಧಿಕಾರಿಗಳಿಗೆ ಈ ರಾಜಕಾರಣಿಯ ಚಟುವಟಿಕೆಗಳನ್ನು ಗಮನಿಸಲು ಮತ್ತು ಪಳನಿಯಮ್ಮನ ಮೇಲೆ ಕಣ್ಣಿಡಲು ಹೇಳಿದರು.

ಒಂದು ವಾರ ಕಳೆಯಿತು.

ಪ್ರತಿ ವಾರ ಹೊಸ ಚೆಲುವೆಯ ಸಲಿಂಗ ಕಾಮದ ಆಟ ನೋಡದಿದ್ದರೆ ಹುಚ್ಚರಾಗಿ ಬಿಡುತ್ತಿದ್ದರು. ಈಗ ಅವರ ಬಲೆಗೆ ಬಿದ್ದವಳು ಯಾರು... ಯಾರು ಗೊತ್ತೆ?

ಸೀರಿಯಲ್ ನಟಿ ವಾಸಂತಿ ಕಣ್ಣನ್ ಎಂಬ ಸೌಂದರ್ಯವತಿ. ಯಾವುದೋ ಕಾರ್ಯಕ್ರಮದಲ್ಲಿ ಅವಳನ್ನು ತುಂಬಾ ಹತ್ತಿರದಿಂದಲೇ ನೋಡಿದ್ದರು.

ಅವಳನ್ನು ವಿಶೇಷ ಕಾರ್ಯಕ್ರಮದದ ನೆಪ ಹೇಳಿ ಕರೆಸಿಕೊಂಡಿದ್ದರು. ನಗರದ ಹೊರವಲಯದಲ್ಲಿರುವ ಗ್ರಾಮಾಂತರ ಪ್ರದೇಶದ ಮನೆಯೊಂದರಲ್ಲಿ ವಾಸಂತಿ ಕಣ್ಣನ್ ಇದ್ದಾಳೆ. ಅವರು (ರಂಗವೇಲನ್) ಅವಳಿಗೆ ಎರಡು ಸಲ ಫೋನ್ ಮಾಡಿ ತಾವು ಬೇಗ ಬರುವುದಾಗಿ ಹೇಳಿದ್ದರು ಮತ್ತು ಪಳನಿಯಮ್ಮ ಎಂಬ ಕೆಲಸದ ಹೆಂಗಸು ನಿನ್ನನ್ನು ಟ್ರೀಟ್ ಮಾಡುತ್ತಾಳೆ ಎಂದು ಹೇಳಿದ್ದರು.

ಪೊಲೀಸ್ ಕಮೀಷನರ್ ಹೆಂಡತಿಯ ಪ್ರಕರಣದ ನಂತರ ಪಳನಿಯಮ್ಮ ಹೆದರಿದ್ದಳು ಮತ್ತು ನಾಲ್ಕು ದಿವಸ ತಲೆಮರೆಸಿಕೊಂಡಿದ್ದಳು. ರಂಗವೇಲನ್ ಹಣದ ಆಮಿಷ ತೋರಿಸಿದ್ದರಿಂದ ಹೆದರುತ್ತಲೇ ಒಪ್ಪಿಕೊಂಡಿದ್ದಳು. ಅವಳು ಬೇರೊಂದು ರೀತಿ ಆಟ ಆಡಿ ವಾಸಂತಿ ಕಣ್ಣನ್‌ಗೆ ಅಮಲೇರುವಂತೆ ಮಾಡಿದ್ದಳು. ನಾಲ್ಕು ವೀಡಿಯೋ ಕ್ಯಾಮರಾಗಳನ್ನು ಫಿಕ್ಸ್ ಮಾಡಲಾಗಿದೆ.

ಅಮಲಿನಿಂದ ತೂರಾಡುತ್ತಿದ್ದ ಅವಳನ್ನು ಪಳನಿಯಮ್ಮ ತಬ್ಬಿಕೊಂಡು ಮುದ್ದಾಡುತ್ತಿರುವ ದೃಶ್ಯಗಳನ್ನು ಪೊಲೀಸರು ವಿಶೇಷ ಕ್ಯಾಮರಾಗಳಲ್ಲಿ ಸೆರೆ ಹಿಡಿದ್ದ.

ಪಳನಿಯಮ್ಮನನ್ನು ಬಂಧಿಸಲಾಯಿತು.

ಪೊಲೀಸರಿಗೆ ವಾಸ್ತವ ಸಂಗತಿ ತಿಳಿದಿತ್ತು. ಅದೇನು ಗೊತ್ತೆ?

ರಂಗವೇಲನ್ ಪ್ರಭಾವಶಾಲಿ ರಾಜಕಾರಣಿ. ಅವನು ಪ್ರಭಾವ ಬೀರುವ ಮೊದಲೇ ಪಳನಿಯಮ್ಮನಿಂದ ಎಲ್ಲಾ ಬಾಯಿ ಬಿಡಿಸಿದ್ದರು ಮತ್ತು ಸಾಕ್ಷಿಗಳ ಸಮಕ್ಷಮದಲ್ಲಿ ರೆಕಾರ್ಡ್ ಆಗಿದೆ. ವಾಸಂತಿ ಕಣ್ಣನ್‌ಗೆ ರಂಗವೇಲನ್ ನಾಲ್ಕುಸಲ ಫೋನ್ ಮಾಡಿದ್ದರು. ಅವಳು ಅವರಿಂದ ಹಣ ವಸೂಲಿ ಮಾಡುವ ಉದ್ದೇಶದಿಂದ ಆಗ ಬ್ಲಾಕ್‌ಮೇಲ್ ಬುದ್ಧಿ ಉಪಯೋಗಿಸಿದ್ದಳು. ಆ ಸಂಭಾಷಣೆ ರೆಕಾರ್ಡ್ ಆಗಿತ್ತು.

ಪೊಲೀಸ್ ಅಧಿಕಾರಿ ಪಾಂಡ್ಯನ್ ತನ್ನ ಪತ್ನಿಯ ಪ್ರಕರಣ ಗೌಪ್ಯವಾಗಿಟ್ಟು ಉಳಿದ ಪ್ರಕರಣಗಳಲ್ಲಿ ದೊರೆತ ಸಾಕ್ಷಿ, ಆಧಾರಗಳನ್ನು ಸಂಗ್ರಹಿಸಿ ಅರೆಸ್ಟ್ ಮಾಡಿಸಿದರು.

ತಮಿಳುನಾಡಿನ ಪ್ರಮುಖ ರಾಜಕಾರಣಿಯೊಬ್ಬರ ವಿಚಿತ್ರ-ವಿಲಕ್ಷಣ ತೆವಲಿನ ಪ್ರಕರಣಗಳು ಬಹಿರಂಗವಾಗಿದ್ದ ಸುದ್ದಿ ರಾಷ್ಟ್ರೀಯ ಅಗ್ರ ವಾರ್ತೆಯಲ್ಲಿ ಪ್ರಸಾರವಾಗಿ ದೇಶದ ಗಮನ ಸೆಳೆಯಿತು.

ರಂಗವೇಲನ್ ನಪುಂಸಕ ಅಲ್ಲ. ಆದರೆ ಹೆಣ್ಣನ್ನು ತೃಪ್ತಿಪಡಿಸುವಷ್ಟು ಶಕ್ತಿ ಇರಲಿಲ್ಲ. ಯಾವುದೋ ಸನ್ನಿವೇಶದಲ್ಲಿ (ಪ್ರಾಯದಲ್ಲಿ) ಸಲಿಂಗ ಕಾಮದ ಸಿನಿಮಾ ನೋಡಿ ಪ್ರಭಾವಿತರಾಗಿದ್ದರು.

ಇದೇ ದುರ್ಬಲತೆ.

ಅವರು ಅಡಿಕ್ಟ್ ಆಗಿದ್ದರಿಂದ, ಈ ಚಪಲ, ಹುಚ್ಚು ಆಸೆ ನಿಯಂತ್ರಿಸಲಾರದೆ ಚೆಲುವೆಯರ ಜೊತೆ ಪ್ರತ್ಯಕ್ಷ ಸಲಿಂಗಕಾಮದಾಟ ಆಡಿಸಿ ನೋಡುತ್ತಿದ್ದರು. ಈ ತಪ್ಪಿಗೆ ಅವರಿಗೆ ಶಿಕ್ಷೆಯಾಗಿದೆ.

☯

# ನಟಿ ಶೋಭಿತಾ ಶಿವಣ್ಣ ಸಾವು: ಪತಿಯ ವಿರುದ್ಧ ಅನುಮಾನ!



ಕನ್ನಡ ಕಿರುತೆರೆಯ ಖ್ಯಾತ ನಟಿ ಶೋಭಿತಾ ಶಿವಣ್ಣ ಸಾವಿಗೆ ಶರಣಾಗಿದ್ದಾರೆ. ಬ್ರಹ್ಮಗಂಟು, ನೀನಾದೆ ನಾ, ಸೇರಿದಂತೆ ಕನ್ನಡ ಹಲವು ಧಾರಾವಾಹಿಗಳಲ್ಲಿ ನಟಿಸಿದ್ದ ಶೋಭಿತಾ ಹೈದರಾಬಾದ್‌ನಲ್ಲಿರುವ ಪತಿಯ ನಿವಾಸದಲ್ಲಿ ಸಾವಿಗೆ ಶರಣಾಗಿದ್ದಾರೆ. ಸಕಲೇಶಪುರ ಮೂಲದವರಾದ ಶೋಭಿತಾ ಶಿವಣ್ಣ ಮದುವೆ ಬಳಿಕ ಹೈದರಾಬಾದ್‌ಗೆ ಶಿಫ್ಟ್ ಆಗಿದ್ದು, ಇದೀಗ ಅಲ್ಲಿಯೇ ಕೊನೆಯುಸಿರೆಳೆದಿದ್ದಾರೆ.

ಕಳೆದ ವರ್ಷ ಅಂದರೆ 2023ರ ಮೇ 22ರಂದು ಶೋಭಿತಾ ಶಿವಣ್ಣ ಹೈದರಾಬಾದ್‌ನ ಸಾಫ್ಟ್‌ವೇರ್ ಕಂಪನಿ ಉದ್ಯೋಗಿ ಸುಧೀರ್ ಎನ್ನುವವರ ಜೊತೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ಇದೊಂದು ಪಕ್ಕಾ ಅರೇಂಜ್ ಮ್ಯಾರೇಜ್ ಆಗಿದ್ದು, ಅಕ್ಕನ ಗಂಡನ ಸಂಬಂಧಿ ಕರನ್ನೇ ಶೋಭಿತಾ ಶಿವಣ್ಣ ಮದುವೆಯಾಗಿದ್ದರು ಎನ್ನಲಾಗಿದೆ.

ಮದುವೆಯ ನಂತರ ಹೈದರಾಬಾದ್‌ನಲ್ಲಿ ಇದ್ದ ಕಾರಣ



ಶೋಭಿತಾ ನಟನೆಯಿಂದ ದೂರವಿದ್ದರು. ಈ ಕೊರಗು ಅವರನ್ನು ಸದಾ ಕಾಡುತ್ತಿತ್ತು ಎನ್ನಲಾಗಿದೆ. ಅಲ್ಲದೇ ತಾನು ಮತ್ತೆ ಬಣ್ಣ ಹಚ್ಚಬೇಕು, ತೆರೆ ಮೇಲೆ ಬರಬೇಕು ಎಂದು ಶೋಭಿತಾ ತಮ್ಮ ಸ್ನೇಹಿತರ ಬಳಿ ಆಗಾಗ ಹೇಳುತ್ತಿದ್ದರಂತೆ. ಇನ್ನು ಸದ್ಯದಲ್ಲೇ ಶೋಭಿತಾ ಪತಿ ಬೆಂಗಳೂರಿಗೆ ಶಿಫ್ಟ್ ಆಗಲು ಪ್ಲ್ಯಾನ್ ಮಾಡಿದ್ದರಂತೆ. ಹೀಗಾಗಿ ಶೋಭಿತಾ ಬೆಂಗಳೂರಿಗೆ ಬಂದ ಮೇಲೆ ಮತ್ತೆ ನಟಿಸಬೇಕು ಎನ್ನುವ ಖುಷಿಯಲ್ಲಿದ್ದರಂತೆ.

ಇಷ್ಟೆಲ್ಲಾ ಪ್ಲ್ಯಾನ್‌ಗಳನ್ನು ಮಾಡಿಕೊಂಡಿದ್ದ ಶೋಭಿತಾಗೆ ಅದೇನಾಯ್ತೋ ಗೊತ್ತಿಲ್ಲ, ಪತಿ ಸುಧೀರ್ ಮನೆಯಲ್ಲಿದ್ದಾಗಲೇ ಶೋಭಿತಾ ಅವರು ಸಾವಿಗೆ ಶರಣಾಗಿದ್ದಾರೆ ಎನ್ನಲಾಗಿದೆ. ಹೈದರಾಬಾದ್‌ನ ಕೊಂಡಾಪುರ ಶ್ರೀರಾಮ ಕಾಲೋನಿಯಲ್ಲಿ ವಾಸವಾಗಿದ್ದ ಶೋಭಿತಾ, ನವೆಂಬರ್ 30ರಂದು ರೂಮ್‌ನಲ್ಲಿ ಒಬ್ಬರೇ ಇದ್ದರಂತೆ. ಪತಿ ಸುಧೀರ್ ಅವರು ಕೆಲಸದ ನಿಮಿತ್ತ ಲ್ಯಾಪ್ ಟಾಪ್‌ನಲ್ಲಿ ಕೆಲಸ ಮಾಡುತ್ತಾ ಹಾಲ್‌ನಲ್ಲಿ ನಿದ್ರೆಗೆ ಜಾರಿದ್ದರಂತೆ. ಬೆಳಗ್ಗೆ ಎದ್ದು ನೋಡಿದರೆ ಶೋಭಿತಾ ರೂಮ್‌ನ ಬಾಗಿಲು ತೆರೆದಿಲ್ಲ, ಎಷ್ಟೇ ಕರೆದರೂ ಪ್ರತಿಕ್ರಿಯಿಸಿಲ್ಲ.

ಹೀಗಾಗಿ ಸುಧೀರ್, ಕೂಡಲೇ ಶೋಭಿತಾ ಸಹೋದರ ವಿಜಯ್‌ಗೆ ಈ ವಿಚಾರ ಮುಟ್ಟಿಸಿದ್ದು ಅವರು ಫ್ಲಾಟ್‌ಗೆ ಬಂದು, ಬಾಗಿಲು ಒಡೆದ ವೇಳೆ ಶೋಭಿತಾ ಮೃತದೇಹ ಕಾಣಿಸಿಕೊಂಡಿದೆ ಎನ್ನಲಾಗಿದೆ. ಇನ್ನು ಶೋಭಿತಾ ಹಾಗೂ ಪತಿ ಸುಧೀರ್ ನಡುವೆ ಯಾವುದೇ ವೈಮನಸ್ಸು ಇಲ್ಲ ಎಂದು ಆಪ್ತರು ಹೇಳುತ್ತಿದ್ದಾರೆ. ಆದರೆ ಶೋಭಿತಾ ಯಾಕೆ ಏಕಾಏಕಿ ಈ ನಿರ್ಧಾರ ತೆಗೆದುಕೊಂಡರು ಎನ್ನುವುದು ಸದ್ಯ ಯಕ್ಷ ಪ್ರಶ್ನೆಯಾಗಿದೆ. ಆದರೂ ಕೆಲವರು ಅವರ ಪತಿ ವಿರುದ್ಧ ಕೆಲವು ಅನುಮಾನಗಳನ್ನು ಹೊರಹಾಕುತ್ತಿದ್ದಾರೆ. ಇಬ್ಬರೇ ಇದ್ದ ಮನೆಯಲ್ಲಿ ಎಲ್ಲವೂ ಸರಿ ಇತ್ತಾ...? ಬೆಂಗಳೂರಿಗೆ ಶಿಫ್ಟ್ ಆಗಲು ಪ್ಲ್ಯಾನ್ ಮಾಡಿದ್ದು ನಿಜನಾ...? ಶೋಭಿತಾ ಮತ್ತೆ ನಟನೆ ಮಾಡುವುದು ಸುಧೀರ್‌ಗೆ ಇಷ್ಟ ಇರಲಿಲ್ವಾ? ಹೀಗೆ ಅನೇಕ ಅನುಮಾನಗಳನ್ನು ಹೊರಹಾಕುತ್ತಿದ್ದಾರೆ. ☯



# ಜನವರಿ ಅಂತ್ಯದಲ್ಲಿ ಮಾಫಿಯಾ

ಕನ್ನಡ, ತೆಲುಗಿನಲ್ಲಿ ಸಾಕಷ್ಟು ಯಶಸ್ವೀ ಚಿತ್ರಗಳನ್ನು ವಿತರಣೆ ಮಾಡಿ ಗುರುತಿಸಿಕೊಂಡಿರುವ ಕುಮಾರ್ ಬಿ. ಅವರ ನಿರ್ಮಾಣದ ಬಹುನಿರೀಕ್ಷಿತ ಚಿತ್ರ ಮಾಫಿಯಾ. ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್, ಅದಿತಿ ಪ್ರಭುದೇವ ನಾಯಕ, ನಾಯಕಿಯಾಗಿ ನಟಿಸಿರುವ ಈ ವರ್ಷದ ಮಾಸ್ ಎಂಟರ್‌ಟೈನರ್ ಆದ ಮಾಫಿಯಾ ಚಿತ್ರಕ್ಕೆ ಮಮ್ಮಿ ಖ್ಯಾತಿಯ ಲೋಹಿತ್ ಹೆಚ್. ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಇತ್ತೀಚೆಗಷ್ಟೆ ಈ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯಾವುದೇ ಕಟ್ ಅಥವಾ ಮ್ಯೂಟ್ ಹೇಳದೆ ಚಿತ್ರಕ್ಕೆ ಯು/ಎ ಪ್ರಮಾಣ ಪತ್ರ ನೀಡಿ ಬಿಡುಗಡೆಗೆ ಅನುವತಿ ನೀಡಿದೆ. ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿರುವ ಮಾಫಿಯಾ ಚಿತ್ರದ ಬಿಡುಗಡೆ ದಿನಾಂಕವನ್ನು ಸದ್ಯದಲ್ಲೇ ಘೋಷಿಸುವುದಾಗಿ ಚಿತ್ರದ ನಿರ್ಮಾಪಕರಾದ ಬೆಂಗಳೂರು ಕುಮಾರ್ ಅವರು ಮಾತನಾಡುತ್ತ ತಿಳಿಸಿದ್ದಾರೆ. ಅಂದುಕೊಂಡ ಹಾಗೆ ಎಲ್ಲ ಆದರೆ ಈ ತಿಂಗಳ ಕೊನೆಯಲ್ಲಿ ಚಿತ್ರದ ಟ್ರೈಲರ್ ರಿಲೀಸ್ ಮಾಡುವ ಯೋಜನೆಯಿದ್ದು, ಅದರ ನಂತರ ರಿಲೀಸ್ ಡೇಟ್ ಅನೌನ್ಸ್ ಮಾಡುತ್ತೇವೆ, ಬಹುಷಃ ಜನವರಿ ತಿಂಗಳ ಕೊನೆಯ ವಾರ ಮಾಫಿಯಾ ಚಿತ್ರವನ್ನು ತೆರೆಗೆ ತರಬೇಕೆಂಬ ಯೋಜನೆಯಿದೆ ಎಂದವರು ಹೇಳಿದರು.

ಇನ್ನು ಸಾಕಷ್ಟು ಕುತೂಹಲ ಹುಟ್ಟು ಹಾಕಿರುವ ಈ ಚಿತ್ರದ ಬಿಡುಗಡೆಗಾಗಿ ಪ್ರಜ್ವಲ್ ದೇವರಾಜ್ ಅವರ ಸಹಸ್ರಾರು ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಆಕ್ಷನ್ ಥ್ರಿಲ್ಲರ್ ಜಾನರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಬೆಂಗಳೂರು, ಮೈಸೂರು ಹಾಗೂ ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಯಲ್ಲಿ ಚಿತ್ರೀಕರಣ ನಡೆಸಲಾಗಿದೆ. ಜನ ಸಾಮಾನ್ಯರನ್ನು ವಂಚಿಸುತ್ತಿರುವ ಮೆಡಿಕಲ್ ಮಾಫಿಯಾ ಸುತ್ತ ನಡೆಯುವ ವಿಭಿನ್ನವಾದ ಕಥಾಹಂದರ ಒಳಗೊಂಡಿರುವ, ಈ ಚಿತ್ರದಲ್ಲಿ ಬೆಣ್ಣೆ ನಗರಿಯ ಬೆಡಗಿ ಅದಿತಿ ಪ್ರಭುದೇವ ಅವರು ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ಲೋಹಿತ್ ಅವರೇ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಮಾಫಿಯಾ ಚಿತ್ರವನ್ನು ರಾಜ್ಯಾದ್ಯಂತ ಅದ್ದೂರಿ ಪ್ರಚಾರದೊಂದಿಗೆ ಬಿಡುಗಡೆ ಮಾಡಲು ನಿರ್ಮಾಪಕ ಕುಮಾರ್ ಬಿ. ಅವರು ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೂ ಮುನ್ನ ಚಿತ್ರದ ಟ್ರೈಲರ್ ಹಾಗೂ ಆಡಿಯೋ ರಿಲೀಸ್ ಮಾಡುವ ಯೋಜನೆ ನಡೆಯುತ್ತಿದೆ.

ಈ ತಿಂಗಳ ಕೊನೆಯಲ್ಲಿ ಎರಡು ಬಿಗ್ ಸ್ಟಾರ್ ಸಿನಿಮಾಗಳು ಒಂದರ ಹಿಂದೊಂದರಂತೆ ಬಿಡುಗಡೆಯಾಗುತ್ತಿದ್ದು, ಸಾಲು ಸಾಲು ಸ್ಟಾರ್ ಚಿತ್ರಗಳು ರಿಲೀಸಾಗಿ ರಾಜ್ಯದ ಎಲ್ಲಾ ಥೇಟರುಗಳು ಭರ್ತಿಯಾಗಲಿವೆ, ಅದರ ನಂತರ ಮಾಫಿಯಾ ಅಬ್ಬರ ಶುರುವಾಗುತ್ತಿದ್ದು, ಆಕ್ಷನ್ ಪ್ರಿಯರಿಗೆ ಈ ಚಿತ್ರ ಭರ್ಜರಿ ರಸದೌತಣವನ್ನು ನೀಡಲಿದೆ. ಆರಂಭದಿಂದಲೂ ಸಾಕಷ್ಟು ಕುತೂಹಲ ಹುಟ್ಟಿಸಿರುವ ಈ ಚಿತ್ರದ ಬಿಡುಗಡೆಗೆ ಪ್ರಜ್ವಲ್ ದೇವರಾಜ್ ಅಭಿಮಾನಿಗಳು ಕೂಡ ಕಾತುರದಿಂದ ಕಾಯುತ್ತಿದ್ದಾರೆ. ಈಗಾಗಲೇ ರಿಲೀಸಾಗಿರುವ ತುಂಬಾನೇ ಕೇಳಲಾರೆ ಹಿಂದೆ ಬಿದ್ದು ಎನ್ನುವ ಮೆಲೋಡಿ ಸಾಂಗ್ ಸಂಗೀತ ಪ್ರಿಯರ ಮನಗೆದಿದ್ದು, ದೊಡ್ಡ ಮಟ್ಟದಲ್ಲಿ ವೈರಲ್ ಆಗಿದೆ. ಈ ಹಾಡು ಅತಿ ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆಯಾಗಿದೆ. ಪ್ರಮೋದ್ ಮರವಂತೆ ಅವರ ಸಾಹಿತ್ಯ ಹಾಗೂ ಅನೂಪ್ ಸೀಳಿನ್ ಅವರ ಸಂಗೀತ ಸಂಯೋಜನೆ ಈ ಹಾಡಿಗಿದೆ, ಅಪಾರ ವೆಚ್ಚದಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ಮೈನವಿರೇಳಿಸುವ ಐದು ಸಾಹಸ ಸನ್ನಿವೇಶಗಳಿವೆ. ಈ ಚಿತ್ರಕ್ಕಾಗಿಯೇ ನಾಯಕ ನಟ ಪ್ರಜ್ವಲ್ ದೇವರಾಜ್ ಅವರು ಸಾಕಷ್ಟು ಶ್ರಮವಹಿಸಿದ್ದಾರೆ. ನಾಲ್ಕು ಹಾಡುಗಳಿರುವ ಈ ಚಿತ್ರಕ್ಕೆ ಅನೂಪ್ ಸೀಳಿನ್ ಹಾಗೂ ಗಗನ್ ಭಡೇರಿಯಾ ಅವರ ಸಂಗೀತ ನಿರ್ದೇಶನವಿದೆ. ಎಸ್. ಪಾಂಡಿಕುಮಾರ್ ಅವರ ಛಾಯಾಗ್ರಹಣವಿರುವ ಈ ಚಿತ್ರದ ತಾರಾಬಳಗದಲ್ಲಿ ಪ್ರಜ್ವಲ್ ದೇವರಾಜ್, ಅದಿತಿ ಪ್ರಭುದೇವ, ದೇವರಾಜ್, ಸಾಧು ಕೋಕಿಲ, ಶೈನ್ ಶೆಟ್ಟಿ ವಿಜಯ್ ಚೆಂಡೂರ್, ವಾಸುಕಿ ವೈಭವ್ ಮುಂತಾದವರಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿರುವ ಆರ್ಗನ್ ಮಾಫಿಯಾವನ್ನು ಚಿತ್ರದ ನಾಯಕ ಹೇಗೆ ಬೇಧಿಸುತ್ತಾನೆ ಎಂಬ ಕಥೆ ಈ ಚಿತ್ರದಲ್ಲಿದೆ. ಆಕ್ಷನ್ ಜಾನರ್ ಕಥಾಹಂದ ಹೊಂದಿರುವ ಈ ಚಿತ್ರಕ್ಕೆ ಬೆಂಗಳೂರು, ಮೈಸೂರು ಹಾಗೂ ಹೈದರಾಬಾದ್‌ನಲ್ಲಿ ನೂರಕ್ಕೂ ಹೆಚ್ಚು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಚಿತ್ರದ ಪಾತ್ರಕ್ಕಾಗಿ ನಾಯಕ ಪ್ರಜ್ವಲ್ ದೇವರಾಜ್ ಅವರಂತೂ ಸಾಕಷ್ಟು ಪರಿಶ್ರಮವಹಿಸಿದ್ದಾರೆ. ಕ್ಲೈಮ್ಯಾಕ್ಸ್ ಭಾಗದಲ್ಲಿ ಒಂದು ಹೈವೋಲ್ಟೇಜ್ ಆ್ಯಕ್ಷನ್ ಸೀಕ್ವೆನ್ಸ್ ಇದ್ದು, ಜೊತೆಗೆ ಮಾಸ್ತಿ ಅವರ ಅದ್ಭುತ ಸಂಭಾಷಣೆಗಳು ಈ ಚಿತ್ರವನ್ನು ಬೇರೆಯದೇ ಲೆವೆಲ್‌ಗೆ ಕೊಂಡೊಯ್ದಿದೆ. ☯




## ವರದಿಗಾರರು ಬೇಕಾಗಿದ್ದಾರೆ

"ಪೊಲೀಸ್ ನ್ಯೂಸ್" ಪತ್ರಿಕೆಯ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ವರದಿಗಾರರಾಗಿ ಕೆಲಸ ಮಾಡಲು ಇಚ್ಛಿಸುವವರು ತಮ್ಮ ಭಾವಚಿತ್ರ ಸಮೇತ ತಮ್ಮ ಬಗ್ಗೆ ವಿವರಿಸಿ ಮತ್ತು ಒಂದು ಸುದ್ದಿಯನ್ನು ಬರೆದು ಕಳುಹಿಸಿ ಕೊಡಿ.

**ವಿವರ ಕಳುಹಿಸುವ ವಿಧಾನ :**

8884452699

policenewsreporter@gmail.com

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

080-23588510

ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ



# ಕನ್ನಡವೇ ಸತ್ಯ
# ಕನ್ನಡವೇ ನಿತ್ಯ

## ಭಾಷಾ ವೈವಿಧ್ಯತೆಯಲ್ಲಿ
## ಕನ್ನಡ ಕುಸುಮ ಅರಳಲಿ



" ಜಗತ್ತಿನ ಪುರಾತನ ಭಾಷೆಗಳಲ್ಲಿ ಒಂದಾಗಿರುವ ಕನ್ನಡ ಭಾಷೆ ಕರ್ನಾಟಕದಲ್ಲಿರುವ ಎಲ್ಲರ ಸವಿಗನ್ನಡವಾಗಲಿ. ಕರುನಾಡಿನಲ್ಲಿ ನೆಲೆಸಿರುವ ಎಲ್ಲರೂ ಕನ್ನಡಿಗರು. ಮನೆಯ ಭಾಷೆ ಯಾವುದೇ ಇರಲಿ, ವ್ಯಾವಹಾರಿಕ ಭಾಷೆ ಕನ್ನಡವಾಗಿರಲಿ. ಕಲಿಕೆಯಿಂದ ತಂತ್ರಜ್ಞಾನದವರೆಗೆ ಕನ್ನಡ ಬೆಳೆಯಲಿ. ಅನ್ನದ ಭಾಷೆ, ನೆಲದ ಭಾಷೆ, ಸಂಸ್ಕೃತಿ ಎಲ್ಲವೂ ಕನ್ನಡಮಯವಾಗಲಿ ಎನ್ನುವುದು ಸರ್ಕಾರದ ಆಶಯ ಮತ್ತು ನಮ್ಮ ದೃಢಸಂಕಲ್ಪ. "

– ಸಿದ್ದರಾಮಯ್ಯ, ಮುಖ್ಯಮಂತ್ರಿ



**ಶ್ರೀ ಡಿ. ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು

**ನಾಡಿನ ಸಮಸ್ತ ಜನತೆಗೆ ೬೯ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು**

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

# ಡ್ರಗ್ಸ್ ಬೇಡ, ಓದಿನಲ್ಲಿ ನಶೆ ಕಂಡುಕೊಳ್ಳಿ: ಕಾಲೇಜು ವಿದ್ಯಾರ್ಥಿಗಳಿಗೆ ಶಿವಣ್ಣ ಸಲಹೆ

ನಟ ಡಾ. ಶಿವರಾಜ್‌ಕುಮಾರ್ ಅವರ ಭೈರತಿ ರಣಗಲ್ ಸಕ್ಸಸ್ ಸಂಭ್ರಮದಲ್ಲಿ ಜಿಲ್ಲೆಗಳಿಗೆ ಭೇಟಿ ನೀಡುತ್ತಿದ್ದಾರೆ. ಇತ್ತೀಚೆಗೆ ಶಿವಣ್ಣ ಹುಬ್ಬಳ್ಳಿಗೆ ಬಂದಿದ್ದರು. ಅಲ್ಲಿ ನಡೆದ ಮಾದಕ ವ್ಯಸನ ಜಾಗೃತಿ ಅಭಿಯಾನದಲ್ಲಿ ಶಿವರಾಜಕುಮಾರ್ ಭಾಗಿಯಾಗಿದ್ದರು.

ಹುಬ್ಬಳ್ಳಿಯ ಬಿವಿಬಿ ಕಾಲೇಜಿನಲ್ಲಿ ನಡೆದ ಅಭಿಯಾನಕ್ಕೆ ಬಲೂನ್ ಹಾರಿಸುವ ಮೂಲಕ ಶಿವರಾಜಕುಮಾರ್ ಚಾಲನೆ ನೀಡಿದರು. ಹುಬ್ಬಳ್ಳಿ-ಧಾರವಾಡದಲ್ಲಿ ಕಾಲೇಜು ವಿದ್ಯಾರ್ಥಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಶಿವಣ್ಣ, ನಿಮ್ಮ ಕನಸುಗಳನ್ನು ಸಾಧಿಸಲು ವ್ಯಸನಿಯಾಗಿರಿ, ಮಾದಕ ವಸ್ತುಗಳಿಗಲ್ಲ ಎಂದು ಪ್ರಬಲ ಸಂದೇಶವನ್ನು ಹಂಚಿಕೊಂಡರು.

ಯುವ ಮನಸ್ಸುಗಳು ದೊಡ್ಡ ಕನಸುಗಳನ್ನು ಕಾಣಲು ಪ್ರೋತ್ಸಾಹಿಸಿದ ಶಿವರಾಜಕುಮಾರ್ ಅವರು ಜೀವನದ ಅನೇಕ



ಅವಕಾಶಗಳನ್ನು ಅಳವಡಿಸಿಕೊಳ್ಳುವ ಮಹತ್ವವನ್ನು ಒತ್ತಿ ಹೇಳಿದರು. ಓದುವುದರಲ್ಲಿ ನಶೆ ಕಂಡುಕೊಳ್ಳಿ, ಮಾದಕ ವಸ್ತುವಿನ ನಶೆ ಬೇಡ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದ್ದಾರೆ. ಪ್ರತಿ ಅಭಿಮಾನಿಯನ್ನು ಸ್ನೇಹಿತನನ್ನಾಗಿ ನೋಡುತ್ತೇನೆ. ಅಭಿಮಾನಿ ಅಂತ ನೋಡಿದರೆ ಬೇರೆ ರೀತಿ ನೋಡ್ಬೇಕಾಗುತ್ತೆ. ಡ್ರಗ್ಸ್‌ನಿಂದ ನಾವು ದೂರ ಇರಬೇಕು. ಶಬ್ದವೇದಿಯಲ್ಲಿ ಅಪ್ಪಾಜಿ ಅದ್ಭುತವಾಗಿ ಹೇಳಿದ್ದಾರೆ. ಹುಟ್ಟು ಅನ್ನೋದು ಒಂದು ಗಿಫ್ಟ್, ಅದನ್ನ ಕಾಪಾಡಿಕೊಳ್ಳಬೇಕು ಎಂದಿದ್ದಾರೆ. ನಶೆಯನ್ನು ಓದುವುದರಲ್ಲಿ ಹುಡುಕಿ, ಗೆಳೆತನದಲ್ಲಿ ಹುಡುಕಿ, ಬೇರೆ ಎಲ್ಲದರಲ್ಲೂ ನಶೆ ಇದೆ. ಮಾದಕ ವಸ್ತುವಿಗೆ ನಾವು ಯಾವಾಗ ದಾಸರಾಗ್ತೇವೋ ಲೈಫ್ ಹಾಳಾಗುತ್ತೆ. ಯಾರು ಮಾಡ್ತಾರೆ, ಅವರನ್ನ ಪೊಲೀಸರಿಗೆ ಹಿಡಿದುಕೊಡಿ ಎಂದರು.

ಆರೋಗ್ಯವಂತ ಸಮಾಜವನ್ನು ರಚಿಸುವಲ್ಲಿ ಯುವಕರ ಜವಾಬ್ದಾರಿಯ ಮಹತ್ವದ ಬಗ್ಗೆ ತಿಳಿಸಿದ ಶಿವಣ್ಣ ಪೋಷಕರು ತಮ್ಮ ಮಕ್ಕಳಿಗಾಗಿ ಕಾಣುವ ಕನಸುಗಳು ಮತ್ತು ಆಕಾಂಕ್ಷೆಗಳನ್ನು ಪರಿಗಣಿಸುವಂತೆ ಒತ್ತಾಯಿಸಿದರು. ಡ್ರಗ್ಸ್ ಬೇಡ ಎಂದು ಹೇಳಿ, ನಿಮ್ಮ ಕುಟುಂಬ ಮತ್ತು ಸಮಾಜದ ಕಡೆಗೆ ಗಮನ ಹರಿಸಿರಿ ಎಂದರು. ತಮ್ಮ ಕಾಲೇಜು ದಿನಗಳ ಬಗ್ಗೆ ಸ್ಮರಿಸಿದ ಶಿವಣ್ಣ ತಮ್ಮ ಚೊಚ್ಚಲ ಆನಂದ್ ಸಿನಿಮಾದ 25ನೇ ದಿನದ ಸಂಭ್ರಮಾಚರಣೆಯಲ್ಲಿ ಇಲ್ಲಿಗೆ ಭೇಟಿ ನೀಡಿದ ಬಗ್ಗೆ ನೆನಪಿಸಿಕೊಂಡರು. ಇಲ್ಲಿಗೆ ಬರುವುದು ಯಾವಾಗಲೂ ನನ್ನ ವಿದ್ಯಾರ್ಥಿ ಜೀವನವನ್ನು ನೆನಪಿಸುತ್ತದೆ, ಎಂದು ಅವರು ಉತ್ಸಾಹದಿಂದ ಹೇಳಿದರು. ಡ್ರಗ್ಸ್ ಮಾರುವ ಕಿಡಿಗೇಡಿಗಳ ಬಗ್ಗೆ ಅಧಿಕಾರಿಗಳಿಗೆ ವರದಿ ಮಾಡುವ ಮೂಲಕ ಮಾದಕ ದ್ರವ್ಯಗಳ ಹಾವಳಿಯನ್ನು ಸಕ್ರಿಯವಾಗಿ ಎದುರಿಸಲು ಶಿವಣ್ಣ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ನಮಗಿಂತ ಹೆಚ್ಚಾಗಿ, ನೀವು ಈ ಬೆದರಿಕೆಯನ್ನು ಎದುರಿಸಬಹುದು. ಹಾನಿಕಾರಕ ವಸ್ತುಗಳನ್ನು ಮಾರಾಟ ಮಾಡಲು ಪ್ರಯತ್ನಿಸುವ ಯಾರೇ ಆದರೂ ಚಿಂತೆಯಿಲ್ಲ, ಅವರ ವಿರುದ್ಧ ನಿಲ್ಲಿರಿ ಎಂದರು. ಆರೋಗ್ಯವಂತ ಸಮಾಜವನ್ನು ರಚಿಸುವಲ್ಲಿ ಯುವಕರ ಜವಾಬ್ದಾರಿಯನ್ನು ನಟ ಒತ್ತಿ ಹೇಳಿದರು. ಯಾರಾದರೂ ಡ್ರಗ್ಸ್‌ಗೆ ಬಲಿಯಾದರೆ, ಜೀವನದ ಸೌಂದರ್ಯವು ಮಸುಕಾಗಲು ಪ್ರಾರಂಭಿಸುತ್ತದೆ ಎಂದು ಅವರು ಹೇಳಿದರು. ☯

# ಸೆನ್ಸಾರ್ ಪಾಸಾದ ಬರ್ಗೆಟ್ ಬಸ್ಯಾ



ಬಹುತೇಕ ಹೊಸಬರೇ ಸೇರಿಕೊಂಡು ಸಿದ್ದಪಡಿಸುತ್ತಿರುವ ಕಾಮಿಡಿ ಕಥಾಹಂದರ ಹೊಂದಿರುವ ಚಿತ್ರ ಬರ್ಗೆಟ್ ಬಸ್ಯಾ. ಇತ್ತೀಚೆಗಷ್ಟೇ ಈ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಚಿತ್ರಕ್ಕೆ ಪ್ರಶಂಸೆ ವ್ಯಕ್ತಪಡಿಸಿದೆ. ಯರ್‍ರಂರೆಡ್ಡಿ ಪಿಕ್ಚರ್ಸ್ ಸಂಸ್ಥೆ ಅಡಿಯಲ್ಲಿ ವೈ. ನಾಗಾರ್ಜುನ ರೆಡ್ಡಿ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಬಳ್ಳಾರಿ ಮೂಲದ ನಾಗಾರ್ಜುನ ರೆಡ್ಡಿ ಅವರು ಈ ಚಿತ್ರದ ಮೂಲಕ ಮೊದಲಬಾರಿಗೆ ಕನ್ನಡ ಚಿತ್ರವೊಂದರ ನಿರ್ಮಾಣಕ್ಕೆ ಕೈಹಾಕಿದ್ದಾರೆ.ರಿಶಿ ಹಿರೇಮಠ್ ಅವರು ಈ ಚಿತ್ರದ ನಿರ್ದೇಶಕರು, ಇದೇ ಮೊದಲಬಾರಿಗೆ ಈ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜೊತೆಗೆ ಚಿತ್ರದ ನಾಯಕನಾಗಿಯೂ ಸಹ ಅಭಿನಯಿಸುತ್ತಿದ್ದಾರೆ. ರಿಶಿ ಹಿರೇಮಠ್ ಅವರೇ ನಿರ್ದೇಶನದ ಜತೆಗೆ ಚಿತ್ರದ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. ಡೈರಕ್ಷನ್ ಕೋರ್ಸ್ ಮುಗಿಸಿದ ನಂತರ ಕೆಲವು ನುರಿತ ನಿರ್ದೇಶಕರ ಬಳಿ ಕೆಲಸ ಕಲಿತುಕೊಂಡು, ಒಂದಷ್ಟು ಕಿರುಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ ರಿಶಿ ಅವರ ನಿರ್ದೇಶನದ ಪ್ರಥಮ ಚಿತ್ರವಿದು. ನಟಿ ಸಂಗೀತ.ಎನ್. ಸ್ವಾಮಿ ಅವರು ಈ ಚಿತ್ರದಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ, ಸಂಗೀತಾ ಅವರೂ ಸಹ ಈ ಚಿತ್ರದ ಮೂಲಕ ನಾಯಕಿಯಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಕಂಡಕಂಡ ಹುಡುಗಿಯರನ್ನೆಲ್ಲ ಲವ್ ಮಾಡಿ ಎಂದು ಬರ್ಗೆಟ್ಟವನಂತೆ ಹುಡುಗಿಯರ ಹಿಂದೆ ಹೋಗುವ ನಾಯಕ ಬಸ್ಯಾ ಅವರನ್ನು ಹಿಂಬಾಲಿಸುವ ಬಗ್ಗೆ ಈ ಸಿನಿಮಾದಲ್ಲಿ ಹಾಸ್ಯಮಯವಾಗಿ ಹೇಳಲಾಗಿದೆ. ಬರೀಬರಿ ನಲವತ್ತು ಜನ ಹುಡುಗಿಯರು ಬಸ್ಯನ ಜೀವನದಲ್ಲಿ ಹೇಗೆಲ್ಲ ಹಾದು ಹೋಗುತ್ತಾರೆ ಎಂಬುದನ್ನು ಹಾಸ್ಯಮಯವಾಗಿ ಈ ಚಿತ್ರದಲ್ಲಿ ತೋರಿಸಲಾಗಿದೆ, ಲವ್, ಪ್ರೀತಿಯ ಸುತ್ತ ಹೆಣೆದಿರುವ ಕಥೆ ಈ ಚಿತ್ರದಲ್ಲಿದೆ. ಬರ್ಗೆಟ್ ಬಸ್ಯಾ ಚಿತ್ರದ ಚಿತ್ರೀಕರಣವನ್ನು ಬೆಂಗಳೂರು, ತೀರ್ಥಹಳ್ಳಿ, ಕೊಪ್ಪ, ಬೆನಗನಹಳ್ಳಿಯ ಸುಂದರ ತಾಣದಲ್ಲಿ ನಡೆಸಲಾಗಿದೆ. ಪ್ರಕಾಶ್. ಜಿ. ಅವರ ಸಾಹಿತ್ಯಕ್ಕೆ ಸಿದ್ದಾರ್ಥ್ ಕಾಮತ್ ಅವರು ಸಂಗೀತ ಸಂಯೋಜಿಸಿದ್ದಾರೆ. ಶಾಮ್ ಸಾಲ್ವಿನ್ ಅವರ ಛಾಯಾಗ್ರಹಣ, ಸಿದ್ದು ದಳವಾಯಿ ಅವರ ಸಂಕಲನ ಈ ಚಿತ್ರಕ್ಕಿದೆ. ☯

# ‘ಎಕ್ಕ’ದಲ್ಲಿ ಯುವ-ಸಂಪದ



ರೈಡರ್ ಚಿತ್ರದಲ್ಲಿ ಪ್ರಮುಖ ಪಾತ್ರದ ಮೂಲಕ ‘ಸ್ಯಾಂಡಲ್ ವುಡ್’ಗೆ ಪಾದಾರ್ಪಣೆ ಮಾಡಿದ ನಟಿ ಸಂಪದಾ ಅವರು, ಪಿಆರ್‌ಕೆ ಪ್ರೊಡಕ್ಷನ್ಸ್, ಜಯಣ್ಣ ಫಿಲಮ್ಸ್ ಮತ್ತು ಕೆಆರ್‌ಜಿ ಸ್ಟುಡಿಯೋಸ್ ನಿರ್ಮಿಸುತ್ತಿರುವ ಎಕ್ಕ ಚಿತ್ರದಲ್ಲಿ ಯುವರಾಜ್‌ಕುಮಾರ್ ಅವರಿಗೆ ಜೋಡಿಯಾಗಿ ನಟಿಸುತ್ತಿದ್ದಾರೆ.

ಬೆಂಕಿ ಚಿತ್ರದಲ್ಲಿ ನಾಯಕಿಯಾಗಿ ನಟಿಸಿರುವ ಸಂಪದ, ಪ್ರಜ್ವಲ್ ದೇವರಾಜ್ ನಟಿಸುತ್ತಿರುವ ಹಾಗೂ ಗುರುದತ್ತ ಗಾಣಿಗ ಅವರ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಕರಾವಳಿ ಚಿತ್ರದಲ್ಲಿಯೂ ನಟಿಸುತ್ತಿದ್ದಾರೆ.

ಯುವರಾಜ್‌ಕುಮಾರ್ ಅವರೊಂದಿಗೆ ನಟಿಸಲು ಬಹಳ ಉತ್ಸುಕಳಾಗಿದ್ದೇನೆ. 2024 ನನಗೆ ನಿಧಾನವಾಗಿರಬಹುದು, ಆದರೆ, ಇದು ಉತ್ತಮ ವರ್ಷವಾಗಿದೆ. ಎರಡು ಉತ್ತಮ ಚಿತ್ರದಲ್ಲಿ ನಟಿಸುತ್ತಿದ್ದೇನೆ. ಚಿತ್ರರಂಗದಲ್ಲಿ ಮುಂದುವರೆಯಲು ನನಗೆ ಬೇಕಾಗಿರುವುದು ಇಷ್ಟೇ. ಎಕ್ಕ ನನ್ನ ನಾಲ್ಕನೇ ಚಿತ್ರವಾಗಿದ್ದು, ಪಾತ್ರಗಳ ಆಯ್ಕೆಯಲ್ಲಿ ಬಹಳ ಯೋಚಿಸಿ, ಆಯ್ಕೆ ಮಾಡುತ್ತೇನೆಂದು ನಟಿ ಸಂಪದ ಅವರು ಹೇಳಿದ್ದಾರೆ.



ಚಿತ್ರ ತಂಡದೊಂದಿಗೆ ಮಾತುಕತೆ ನಡೆಸಿದ್ದು ಉತ್ತಮ ಅನುಭವ ನೀಡಿದೆ. ಚಿತ್ರದಲ್ಲಿ ಇಬ್ಬರು ನಾಯಕ ನಟಿಯರಿರುವುದರಿಂದ ಪಾತ್ರ ಆಯ್ಕೆ ಬಗ್ಗೆ ಚಿಂತೆಯಿತ್ತು. ಆದರೆ, ನಂತರ ನಟಿಸಲು ನಿರ್ಧರಿಸಿದೆ. ನನ್ನ ಪಾತ್ರದ ಬಗ್ಗೆ ನನಗೆ ಸಂತೋಷವಿದೆ ಎಂದು ತಿಳಿಸಿದ್ದಾರೆ. ಇನ್ನು ಟಾಲಿವುಡ್‌ಗೂ ನಟಿ ಸಂಪದ ಅವರು ಪಾದಾರ್ಪಣೆ ಮಾಡುತ್ತಿದ್ದು, ಶ್ರೀ ಲಕ್ಷ್ಮಿ ವೆಂಕಟೇಶ್ವರ ಸಿನಿಮಾಸ್ ನಿರ್ಮಿಸಿದ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ನನ್ನ ಭಾಗದ ಚಿತ್ರೀಕರಣ ಪೂರ್ಣಗೊಂಡಿದೆ. ಕೆಲವು ಭಾಗಗಳ ಚಿತ್ರಕರಣ ಬಾಕಿಯಿದ್ದು, ಅದೂ ಮುಂದಿನ ತಿಂಗಳು ಪೂರ್ಣಗೊಳ್ಳಲಿದೆ. ಈ ಚಿತ್ರದಲ್ಲಿ ಕೆಲಸ ಮಾಡಿದ ಅನುಭವ ಕೂಡ ಅದ್ಭುತವಾಗಿದೆ ಎಂದು ಹೇಳಿದ್ದಾರೆ. ಎಕ್ಕ ಚಿತ್ರ ಯುವರಾಜ್‌ಕುಮಾರ್ ಅವರು ನಟಿಸುತ್ತಿರುವ ಎರಡನೇ ಚಿತ್ರವಾಗಿದ್ದು, ಮೂರು ದಿಗ್ಗದ ಸಿನಿಮಾ ನಿರ್ಮಾಣ ಸಂಸ್ಥೆಗಳು ಚಿತ್ರ ನಿರ್ಮಿಸುತ್ತಿದೆ. ಇಂದು ಚಿತ್ರದ ಮುಹೂರ್ತ ನಡೆಯುತ್ತಿದ್ದು, ಮುಂದಿನ ತಿಂಗಳಲ್ಲಿ ನಟಿ ಸಂಪದ ಅವರು ಚಿತ್ರೀಕರಣದಲ್ಲಿ ಭಾಗಿಯಾಗುತ್ತಿದ್ದಾರೆ. ಸಂಪದ ಜೊತೆಗೆ, ಚಿತ್ರದಲ್ಲಿ ಅತುಲ್ ಕುಲಕರ್ಣಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಚಿತ್ರಕ್ಕೆ ಚರಣ್ ರಾಜ್ ಅವರ ಸಂಗೀತ, ಸತ್ಯ ಹೆಗ್ಡೆ ಅವರ ಛಾಯಾಗ್ರಹಣ ಮತ್ತು ದೀಪು ಎಸ್. ಕುಮಾರ್ ಅವರ ಸಂಕಲನವಿದ್ದು ಚಿತ್ರದ ನಿರ್ಮಾಪಕರು 2025ರ ಮಧ್ಯದಲ್ಲಿ ಚಿತ್ರ ಬಿಡುಗಡೆ ಮಾಡುವ ಗುರಿಯನ್ನು ಹೊಂದಿದ್ದಾರೆ, ಚಿತ್ರದ ಚಿತ್ರೀಕರಣ ಇಂದಿನಿಂದ ಪ್ರಾರಂಭವಾಗಲಿದೆ. ☯

Vol. 40 No. 26 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com